ಅಧ್ಯಾತ್ಮಗ್ರಂಥಾವಳಿ

ಶ್ರೀಗೋವರ್ಧನಮಠದ ಜಗದ್ಗುರು ಸ್ವಾಮಿಗಳ
ವಿಚಾರಸರಣಿಯನ್ನು ಹಿಂಬಾಲಿಸಿದ

# ವೇದಾಂತದ ರೂಪರೇಖೆ

ಲೇಖಕರು :
ಹೊಸಕೆರೆ ಚಿದಂಬರಯ್ಯ

ಕ್ರಮಾಂಕ : 267

ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ - 573 211
ದೂರವಾಣಿ: 08175-273820
www.adhyatmaprakasha.org.
email: secretary@adhyatmaprakasha.org
ಬೆಂಗಳೂರು ಶಾಖೆ :
ನಂ. 68, (ಹೊಸ ನಂ. 6), ಎ.ಪಿ.ಕೆ. ರಸ್ತೆ, 2ನೇ ಬ್ಲಾಕ್,
ತ್ಯಾಗರಾಜನಗರ, ಬೆಂಗಳೂರು - 28 ದೂ : 2676 5548
email: shankara.bhaskara@gmail.com

2015

**VEDANTHADA RUPAREKHE:** Articles written by Sri Hosakere Chidambarayya. Originally published by S.S.N. Book Depot, Bengaluru: Now Printed by Adhyathma Prakasha Karyalaya, Holenarasipur - 573 211.

**Phone : 08175-273820**
website : www.adhyatmaprakasha.org.
email : secretary@adhyatmaprakasha.org

ಮೊದಲನೆಯ ಮುದ್ರಣ : 1936 (ಎಸ್.ಎಸ್.ಎನ್. ಬುಕ್ ಡಿಪೊ, ಬೆಂ.)
ಎರಡನೆಯ ಮುದ್ರಣ : 1954 ( '' '' )
ಮೂರನೆಯ ಮುದ್ರಣ : 2015 (ಅಧ್ಯಾತ್ಮ ಪ್ರಕಾಶ ಕಾರ್ಯಾಲಯ); 1000 ಪ್ರತಿಗಳು
ಮುದ್ರಣ ಕಾಗದ : 70 GSM NS Maplitho
ಪುಟಗಳು : x + 40

**ಬೆಲೆ : ರೂ. 20 / -**

**ಪ್ರತಿಗಳು ದೊರೆಯುವ ಸ್ಥಳ :**
**ಅಧ್ಯಾತ್ಮಪ್ರಕಾಶಕಾರ್ಯಾಲಯ**
ಹೊಳೆನರಸೀಪುರ - 573 211 ದೂರವಾಣಿ: 08175-273820
**ಬೆಂಗಳೂರು ಶಾಖೆ :**
ತ್ಯಾಗರಾಜನಗರ, ಬೆಂಗಳೂರು - 560 028
ದೂ : 080-26765548

**ಅಕ್ಷರ ಜೋಡಣೆ ಮತ್ತು ಮುದ್ರಣ ಸ್ಥಾನ:**
**ಶ್ರೀರಾಮ ಪ್ರಿಂಟರ್ಸ್**
ನಂ. 47, ಬಿ.ಕೆ.ಎಂ. ಕಾಂಪ್ಲೆಕ್ಸ್, ಸುಪ್ರಜಾನಗರ,
ಚುಂಚಘಟ್ಟ ಮುಖ್ಯರಸ್ತೆ, ಕೋಣನಕುಂಟೆ,
ಬೆಂಗಳೂರು - 560 062 ದೂ.: 98453 46197

# ಮುನ್ನುಡಿ

## (ಹೊಸಕೆರೆ ಚಿದಂಬರಯ್ಯನವರು 2ನೇ ಮುದ್ರಣಕ್ಕೆ ಬರೆದದ್ದು)

ಬ್ರಹ್ಮಸೂತ್ರಗಳ ಶಾಂಕರಭಾಷ್ಯದಮೇಲೆ ಒಂಬತ್ತು ವ್ಯಾಖ್ಯಾನಗಳನ್ನು ಒಳಗೊಂಡ ಒಂದು ಸಂಸ್ಕೃತ ಪುಸ್ತಕಕ್ಕೆ ಶ್ರೀ ಗೋವರ್ಧನ ಮಠಾಧೀಶ ಶ್ರೀಮತ್ಪರಮಹಂಸೇತ್ಯಾದಿ ಬಿರುದಾಂಕಿತ ಶ್ರೀ ಭಾರತೀ ಕೃಷ್ಣತೀರ್ಥಸ್ವಾಮಿ ಪಾದರು ಇಂಗ್ಲೀಷಿನಲ್ಲಿ ಬರೆದಿದ್ದ ಪೀಠಿಕೆಯನ್ನು ನಾನು ಒಂದುದಿನ ಬರೀ ಕುತೂಹಲದಿಂದ ಓದುವದಕ್ಕೆ ಮೊದಲು ಮಾಡಿದೆನು. ಅದು ನನ್ನನ್ನು ಕೊನೆಯವರೆಗೂ ಸೆಳೆದುಕೊಂಡು ಹೋಯಿತು. ಅದನ್ನು ನಾನು ವೇದಾಂತಗೋಷ್ಠಿಯಲ್ಲಿ ನನ್ನ ಮಿತ್ರರ ಮುಂದೆ ಕೂಡ ಬಿಚ್ಚಿಟ್ಟೆನು. ಆಗ ಅವರು ಹೋಗಿರುವ ದಾರಿಯೂ ಅವರ ಕೆಲವು ಯುಕ್ತಿಗಳೂ ಉದಾಹರಣೆಗಳೂ ನನ್ನ ಮನಸ್ಸನ್ನು ಕಚ್ಚಿಹಿಡಿದುಕೊಂಡವು. ಅವುಗಳ ಸವಿಯನ್ನು ಕನ್ನಡಿಗರಿಗೆಲ್ಲ ತೋರಿಸಬೇಕೆಂದು ಅವುಗಳಲ್ಲಿ ನನ್ನ ಮನಸ್ಸನ್ನು ಸೆಳೆದ ಕೆಲವು ಅಭಿಪ್ರಾಯಗಳನ್ನು ನಾನು ಕೃತಜ್ಞತೆಯಿಂದ ಅಗಿದು ಅರಗಿಸಿಕೊಂಡು ಇಲ್ಲಿ ಈ ಗ್ರಂಥದ ರೂಪದಲ್ಲಿ ಎರಕವನ್ನು ಹೊಯ್ದಿರುವೆನು.

ಈ ಗ್ರಂಥವು ಶಾಸ್ತ್ರದ ಮಾತುಗಳ ಮತ್ತು ಶಾಸ್ತ್ರಾರ್ಥಗಳ ಗದ್ದಲದಿಂದ ಸೆಕೆಯನ್ನುಂಟುಮಾಡದೆ ಅನುಭವಕ್ಕೆ ಹೊಂದುವ ಯುಕ್ತಿಗಳ ಸುರಿಮಳೆಯಿಂದ ತಂಪಾಗುವಂತೆ ಶಾಸ್ತ್ರದ ತಾತ್ಪರ್ಯವನ್ನು ಮನೋಹರವಾಗಿ ತಿಳಿಸತಕ್ಕದ್ದಾಗಿ ಇರುವದು. ಆದರೂ ಜಗತ್ತನ್ನೆಲ್ಲ ತೂಕಕ್ಕೆ ಹಾಕಿನೋಡುವ ಈ ಗ್ರಂಥದ ವಿಚಾರವೇ ಬಹು ಗಂಭೀರವಾದ್ದರಿಂದ ಇದು ಕಟ್ಟುಕತೆಗಳಂತೆ ಓದಿದೊಡನೆ ಗುಳಕ್ಕನೆ ಗಂಟಲೊಳಕ್ಕೆ ಇಳಿದು ಬಿಟ್ಟೀತೆಂದು ನಾನು ಹೇಳಲಾರೆನು. ಏಕೆಂದರೆ: ಇದು ಇಂದ್ರಿಯಗಳಿಗೂ ಮನಸ್ಸಿಗೂ ಸಾಮಾನ್ಯವಾಗಿ ಗೋಚರವಾಗದಂಥ ಶಾಸ್ತ್ರವಿಷಯ. ಇದನ್ನು ಒಮ್ಮುಖವಾದ ಮನಸ್ಸಿನಿಂದ ಸಾವಕಾಶವಾಗಿ ಓದಬೇಕು. ಇದರ ಒಂದೊಂದಗುಳು ಹೊಟ್ಟೆಯನ್ನು ಹೊಕ್ಕಷ್ಟೂ ಮನಸ್ಸು ಹುರಿಗೊಳ್ಳುವದು.

ಜೀವ, ಈಶ್ವರ, ಜಗತ್ತು- ಈ ಮೂರರ ಬಣ್ಣವನ್ನು ಚೆನ್ನಾಗಿ ಒರೇಹಚ್ಚಿ ನೋಡುವದಕ್ಕೆ ಇದು ಒಳ್ಳೆ ಒರೆಗಲ್ಲು. ಎರಡನೆಯದೆಂಬ ಭಾವನೆಯನ್ನು ಎಲ್ಲ ಕಡೆಯಿಂದಲೂ ಹಾರಿಸುವ ವಿಷಯದಲ್ಲಿ ಇದು ಸುಂಟರಗಾಳಿ. ದುಃಖಮಯವಾದ

ಜಗತ್ತಿನಲ್ಲಿದ್ದೇ ದುಃಖದ ಸೋಂಕಿಲ್ಲದಿರುವ ಸಿದ್ಧಿಯುಂಟಾಗುವದಕ್ಕೆ ಇದು ಮಹಾಮಂತ್ರ. ನರನನ್ನು ನಾರಾಯಣನನ್ನಾಗಿ ಮಾಡುವ ಇದರ ಸಾಮರ್ಥ್ಯವು ಇದನ್ನು ಅರಗಿಸಿಕೊಂಡವರಲ್ಲಿ ಎದ್ದು ಕಾಣುವದು. ಈ ಫಲವನ್ನು ಸೂರೆಗೊಳ್ಳುವದಕ್ಕೆ ವಾಚಕರು ಉತ್ಸಾಹಗೊಳ್ಳಬೇಕು.

ವೇದಾಂತವೆಂಬುದೆಲ್ಲ ಬರೀ ಕುರುಡುನಂಬಿಕೆಯ ಮಾತೆಂದು ಅದನ್ನು ಉದಾಸೀನಮಾಡಿ ಭೌತಿಕಶಾಸ್ತ್ರವು ಮಾತ್ರ ಯುಕ್ತಿಗೆ ಹೊಂದುವ ಮಾತೆಂದು ಅದನ್ನು ಹೆಚ್ಚು ಆದರಿಸುವ ಪ್ರವೃತ್ತಿಯು ಜನತೆಯಲ್ಲಿ ಕಾಣುತ್ತಿದೆ. ಭೌತಿಕಶಾಸ್ತ್ರವು ಯುಕ್ತಿಗೆ ಹೊಂದುವದೆಂಬ ಮಾತಿನ ಪ್ರತ್ಯಕ್ಷರವೂ ನಿಜ. ಆದ್ದರಿಂದ ಅದನ್ನು ಆದರಿಸುವದು ಯೋಗ್ಯವೆ. ವೇದಾಂತವೆಂಬುದೆಲ್ಲ ಬರೀ ಕುರುಡುನಂಬಿಕೆಯ ಮಾತೆಂದು ತಿಳಿದಿರುವದು ಮಾತ್ರ ಸರಿಯಲ್ಲ. ಭೌತಿಕಶಾಸ್ತ್ರದ ಯುಕ್ತಿಗಳು ಆಗಾಗ ಬದಲಾಗುತ್ತಿರುವಾಗ ವೇದಾಂತದಲ್ಲಿರುವ ಯುಕ್ತಿಗಳ ಬೇರುಗಳು ಪಾತಾಲದವರೆಗೆ ಬೆಳೆದಿರುವ ಈಶ್ವರನ ಪ್ರಾಣಲಿಂಗದಂತೆ ಅಲ್ಲಾಡಿಸುವದಕ್ಕಾಗದಂತಿರುವವೆಂದು ಈ ಗ್ರಂಥವನ್ನು ಆದರದಿಂದ ಓದುವವರು ಮನಗಾಣುವರು. ಆದ್ದರಿಂದ ಯುಕ್ತಿಗಳಿಂದ ಕೂಡಿರುವ ವಿಷಯದಲ್ಲಿ ಇದು ಭೌತಿಕಶಾಸ್ತ್ರಕ್ಕೆ ಎಳ್ಳಷ್ಟು ಕಡಿಮೆಯದಲ್ಲ. ಇದರ ತಿರುಳಿನ ಬೆಲೆಯಂತು ಭೌತಿಕಶಾಸ್ತ್ರಕ್ಕಿಂತ ಹೆಚ್ಚು ಆದರಣೀಯವಾದದ್ದು. ಗ್ರಂಥದ ಆದಿಯಲ್ಲಿಯೇ ಕೊಟ್ಟಿರುವ ಪಾಶ್ಚಾತ್ಯರಿಬ್ಬರ ಮಾತುಗಾರಿಕೆಯು ಈ ಅಭಿಪ್ರಾಯವನ್ನು ಪೋಷಿಸುವದಕ್ಕೆ ಸಾಕು.

ಚೆನ್ನಾಗಿ ಕಣ್ಣುಬಿಟ್ಟು ನೋಡಿದರೆ ಭೌತಿಕಶಾಸ್ತ್ರವು ಯಾವದನ್ನು ಹಿಡಿದುಕೊಂಡು ತನ್ನ ವಿಚಾರವನ್ನು ನಡೆಸುವದೊ ವೇದಾಂತಶಾಸ್ತ್ರವೂ ಅದನ್ನೆ ಹಿಡಿದುಕೊಂಡು ತನ್ನ ವಿಚಾರವನ್ನು ನಡೆಸುವದು. ಭೌತಿಕಶಾಸ್ತ್ರಗಳು ಜಗತ್ತೆಂಬುದೊಂದು ನಿಜವಾದದ್ದಾಗಿ ಇರುವದೆಂದು ಮೊದಲೇ ಇಟ್ಟುಕೊಂಡು ಅದರಲ್ಲಿ ಕಾಣುವ ಶಕ್ತಿವಿಶೇಷಗಳ ಸ್ವರೂಪವನ್ನು ಕುರಿತು ವಿಚಾರ ಮಾಡುವವು. ವೇದಾಂತಶಾಸ್ತ್ರವು ಜಗತ್ತಿನ ಇರುವಿಕೆಯ ಸ್ವರೂಪವನ್ನೆ ಒರೇಹಚ್ಚುವದಕ್ಕೆ ಹೊರಟಿರುವದು. ಭೌತಿಕಶಾಸ್ತ್ರದ ವಿಚಾರವು ಕೊನೆಮುಟ್ಟಿಯೂ ಇಲ್ಲ; ಕೊನೆಮುಟ್ಟುವ ಹಾಗೂ ಇಲ್ಲ. ವೇದಾಂತಶಾಸ್ತ್ರವು ತನ್ನ ವಿಚಾರವನ್ನು ಕೊನೆಗಾಣಿಸಿ ಜಗತ್ತಿನ ಕೊರಳಿಗೆ 'ಸ್ವತಂತ್ರವಾಗಿಲ್ಲದಿರುವ ಇದರ ಇರುವಿಕೆಯು ಬ್ರಹ್ಮವನ್ನವಲಂಬಿಸಿರುವ'ದೆಂದು ಅದರ ಇರುವಿಕೆಯ ಬೆಲೆಯ ತಾಳಿಯನ್ನು ಕಟ್ಟಿರುವದು. ಭೌತಿಕಶಾಸ್ತ್ರಕ್ಕೆ ಜಗತ್ತಿನಲ್ಲಿರುವ ಶಕ್ತಿವಿಶೇಷಗಳ ಸ್ವರೂಪದ ವಿಚಾರವು

ಮುಖ್ಯ. ವೇದಾಂತಶಾಸ್ತ್ರಕ್ಕೆ ಜಗತ್ತಿಗೂ ಕಾರಣವಾದ ಬ್ರಹ್ಮವನ್ನು ಹೇಳುವ ಸಡಗರದಲ್ಲಿ ಜಗತ್ತಿನ ಇರುವಿಕೆಯ ವಿಚಾರವು ಗೌಣ. ಇಷ್ಟೇ ಭೇದ. ಅಂತು ಎರಡಕ್ಕೂ ಜಗತ್ತೇ ವಿಷಯ. ಆದ್ದರಿಂದ ವೇದಾಂತಶಾಸ್ತ್ರವು ಭೌತಿಕಶಾಸ್ತ್ರದಷ್ಟೇ ಅಲ್ಲದೆ ಹೆಚ್ಚಿನದೂ ಕೂಡ ಆಗಿರುವದೆಂದು ಸ್ಪಷ್ಟವಾಗುವದು. ಆದಕಾರಣ ಎಲ್ಲ ಕನ್ನಡಿಗರೂ ಈ ಗ್ರಂಥಕ್ಕೆ ಆದರದಿಂದ ಉದಾರಾಶ್ರಯವನ್ನು ನೀಡಬೇಕು.

ಬೆಂಗಳೂರು
ಧಾತು - ಶ್ರೀಶಂಕರಜಯನ್ತಿ
1936

**ಹೊಸಕೆರೆ ಚಿದಂಬರಯ್ಯ**

# ಅನಿಸಿಕೆ

## (ಮೂರನೆಯ ಮುದ್ರಣಕ್ಕೆ )

ಕನ್ನಡದಲ್ಲಿ ವೇದಾಂತ ಗ್ರಂಥಗಳು ನೂರಾರಿವೆ. ಸಂಸ್ಕೃತದಿಂದ ಕನ್ನಡಕ್ಕೆ ಅನುವಾದಿಸಿದ ಗ್ರಂಥಗಳಿವೆ. ಸ್ವತಂತ್ರವಾಗಿ ಬರೆದ ಗ್ರಂಥಗಳಿವೆ. ಸಂಸ್ಕೃತ ಗ್ರಂಥಗಳನ್ನು ಆಧಾರವಾಗಿಟ್ಟುಕೊಂಡ ವಿಷಯಾಧಾರಿತ ಗ್ರಂಥಗಳಿವೆ. ವಿಷಯಾಧಾರಿತ ಗ್ರಂಥಗಳಲ್ಲಿ ಮೂಲಗ್ರಂಥವನ್ನು ವಿಷಯ-ವಸ್ತುವಿಗಾಗಿ ಆಕರವಾಗಿ ಪಡೆದಿದ್ದು ನಿರೂಪಣೆ- ವಿಚಾರಧಾರೆಗಳಲ್ಲಿ ಸ್ವತಂತ್ರವಾಗಿ ಬರೆದಿರುತ್ತಾರೆ. ಇಂಥ ಗ್ರಂಥಗಳನ್ನು ಅಳವಡಿಕೆ ಗ್ರಂಥವೆನ್ನಬಹುದು, ಅಥವಾ ಆಧಾರಿತ ಗ್ರಂಥಗಳು ಎನ್ನಬಹುದು. ಎಂಥ ಗ್ರಂಥಗಳಲ್ಲಿ ಮೂಲಗ್ರಂಥದ ಪ್ರೇರಣೆ ವಸ್ತು ಇದ್ದರೂ ಅದನ್ನು ನಿರೂಪಿಸಿದ ರೀತಿಯಲ್ಲಿ ತಮ್ಮ ಸ್ವಂತ ವಿಚಾರಗಳನ್ನು ಬೆರಸಿದ ರೀತಿಯಲ್ಲಿ ನಿಜಕ್ಕೂ ಸ್ವತಂತ್ರ ಗ್ರಂಥವೇ ಆಗಿರುತ್ತದೆ. ಇಂಥ ಒಂದು ಸ್ವತಂತ್ರಗ್ರಂಥ ಹೊಸಕೆರೆ ಚಿದಂಬರಯ್ಯನವರ ವೇದಾಂತ ರೂಪರೇಖೆ ಗ್ರಂಥ. ವಾಮನಾಕಾರ ಗಾತ್ರದಲ್ಲಿ ತ್ರಿವಿಕ್ರಮಾಕಾರ ಸತ್ತ್ವದ ಭಾಷೆಯಲ್ಲಿ ಇರುವುದು ಈ ಗ್ರಂಥ. ಈಶ್ವರ-ಜೀವ- ಜಗತ್ತುಗಳ ಬಗ್ಗೆ ಅದ್ವೈತ- ದ್ವೈತಗಳ ಸಿದ್ಧಾಂತಗಳನ್ನು ತಿಳಿಗನ್ನಡದಲ್ಲಿ ಸಂಸ್ಕೃತದ ವೇದಾಂತದ ಗಂಧವೇ ಇಲ್ಲದಿರುವವರಿಗೂ ಅರ್ಥವಾಗುವಂತೆ ಬರೆದ ಪುಟ್ಟ ಗ್ರಂಥ. ಎಲ್ಲಿಯೂ ಸಂಸ್ಕೃತದ ಉಲ್ಲೇಖಗಳಿಲ್ಲ. ಅನುವಾದಗಳಿಲ್ಲ. ಸ್ವತಂತ್ರ ವಿಚಾರಧಾರೆ ಆಧುನಿಕ ದೃಷ್ಟಾಂತಗಳಿಂದ ವೇದಾಂತದ ಸರಳ ವಿಷಯಗಳನ್ನು ಪ್ರತಿಪಾದಿಸುವ ಗ್ರಂಥ ಇದು.

ಸಹೋದ್ಯೋಗಿಗಳೂ ಸಹಾಧ್ಯಾಯಿಗಳೂ ಬಾಳಿನಾಪ್ತರೂ ಆಗಿದ್ದು ಅವಳಿ ಜವಳಿಗಳಂತೆ ಇದ್ದು ಅಧ್ಯಯನ- ಲೇಖನ- ಗ್ರಂಥ ರಚನೆ- ಪ್ರವಚನಗಳಲ್ಲಿ ಅಪರೂಪದ ಜೋಡಿಗಳಾಗಿದ್ದವರು ಹೊಸಕೆರೆ ಚಿದಂಬರಯ್ಯನವರು ಮತ್ತು ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು. ಸ್ವಾಮಿಗಳು ಚಿದಂಬರಯ್ಯನವರ ವೇದಾಂತ ಗ್ರಂಥಗಳ ಭಾಷೆಯನ್ನು ಕುರಿತು ಹೇಳಿದ ಮಾತು ಗಮನಿಸುವಂಥದ್ದು.

''ಕನ್ನಡ ಗದ್ಯವನ್ನು ಬರೆಯುವಾಗ ಅವರು ಬಳಕೆಗೆ ತಂದಿರುವ ನುಡಿಗಳ ಬೆಡಗು ಎಷ್ಟೋಜನ ತರುಣರನ್ನು ಮುಗ್ಧಗೊಳಿಸಿ ಅವರ ಶೈಲಿಯನ್ನು ಅನುಕರಿಸುವಂತೆ ಹುರಿಗೊಳಿಸಿರುತ್ತದೆ. ಪರಮಾರ್ಥವಿಚಾರದಲ್ಲಿ ಅವರು ಮುಟ್ಟಿದ್ದ ಆಳವೂ ಅಧ್ಯಾತ್ಮ ಸಾಧನೆಯಲ್ಲಿ ಅವರು ತೋರಿಸುತ್ತಿದ್ದ ಶ್ರದ್ಧಾತತ್ಪರತೆಗಳೂ

ತಮಗೆ ತಿಳಿದು ಬಂದ ವಿಷಯಗಳನ್ನು ತಿಳಿಗನ್ನಡದಲ್ಲಿ ಸೂರೆಗೊಟ್ಟ ಅವರ ಪ್ರತಿಭೆಯೂ ಔದಾರ್ಯವೂ ನಮ್ಮನ್ನು ಬೆರಗು ಗೊಳಿಸಿರುತ್ತವೆ.'' ಈ ಮಾತಿಗೆ ಒಳ್ಳೆಯ ನಿದರ್ಶನ. ಈಗ ಮರುಮುದ್ರಣವಾಗಿರುವ ವೇದಾಂತ ರೂಪರೇಖೆ ಗ್ರಂಥವಾಗಿದೆ.

ಈ ಗ್ರಂಥದ ರಚನೆಗೆ ಮೂಲಾಧಾರ ''ಬ್ರಹ್ಮಸೂತ್ರಗಳ ಶಾಂಕರಭಾಷ್ಯದ ಮೇಲೆ 9 ವ್ಯಾಖ್ಯಾನಗಳನ್ನು ಒಳಗೊಂಡ ಒಂದು ಸಂಸ್ಕೃತ ಪುಸ್ತಕಕ್ಕೆ ಶ್ರೀ ಗೋವರ್ಧನ ಮಠದ ಸ್ವಾಮಿಗಳಾಗಿದ್ದ ಶ್ರೀ ಭಾರತೀಕೃಷ್ಣತೀರ್ಥಸ್ವಾಮಿಪಾದರು ಇಂಗ್ಲಿಷಿನಲ್ಲಿ ಬರೆದಿದ್ದ ಪೀಠಿಕೆ. ಈ ಪೀಠಿಕಾಲೇಖನ ಎಷ್ಟು ಗಹನವಾಗಿದೆ ಎಂಬುದನ್ನು ಕುರಿತು ಚಿದಂಬರಯ್ಯನವರು ಹೇಳಿದ್ದು ಹೀಗೆ: ಜಗತ್ತೆನ್ನೆಲ್ಲ ತೂಕಕ್ಕೆ ಹಾಕಿ ನೋಡುವ ಈ ಗ್ರಂಥದ ವಿಚಾರವೇ ಬಹು ಗಂಭೀರವಾದ್ದರಿಂದ ಇದು ಕಟ್ಟುಕತೆಗಳಂತೆ ಓದಿದೊಡನೆ ಗುಳಕ್ಕನೆ ಗಂಟಲೊಳಕ್ಕೆ ಇಳಿದು ಬಿಟ್ಟೀತೆಂದು ನಾನು ಹೇಳಲಾರೆ'' ಆದ್ದರಿಂದ ಒಮ್ಮುಖವಾದ ಮನಸ್ಸಿನಿಂದ ಸಾವಕಾಶವಾಗಿ ಓದಬೇಕು.

ಈ ಗ್ರಂಥದ ವಿಷಯವನ್ನು ಲೇಖಕರು ಸಂಕ್ಷಿಪ್ತವಾಗಿ ಚೊಕ್ಕದಾಗಿ ಹೀಗೆ ತಿಳಿಸಿದ್ದಾರೆ.

''ಈ ಗ್ರಂಥದ ಜೀವ, ಈಶ್ವರ, ಜಗತ್ತು ಈ ಮೂರರ ಬಣ್ಣವನ್ನು ಚೆನ್ನಾಗಿ ಒರೆ ಹಚ್ಚಿ ನೋಡುವುದಕ್ಕೆ ಇದು ಒಳ್ಳೇ ಒರೆಗಲ್ಲು. ಎರಡನೆಯದೆಂಬ ಭಾವನೆಯನ್ನು ಎಲ್ಲ ಕಡೆಯಿಂದಲೂ ಹಾರಿಸುವ ವಿಷಯದಲ್ಲಿ ಇದು ಸುಂಟರಗಾಳಿ. ದುಃಖಮಯವಾದ ಜಗತ್ತಿನಲ್ಲಿದ್ದೇ ದುಃಖದ ಸೋಂಕಿಲ್ಲದಿರುವ ಸಿದ್ಧಿಯುಂಟಾಗುವುದಕ್ಕೆ ಇದು ಮಹಾಮಂತ್ರ''.

ಈ ಗ್ರಂಥದಲ್ಲಿ ಅಂಕಣ ಬರಹಗಳಂತೆ ಪ್ರತಿ ಅಧ್ಯಾಯವೂ 2 ಪುಟಗಳಿಗೆ ಮೀರದಂತೆ 15 ಅಧ್ಯಾಯಗಳಿವೆ. 48 ಪುಟಗಳಲ್ಲಿ ಪುಟ್ಟ ಸಂಪಾದಕೀಯಗಳ ಹಾಗೆ ಬರಹಗಳಿವೆ. ಒಂದೇ ಪ್ಯಾರಾ ಒಂದು ಅಧ್ಯಾಯವಾಗಿರುವುದೂ ಇದೆ. (ಅಧ್ಯಾಯ 11, 12 ಇತ್ಯಾದಿ).

ಅಧ್ಯಾಯ 4ರಲ್ಲಿ ದ್ವೈತಮತದ ಸಿದ್ಧಾಂತವಾದ ಪಂಚಭೇದಗಳನ್ನು ಕುರಿತು, ದ್ವೈತಮತದ ಹೆಸರು ಹೇಳದೆ ಅದನ್ನು ವಿವರಿಸುತ್ತಾರೆ. ''ಈಶ್ವರ, ಜೀವ, ಜಗತ್ತು ಎಂಬ ಮೂರರಲ್ಲಿ ಒಂದಕ್ಕೊಂದರ ಬೆರಕೆಯಿಂದ, 1) ಜೀವನಿಗೂ ಈಶ್ವರನಿಗೂ ಭೇದ, 2) ಒಬ್ಬ ಜೀವನಿಗೂ ಇನ್ನೊಬ್ಬ ಜೀವನಿಗೂ ಭೇದ,

3) ಈಶ್ವರನಿಗೂ ಜಗತ್ತಿಗೂ ಭೇದ, 4) ಜೀವರಿಗೂ ಜಗತ್ತಿಗೂ ಭೇದ, 5) ಜಡಗಳಿಗೊಂದಕ್ಕೊಂದು ಭೇದ- ಈ ಬಗೆಯ ಭೇದಗಳು ಎದ್ದು ಕಾಣುತ್ತ ಭೇದವಿಲ್ಲದ ಸ್ಥಿತಿಯನ್ನು ಮರೆಮಾಡುವುವು.'' (ಪುಟ11)

ಇದಕ್ಕೆ ತಕ್ಕ ಉತ್ತರವನ್ನು ಸೂಕ್ತವಾಗಿ ಕೊಟ್ಟು ಅದ್ವೈತದ ಹಿರಿಮೆಯನ್ನು ಪ್ರತಿಪಾದಿಸುತ್ತಾರೆ. ಹೀಗೆ ಪ್ರತಿಪಾದನೆ ಮಾಡುವಾಗ ಸ್ಪಷ್ಟವಾಗಿ ಹೇಳಿದ ಮಾತುಗಳನ್ನು ''ನಾನೆಂಬ ವಸ್ತುವಿನ ಸ್ವರೂಪ ಸುಖ ಜೀವನೂ ಈಶ್ವರನೂ ಬೇರೆಬೇರೆಯಲ್ಲ- ಜೀವರಲ್ಲಿ ಒಬ್ಬರಿಗೊಬ್ಬರು ಬೇರೆಬೇರೆಯಲ್ಲ- ಈಶ್ವರನೂ ಜಗತ್ತು ಬೇರೆಬೇರೆಯಲ್ಲ, ಜಡವಸ್ತುಗಳೂ ಒಂದಕ್ಕೊಂದು ಬೇರೆ ಬೇರೆಯಲ್ಲ ಇತ್ಯಾದಿ ಅಧ್ಯಾಯಗಳಲ್ಲಿ ಕಾಣಬಹುದು.

ಇಲ್ಲಿ ನಿರೂಪಣೆಯಲ್ಲಿ ವಿನೂತನತೆ ಇದೆ. ಉದಾಹರಣೆಗೆ ''ಜೀವರಲ್ಲಿ ಒಬ್ಬರಿಗೊಬ್ಬರು ಬೇರೆಬೇರೆಯಲ್ಲ (ಅ 9) ಎಂಬ ಅಧ್ಯಾಯದಲ್ಲಿ ನಾನು- ನಾವು, ನೀನು- ನೀವು, ಅವನು - ಅವಳು, ಅದು- ಅವು ಅವರು ಎಂಬ ಸರ್ವನಾಮಗಳ ಅರ್ಥಗಳನ್ನು ವಿವರಿಸುವುದರ ಮೂಲಕ ಅದ್ವೈತ ಕಲ್ಪನೆಯನ್ನು ಪ್ರತಿಪಾದಿಸಲಾಗಿದೆ.

ಇನ್ನು ಸೊಗಸಾದ ದೃಷ್ಟಾಂತಗಳನ್ನು ಕೊಟ್ಟಿರುವುದು ಈ ಗ್ರಂಥದ ವೈಶಿಷ್ಟ್ಯ. ಉದಾಹರಣೆಗೆ ಅಂತಃಕರಣವೆಂಬ ವಸ್ತುವನ್ನು 2 ಭಾಗಗಳಾಗಿದೆ ಎಂಬುದನ್ನು ಹೀಗೆ ಹೇಳುತ್ತಾರೆ.

1) ಮುಂದಿಟ್ಟ ಪತ್ರದಲ್ಲಿರುವ ಸಂಗತಿಯು ನ್ಯಾಯಾನ್ಯಾಯಗಳ ವಿಚಾರಕ್ಕೆ ಹೋಗದೆ ತನ್ನ ಮುಂದೆ ಬಂದದ್ದನ್ನೆಲ್ಲ ರಿಜಿಸ್ಟರ್ ಮಾಡುವ ಸಬ್ ರಿಜಿಸ್ಟ್ರಾರ್ ಎಂಬ ಅಧಿಕಾರಿಯಂತೆ ಇಂದ್ರಿಯಗಳು ಹೇಳಿದ ಸುದ್ದಿಯನ್ನೆಲ್ಲ ಸುಮ್ಮನೆ ತಿಳಿದುಕೊಳ್ಳುವುದು ಮನಸ್ಸೆಂಬ ಒಂದು ಭಾಗ. ಮುಂದೆ ಬಂದ ವಾದದಲ್ಲಿರುವ ಪತ್ರದ ನ್ಯಾಯಾನ್ಯಾಯಗಳನ್ನು ಗೊತ್ತುಮಾಡಿ ಹೇಳುವ ನ್ಯಾಯಾಧೀಶನಂತಿರುವುದು ಬುದ್ಧಿಯೆಂಬ ಇನ್ನೊಂದು ಭಾಗ'' ಮನಸ್ಸು, ಬುದ್ಧಿಗಳ ಸ್ವರೂಪ ತಿಳಿಸಲು ಇದಕ್ಕಿಂತ ಸೊಗಸಾದ ದೃಷ್ಟಾಂತ ಇನ್ನೊಂದಿಲ್ಲ.

ಹೊಸಕೆರೆ ಚಿದಂಬರಯ್ಯನವರು ವೇದಾಂತವನ್ನು ಕುರಿತು, ಗೀತೆ, ಉಪನಿಷತ್ತು ಬ್ರಹ್ಮಸೂತ್ರಗಳನ್ನು ಕುರಿತು ಕನ್ನಡದಲ್ಲಿ ಅನೇಕ ಗ್ರಂಥಗಳನ್ನು (30ಕ್ಕೂ ಹೆಚ್ಚು) ಬರೆದಿದ್ದಾರೆ ಅವೆಲ್ಲವನ್ನು ಓದುವುದೇ ಒಂದು ಆನಂದದ ಕೆಲಸ. ಅವರ

ಗ್ರಂಥಗಳಲ್ಲಿ ವೇದಾಂತವನ್ನು ಸುಲಿದ ಬಾಳೆಯ ಹಣ್ಣಿನಂಥ ಕನ್ನಡ ಭಾಷೆಯಲ್ಲಿ ಬರೆದಿದ್ದಾರೆ. ಆದರೆ ವಸ್ತು ಮಾತ್ರ ಅತಿ ಗಹನವಾಗಿದ್ದು ಬೇರೆಯ ಸುಲಭ ಭಾಷೆಯಲ್ಲಿ ಹೇಳಲಾಗದ ಅಮೂರ್ತಭಾವನೆಗಳನ್ನು ಕಣ್ಣಿಗೆ ಕಟ್ಟಿದಂತೆ ಚಿದಂಬರಯ್ಯನವರು ನಿರೂಪಿಸಬಲ್ಲರು ಎಂಬುದಕ್ಕೆ ಈ ಪುಟ್ಟ ಗ್ರಂಥ ಸಾಕ್ಷಿಯಾಗಿದೆ. 60 ವರ್ಷಗಳ ಹಿಂದೆ ಪ್ರಕಟವಾದ ಇಂಥ ಅಮೋಘ ಪುಟ್ಟ ಗ್ರಂಥವನ್ನು ಅಧ್ಯಾತ್ಮಪ್ರಕಾಶಕಾರ್ಯಾಲಯದವರು ಮತ್ತೆ ಪ್ರಕಟಿಸಿ, ಕನ್ನಡಿಗರಿಗೆ ಮಹೋಪಕಾರ ಮಾಡಿದ್ದಾರೆ. ಚಿದಂಬರಯ್ಯನವರ ಉಳಿದ ಗ್ರಂಥಗಳನ್ನು ಪತ್ರಿಕೆಗಳಲ್ಲಿ ಚೆದರಿರುವ ಅವರ ನೂರಾರು ಲೇಖನಗಳನ್ನು ಸಂಗ್ರಹಿಸಿ ಪ್ರಕಟಿಸಲಿ ಎಂದು ಆಶಿಸುತ್ತೇನೆ. ಈ ಕೆಲಸಕ್ಕೆ ಮಹಾಜನರ ಪ್ರೋತ್ಸಾಹ ಸಿಗಲಿ. ಕನ್ನಡಿಗರ ಆಧ್ಯಾತ್ಮಿಕ ದಾಹವನ್ನು ಹಿಂಗಿಸಲಿ ಎಂದು ಬಯಸುತ್ತೇನೆ.

ಚಿದಂಬರಯ್ಯನವರೇ ಸೊಗಸಾದ ಮುನ್ನುಡಿ ಬರೆದಿರುವುದರಿಂದ ತೃತಿಯ ಮುದ್ರಣಕ್ಕೆ ನನ್ನ ಅನಿಸಿಕೆಯನ್ನು ಮಾತ್ರ ಬರೆದಿದ್ದೇನೆ.

23-11-2015
ಉತ್ಥಾನ ದ್ವಾದಶಿ, ಬೆಂಗಳೂರು

**ಜಿ. ಅಶ್ವತ್ಥನಾರಾಯಣ**
ದೂ: 080-26637783

# ಬೆನ್ನುಡಿ

ಸ್ವಾತಂತ್ರ್ಯ ಪೂರ್ವದಲ್ಲಿ ಕನ್ನಡದ ಪ್ರಸಿದ್ಧ ಸಾಹಿತಿಗಳೂ, ವೇದಾಂತಿಗಳೂ, ವಿದ್ವಾಂಸರೂ, ಹೊಸಗನ್ನಡ ಗದ್ಯ ಶಿಲ್ಪಿಗಳೂ ಕರ್ನಾಟಕ ಕವಿರತ್ನರೂ ಆದ ಹೊಸಕೆರೆ ಚಿದಂಬರಯ್ಯನವರು (28-12-1870 - 19-4-1938) ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಪಾಸಾಗಿ 1900ಕ್ಕೆ ಮುಂಚೆ ಶಾಲಾ ಉಪಾಧ್ಯಾಯರಾಗಿ ಕೆಲಸಕ್ಕೆ ಸೇರಿದರು. ಕಡೂರಿನಲ್ಲಿದ್ದಾಗ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳು ಸಹಾಧ್ಯಾಯಿಗಳೂ ಸಹೋದ್ಯೋಗಿಗಳೂ ಬಾಳಿನಾಪ್ತರೂ ಆದರು. ಇಬ್ಬರೂ ಕನ್ನಡದಲ್ಲಿ ಶಂಕರರ ಕೃತಿಗಳ ಬಗ್ಗೆ ಸಿದ್ಧಾಂತದ ಬಗ್ಗೆ ಹತ್ತಾರು ಗ್ರಂಥಗಳನ್ನು ಅನುವಾದಿಸಿದರು ಮತ್ತು ಸ್ವತಂತ್ರವಾಗಿ ರಚಿಸಿದರು. ಶಿವಾಭಿನವ ನರಸಿಂಹಭಾರತೀ ಸ್ವಾಮಿಗಳಿಂದ ಭಾಷ್ಯಶಾಂತಿಪಾಠದ ಅನುಗ್ರಹ ಪಡೆದು ಕುರ್ತುಕೋಟಿ ಭಾಗವತರ ಶಿಷ್ಯರಾಗಿ, ಗೋಂದಾವಳಿ ಮಹಾರಾಜರ ಬಳಿ ಗುರುಸೇವೆ ಮಾಡಿದ ಚಿದಂಬರಯ್ಯನವರು 80ಕ್ಕೂ ಹೆಚ್ಚು ಗ್ರಂಥಗಳನ್ನು ಕನ್ನಡದಲ್ಲಿ ರಚಿಸಿದ್ದಾರೆ. ಅನುಭವಾಮೃತ, ಮಾಂಡೂಕ್ಯಸಂವಾದ, ಗೀತಾರ್ಥಚಂದ್ರಿಕೆ, ಪಂಚದಶೀ ತತ್ವಾರ್ಥ, ವೇದಾಂತದ ಜೀವಾಳ, ಬ್ರಹ್ಮಸೂತ್ರದಬೆಳಕು, ಆರ್ಯಧರ್ಮ ಪ್ರದೀಪ, ಆತ್ಮಶಕ್ತಿತೇಜಸ್ಸು, ಜೀವನ್ಮುಕ್ತಿ ವಿವೇಕ, ವೇದಾಂತ ವಿಚಾರದ ಗುಟ್ಟು ಇತ್ಯಾದಿ ಅವರು ರಚಿಸಿದ ವೇದಾಂತ ಗ್ರಂಥಗಳಲ್ಲಿ ಕೆಲವು.

ವೇದಾಂತದ ರೂಪರೇಖೆ ಗ್ರಂಥವು ಈಶ್ವರ- ಜೀವ- ಜಗತ್ತುಗಳ ಬಗ್ಗೆ ಅದ್ವೈತ-ದ್ವೈತ ಸಿದ್ಧಾಂತಗಳನ್ನು ತಿಳಿಗನ್ನಡದಲ್ಲಿ ಸಂಸ್ಕೃತದ ವೇದಾಂತದ ಗ್ರಂಥಗಳ ಪರಿಚಯವೇ ಇಲ್ಲದವರಿಗೂ ಅರ್ಥವಾಗುವಂತೆ ಬರೆದ ಪುಟ್ಟ ಗ್ರಂಥ. ಎಲ್ಲಿಯೂ ಸಂಸ್ಕೃತದ ಉಲ್ಲೇಖಗಳಿಲ್ಲ ಅನುವಾದಗಳಿಲ್ಲ. 48 ಪುಟಗಳಲ್ಲಿ 15 ಅಧ್ಯಾಯಗಳಲ್ಲಿ 2 ಪುಟಗಳಿಗೆ ಮೀರದ ಪುಟ್ಟ ಲೇಖನಗಳಲ್ಲಿ ಅಂಕಣಬರಹಗಳಂತೆ ಬರೆದಿರುವ ಈ ಗ್ರಂಥದಲ್ಲಿ ಜೀವ - ಈಶ್ವರ - ಜಗತ್ತನ್ನು ಕುರಿತು ಜೀವನಿಗೂ ಈಶ್ವರನಿಗೂ ಭೇದ, ಒಬ್ಬ ಜೀವಿಯು ಇನ್ನೊಬ್ಬ ಜೀವಿಗೂ ಭೇದ ಜೀವ ಜಗತ್ತಿಗೂ ಭೇದ, ಜಡಗಳಿಗೊಂದಕ್ಕೊಂದು ಭೇದ, ನಾನೆಂಬ ವಸ್ತುವಿನ ಸ್ವರೂಪದ ಸುಖ, ಜೀವನೂ ಈಶ್ವರನೂ ಬೇರೆಯಿಲ್ಲ, ಜೀವರಲ್ಲಿ ಒಬ್ಬರಿಗೊಬ್ಬರು ಬೇರೆಯಿಲ್ಲ, ಈಶ್ವರನೂ ಜಗತ್ತೂ ಬೇರೆ ಬೇರೆ ಇಲ್ಲ ಜಡವಸ್ತುಗಳೂ ಒಂದಕ್ಕೊಂದು ಬೇರೆ ಅಲ್ಲ, ಇತ್ಯಾದಿ ಹೊಸ ವಿಷಯಗಳನ್ನು ಸರಳವಾಗಿ ವಿವರಿಸಲಾಗಿದೆ.

ಸೊಗಸಾದ ದೃಷ್ಟಾಂತಗಳಿಂದ ವಿವರಣೆಗಳಿಂದ ಕೂಡಿದ ಈ ಗ್ರಂಥ ಪ್ರತಿಯೊಬ್ಬ ವೇದಾಂತ ಪ್ರೇಮಿಯೂ ಓದಲೇಬೇಕಾದ ಗ್ರಂಥ.

**-ಪ್ರೊ. ಜಿ. ಅಶ್ವತ್ಥನಾರಾಯಣ**

# ಹೊಸಕೆರೆ ಚಿದಂಬರಯ್ಯನವರು ರಚಿಸಿದ
# ಧಾರ್ಮಿಕ ಗ್ರಂಥಗಳು

1. ಜೀವನ್ಮುಕ್ತಿ ವಿವೇಕ
2. ವೇದಾಂತ ವಿಚಾರದ ಗುಟ್ಟು
3. ರಾಮನಾಮದ ಮಹಿಮೆ
4. ಆರ್ಯಧರ್ಮಪ್ರದೀಪ
5. ಆತ್ಮಶಕ್ತಿಯ ತೇಜಸ್ಸು
6. ಪಂಚದಶಿ ತತ್ತ್ವಾರ್ಥ
7. ಈಶಸಾರ
8. ಆರ್ಯಮತಸಾರ
9. ಶ್ರೀ ಶಂಕರಕಥಾಮೃತ
10. ರಾಜಭಕ್ತಿ
11. ವೇದಾಂತದ ಜೀವಾಳ
12. ಮಾಂಡೂಕ್ಯ ಸಂವಾದ
13. * ವೇದಾಂತ ರೂಪರೇಖೆ
14. ಬ್ರಹ್ಮಸೂತ್ರಗಳ ಬೆಳಕು
15. * ಭಗವದ್ಗೀತಾಸಾರ ವಿಚಾರ
16. ಗೀತಾರ್ಥಚಂದ್ರಿಕೆ
17. ಗೀತೆಯ ತಿರುಳು
18. ಮಕ್ಕಳ ಕೈಗೀತೆ
19. ಗೀತೆಯ ಕನ್ನಡಿ
20. ಗೀತಾರ್ಥ ವಿವರಣೆ
21. * ಅನುಭವಾಮೃತ ಟೀಕೆ
22. ಉಪದೇಶ ಪಂಚಕ
23. ಷಟ್ಪದೀ ಝೇಂಕಾರ
24. ಮನಸ್ಸಿಗೆ ಉಪದೇಶ
25. ಅದ್ವೈತ ರಸಮಂಜರಿ
26. ಶ್ರೀ ಶಂಕರಸ್ತೋತ್ರಮಾಲೆ
27. ಭಕ್ತಿ ಗೀತಾವಳಿ
28. ಹರೇರಾಮ ಮಂತ್ರ ಪ್ರಶಂಸೆ
29. ಪರಮಾತ್ಮ ಸ್ತುತಿ
30. * ವೇದಾಂತ ಲೇಖನಗಳು

* ಈ ಚಿಹ್ನೆಯ ಗ್ರಂಥಗಳು ಅಧ್ಯಾತ್ಮ ಪ್ರಕಾಶ ಕಾರ್ಯಾಲಯದಲ್ಲಿ ಮಾರಾಟಕ್ಕೆ ದೊರಕುತ್ತವೆ.

# ವಿಷಯಾನುಕ್ರಮಣಿಕೆ


| ಕ್ರಮಸಂಖ್ಯೆ | ವಿಷಯ | ಪುಟ |
|---|---|---|
| 1. | ಎಲ್ಲರೂ ತಿಳಿಯಬೇಕಾದದ್ದು | 1 |
| 2. | ಈ ಒಗಟುಗಳನ್ನು ಒಡೆಯುವುದಕ್ಕೆ ವೇದಾಂತವೇ ಗತಿ | 4 |
| 3. | ವೇದಾಂತದ ತಾತ್ಪರ್ಯ | 9 |
| 4. | ನಾನೆಂಬ ಮಾತಿನ ತಪ್ಪಾದ ಅರ್ಥ | 11 |
| 5. | ನಾನೆಂಬ ವಸ್ತುವಿನ ಸ್ವರೂಪವು 'ಇರುವಿಕೆ' | 15 |
| 6. | ನಾನೆಂಬ ವಸ್ತುವಿನ ಸ್ವರೂಪವು 'ಅರಿವು' | 18 |
| 7. | ನಾನೆಂಬ ವಸ್ತುವಿನ ಸ್ವರೂಪವು 'ಸುಖ' | 21 |
| 8. | ಜೀವನೂ ಈಶ್ವರನೂ ಬೇರೆಬೇರೆಯಲ್ಲ | 22 |
| 9. | ಜೀವರಲ್ಲಿ ಒಬ್ಬರಿಗೊಬ್ಬರು ಬೇರೆಬೇರೆಯಲ್ಲ | 24 |
| 10. | ಈಶ್ವರನೂ ಜಗತ್ತೂ ಬೇರೆಬೇರೆಯಲ್ಲ | 26 |
| 11. | ಜೀವನೂ ಜಗತ್ತು ಬೇರೆಬೇರೆಯಲ್ಲ | 28 |
| 12. | ಜಡವಸ್ತುಗಳೂ ಒಂದಕ್ಕೊಂದು ಬೇರೆಬೇರೆಯಲ್ಲ | 38 |
| 13. | ಮನಸ್ಸೇ ಸುಖದುಃಖಗಳ ಮನೆ | 29 |
| 14. | ಮನಸ್ಸನ್ನು ಕಶೀಮಾಡುವದು | 32 |
| 15. | ತಿಳಿದವರ ನೋಟ | 37 |


*****

ಶ್ರೀಗುರುಭ್ಯೋ ನಮಃ

# ವೇದಾಂತದ ರೂಪರೇಖೆ

## 1. ಎಲ್ಲರೂ ತಿಳಿಯಬೇಕಾದದ್ದು

ಅಗತ್ಯವಾಗಿ ಎಲ್ಲರೂ ತಿಳಿದುಕೊಳ್ಳಬೇಕಾದ ಒಂದಾನೊಂದು ವಿಚಾರವಿದೆ. ಬಹುಮಟ್ಟಿಗೆ ಯಾರೂ ಅದನ್ನು ಮನಸ್ಸಿಗೆ ಹಚ್ಚಿಕೊಳ್ಳುವುದೇ ಇಲ್ಲ. ಹಚ್ಚಿಕೊಂಡ ಒಬ್ಬಿಬ್ಬರು ಅದರ ಅಗಾಧವಾದ ಆಳವನ್ನು ನೋಡಿ ಕಣ್ಣು ಕತ್ತಲೆ ಹಿಡಿದವರಾಗಿ ಬಹು ಬೇಗ ಅದನ್ನು ಕೈಬಿಡುತ್ತಾರೆ. ಎಲ್ಲಿಯೋ ಮಹಾಮಹಾ ವಿವೇಕಿಗಳಲ್ಲಿ ಸಹಸ್ರಕ್ಕೊಬ್ಬನು ಮಾತ್ರ ತನ್ನ ತಿಳಿಗಣ್ಣಿನಿಂದ ಚೆನ್ನಾಗಿ ದಿಟ್ಟಿಸಿ ನೋಡಿ ಅದರ ಸ್ವರೂಪವನ್ನು ಅಂಗಯ್ಯೊಳಗಣ ನೆಲ್ಲಿಯಕಾಯಂತೆ ಕಣ್ಣಾರೆ ಕಂಡು ಅದರಿಂದುಂಟಾಗುವ ಆನಂದದಲ್ಲಿ ಹಾಯಾಗಿ ಓಲಾಡುವನು. ಆ ವಿಚಾರವು ಅಂಥದ್ದು. ಅದರ ವಿಷಯವು ಇತರ ಪ್ರಶ್ನೆಗಳ ಉತ್ತರದಂತೆ ಏನೋ ಒಂದು ತಿಳಿವಳಿಕೆಯನ್ನ ತಂದುಕೊಟ್ಟು ಅಷ್ಟಕ್ಕೇ ಮೈಗರೆಯುವದಿಲ್ಲ. ಅದು ಆ ತಿಳಿವಳಿಕೆಯೊಡಗೊಂಡ ಅವನನ್ನು ಆನಂದದ ಗಟ್ಟಿಯಾಗಿ ಮಾಡುವದಲ್ಲದೆ ಉಳಿದ ತಿಳಿವಳಿಕೆಗಳಂತೆ ಹಾರಿಹೋಗದೆ ಯಾವಾಗಲೂ ಇದ್ದುಕೊಂಡೇ ಇರುವಂಥಾದ್ದಾಗುವದು. ಅದರ ಫಲವು ಇಷ್ಟು ಹೆಚ್ಚಿನದಾಗಿರುವದರಿಂದಲೇ ಅದನ್ನು ಕಂಡು ಹಿಡಿಯುವ ಕೆಲಸವು ಬಹು ಸಾಹಸದ ಮಾತಾಗಿ ಕಾಣುವದು. ಆದ್ದರಿಂದಲೆ ವಿವೇಕಿಗಳಾದ ಯಾರಾದರೂ ಇದರ ಮಾತನ್ನು ಎತ್ತುತ್ತಲೆ ದಡ್ಡರ ಎದೆಯೊಡೆದುಹೋಗುವದು. ಇದು ಇಂಥ ಒಗಟಾದ ಪ್ರಶ್ನೆ. ಇಂಥದ್ದೊಂದು ಪ್ರಶ್ನೆಯುಂಟೆಂಬ ಮಾತೇ ಒಂದು ಒಗಟಾಗಿರುವದು. ಬಹು ಜನರ ಬುದ್ಧಿಯಲ್ಲಿ ಇದು ತಲೆಯನ್ನು ಎತ್ತಲಾರದಿರುವದೇ ಹಾಗೆ ತೋರುವದಕ್ಕೆ ಕಾರಣ.

ಹೀಗೆ ಇದು ಜನಸಾಮಾನ್ಯರ ಬುದ್ಧಿಯಲ್ಲಿ ತಲೆ ಎತ್ತದಿರುವಂಥದ್ದೆಂಬುದನ್ನು ನೋಡಿ ಪರಮಕರುಣಾಳುವಾದ ವೇದಪುರುಷನು ಎಲ್ಲರಿಗೂ ಇದನ್ನು ನೆನಪುಗೊಡಬೇಕೆಂಬ ಉದ್ದೇಶದಿಂದ **ಕಠೋಪನಿಷತ್ತಿನಲ್ಲಿ** ನಚಿಕೇತನೆಂಬುವನ ಮುಖದಿಂದ ಈ ಪ್ರಶ್ನೆಯನ್ನು ಹೊರಪಡಿಸಿರುವನು. ನಚಿಕೇತನು ತನಗೆ ಬೇಕಾದ ಮೂರು ವರಗಳನ್ನು ಕೇಳಬಹುದೆಂದು ಯಮನು

ಅವನಿಗೆ ಮಾತು ಕೊಟ್ಟಿರುತ್ತಾನೆ. ನಚಿಕೇತನು ಅದರಂತೆ ಎರಡು ವರಗಳನ್ನು ಪಡೆದುಕೊಂಡ ಮೇಲೆ ಮೂರನೆ ವರವನ್ನು ಕೇಳುವ ಸಮಯ ಒದಗಿರುತ್ತದೆ. ಅವನು ಅದನ್ನು ಕೇಳುವಾಗ ಅವನ ಮಾತಿನಲ್ಲಿ 'ಸತ್ತಮೇಲೆ ಜೀವನು ಇರುವನೋ ಇಲ್ಲವೋ?' ಎಂಬ ಅಭಿಪ್ರಾಯವು ಹೊರಬಿದ್ದಿದೆ. ಇದರ ಉತ್ತರವು ನಚಿಕೇತನಿಗೊಬ್ಬನಿಗೇ ಅಗತ್ಯವಾದದ್ದೆಂದಲ್ಲ, ಜಗತ್ತಿನಲ್ಲಿ ಪ್ರತಿಯೊಂದು ಪ್ರಾಣಿಗೂ ತಿಳಿಯಲೇಬೇಕಾದದ್ದು. ಉಪನಿಷತ್ತು ನೆನಪುಗೊಟ್ಟಮೇಲಾದರೂ ನಾವು ಆ ಪ್ರಶ್ನೆಯನ್ನು ನಮ್ಮದಾಗಿ ಭಾವಿಸಿಕೊಂಡು ಅದರ ಉತ್ತರವನ್ನು ಕಾಣಬೇಕು.

ಮೇಲಿನ ಪ್ರಶ್ನೆಗೆ ಉತ್ತರವನ್ನು ಕಾಣಹೋಗುವದಕ್ಕಿಂತ ಮೊದಲು ತಿಳಿಯಬೇಕಾದದ್ದೊಂದಿದೆ. ಜೀವರೆಲ್ಲರೂ 'ನಾನು, ನಾನು' ಎಂದು ವ್ಯವಹರಿಸುತ್ತಿರುವರಷ್ಟೆ. ಈ 'ನಾನು' ಎಂಬ ಮಾತಿನಿಂದ ಕರೆಸಿಕೊಳ್ಳುವ ಜೀವನು ತನ್ನ ಸ್ವರೂಪವೇನೆಂದೂ ತಾನು ಎಲ್ಲಿಂದ ಬಂದವನೆಂದೂ ಮತ್ತು ಎಲ್ಲಿಗೆ ಹೋಗುತ್ತಿರುವವನೆಂದೂ ತನ್ನ ನೆಲೆಯನ್ನು ತಾನು ತಿಳಿಯದೆ ವ್ಯವಹಾರದಲ್ಲಿ ನುಗ್ಗಿಬಿಟ್ಟರೆ ಅವನ ವ್ಯವಹಾರ ಗಟ್ಟಿಯಾದ ತಳಹದಿ ಇಲ್ಲದ ಅರಮನೆಯಂತೆ ಕಟ್ಟುತ್ತ ಹೋದಷ್ಟೂ ಉರುಳಿಕೊಳ್ಳುತ್ತ ನಿರಾಶೆಯ ನಿಟ್ಟುಸಿರನ್ನು ಬಿಡಿಸದೆ ಮತ್ತೇನಾದೀತು? 'ನಾನು' ಎಂಬುದರ ಸ್ವರೂಪವೇನೆಂದರೆ ಶರೀರವೆಂದು ಬಹು ಬೇಗ ಹೇಳಿಬಿಡಬಹುದು. ಅದನ್ನು ಒರೆಗೆ ಹಚ್ಚಿದರೆ ಮಾತ್ರ ಅದರ ಕುಂದು ಹೊರಬೀಳುವದು. ನಮ್ಮ ಶರೀರವು ಹಾಸಿಗೆಯ ಮೇಲೆ ಎಚ್ಚರತಪ್ಪಿ ಮಲಗಿರುವಾಗ ಕನಸಿನಲ್ಲಿ ನಾವು ಹೋಗುವದು, ಬರುವದು ಮೊದಲಾದ ಎಷ್ಟೋ ವ್ಯವಹಾರಗಳನ್ನು ಮಾಡುತ್ತೇವಷ್ಟೆ. ಆಗ 'ನಾನು' ಎಂಬುದರ ಸ್ವರೂಪವು ಆ ಶರೀರವಲ್ಲವೆಂದು ಹೇಳಲೇಬೇಕಾಗಿ ಬರುವದು. ಆದ್ದರಿಂದ ಸಾಮಾನ್ಯವಾಗಿ ಯಾರಿಗೂ 'ನಾನು' ಎಂಬುದರ ಸ್ವರೂಪವೇ ಗೊತ್ತಿಲ್ಲವೆಂದಾಯಿತು. ಹೀಗೆ ನನ್ನ ನೆಲೆಯೇ ಗೊತ್ತಿಲ್ಲದೆ ಮಾಡುವ ಕುರುಡು ವ್ಯವಹಾರದಲ್ಲಿ ಏಳುತ್ತ ಬೀಳುತ್ತ ಗಾಸಿಗೊಳ್ಳುತ್ತಿರುವದೇ ನಮ್ಮ ಹಣೆಯ ಬರಹವಾಗಿದೆ. ಈ ನಮ್ಮ ದುರ್ದಶೆಯನ್ನು ನಾವು ದೂರಮಾಡಿಕೊಂಡ ಹೊರತು ನಮಗೆ ಸುಖದ ಆಸೆ ಇಲ್ಲ. ಆದ್ದರಿಂದ ನಾವೆಲ್ಲರೂ ನಮ್ಮ ನೆಲೆಯನ್ನು ಮೊದಲು ಅರಿಯಬೇಕು. ಶ್ರೀ ಪುರಂದರದಾಸರು ಕೂಡ ತಮ್ಮದೊಂದು ಕೀರ್ತನೆಯಲ್ಲಿ

''ಎಲ್ಲಿಂದ ಬಂದೆ? ಮುಂದೆ ಪಯಣ?''

ಎಂಬ ಪಲ್ಲವಿಯನ್ನು ಹಾಡಿ ನಮ್ಮನ್ನು ಎಚ್ಚರಗೊಳಿಸಿದ್ದಾರೆ. ಆದರೂ ನಾವು ಗೊರಕೆ ಹೊಡೆಯುತ್ತಿದ್ದೇವೆ. ಇನ್ನಾದರೂ ಕಣ್ಣು ಹೊಸಕಿಕೊಂಡು ಎದ್ದು ವಿಚಾರಕ್ಕೆ ಮೊದಲುಮಾಡಬೇಕು.

ಇನ್ನೊಂದೇನೆಂದರೆ- ನಾವು ಹೊರಗೆ ಕಾಣುವ ಜಗತ್ತನ್ನು ನಿಜವಾದದ್ದೆಂದು ನಂಬಿ ವ್ಯವಹರಿಸುತ್ತ ಎಷ್ಟೋಸಲ ಧಕ್ಕೆಯನ್ನು ತಿಂದು 'ಅಯ್ಯೋ! ತಿಳಿಯದೆ ಮೋಸಹೋದೆನು!!' ಎಂದು ಒಮ್ಮೆಯಾದರೂ ಹೇಳುತ್ತೇವಲ್ಲ! ನಿಜವಾದ ವಸ್ತುವಿನಿಂದ ಮೋಸವಾಗುವದುಂಟೆ? ಜಗತ್ತು ಯಾವಾಗಲೂ ಒಂದೇ ರೂಪದಲ್ಲಿಲ್ಲದೆ ಒಮ್ಮೆ ಸುಖದ ರೂಪವನ್ನೂ ಒಮ್ಮೆ ದುಃಖದ ರೂಪವನ್ನೂ ತಾಳುವದೇಕೆಂಬ ಯೋಚನೆಯನ್ನು ಹಚ್ಚಿಕೊಂಡು ಅದರ ಆಗುಹೋಗುಗಳನ್ನೆಲ್ಲ ನಾವು ಎಂದಾದರೂ ತೂಕಕ್ಕೆ ಹಾಕಿ ನೋಡಿದ್ದೇವೆಯೆ? ನಮ್ಮ ಸ್ಥಿತಿಯು ಗಿಲೀಟಿನ ಒಡವೆಯನ್ನು ಅಪರಂಜಿಯೆಂದು ತಿಳಿದು ನಡೆದವನ ಗತಿಯಂತೆ ಆಗಿರುವದೆಂದು ನಮ್ಮ ಮನಸ್ಸಾಕ್ಷಿಯು ಆಗಾಗ ಎಚ್ಚರಿಸುತ್ತಲೆ ಇದ್ದರೂ ನಾವು ಅದನ್ನು ಉಪೇಕ್ಷಿಸುತ್ತಿದ್ದೇವೆ. ಇದು ಸರಿಯಲ್ಲ. ಈ ಜಗತ್ತು ಎಚ್ಚರದಲ್ಲಿಯೂ ಬದಲಾವಣೆಯನ್ನು ಹೊಂದುತ್ತಿರುವದಲ್ಲದೆ ಕನಸಿನಲ್ಲಿಯೂ ತನಿನಿದ್ರೆಯಲ್ಲಿಯೂ ತನ್ನ ಸೆಲೆಯೇ ಇಲ್ಲದಂತಾಗುವದನ್ನು ವಿಚಾರಕ್ಕೆ ತಂದುಕೊಂಡರಂತು 'ಈ ಜಗತ್ತು ಹುಟ್ಟಿದೆಯೋ? ಇಲ್ಲವೋ?' ಎಂದು ಸಂಶಯವಾಗುವದು. ಆದ್ದರಿಂದ ಜಗತ್ತಿನ ಹುಟ್ಟುವಿಕೆಯನ್ನೂ ಇರುವಿಕೆಯನ್ನೂ ಕುರಿತು ನಾವು ವಿಚಾರ ಮಾಡುವದು ಅಗತ್ಯ .

ಹೀಗೆ ಜೀವರ ಮತ್ತು ಜಗತ್ತಿನ ವಿಷಯವನ್ನು ಕುರಿತು ವಿಚಾರ ಮಾಡುವದರೊಂದಿಗೆ ಇನ್ನೊಂದರ ವಿಚಾರವೂ ಅಗತ್ಯವಾಗುತ್ತದೆ. ಅದೇನೆಂದರೆ, ಏನಾದರೊಂದು ಕೆಟ್ಟಕೆಲಸಕ್ಕೆ ಕೈ ಹಾಕುವಾಗ ಎಂಥ ಕಲ್ಲುಮನಸ್ಸಿನವನಿಗಾದರೂ ಮೊಟ್ಟಮೊದಲು ಇದಕ್ಕಾಗಿ ತನ್ನನ್ನು ದುಡಿಸುವವರು ಯಾರೋ ಇರುವರೆಂದು ಒಳಗೇ ಎದೆ ಡವಗುಟ್ಟುತ್ತದೆ. ಅದರ ಗುಟ್ಟು ಎದ್ದು ಕಾಣುವಂತೆ ಒಮ್ಮೊಮ್ಮೆ ಓದಿನ ಸೆಲೆ ಇಲ್ಲದವನ ಬಾಯಿಂದ ಕೂಡ ದೇವರೇ ತನ್ನನ್ನು ಕಾಪಾಡಬೇಕೆಂದು ದೇವರ ಹೆಸರು ಬರುತ್ತದೆ. ಇದಲ್ಲದೆ ಈ ಜಗತ್ತನ್ನು ದೇವರೇ ಸೃಷ್ಟಿಸಿರುವನೆಂದೂ ದೇವರೇ ಕಾಪಾಡುವನೆಂದೂ ಎಲ್ಲರ ತಿಳಿವಳಿಕೆಯಾಗಿರುತ್ತದೆ. ಆ ದೇವರ ಸ್ವರೂಪವೇನು? ಕುಂಬಾರನು ಮಣ್ಣಿನಿಂದ ಮಡಿಕೆಯನ್ನು ಮಾಡಿದಂತೆ ಅವನು ಜಗತ್ತನ್ನು ಏತರಿಂದ ಮಾಡಿದನು? ದುಃಖಮಯವಾಗಿ ತೋರುತ್ತಿರುವ ಜಗತ್ತನ್ನು ನಾವು ಅವನ

ಸಹಾಯದಿಂದ ಸುಖಮಯವಾಗಿ ಮಾಡಿಕೊಳ್ಳಲಾದೀತೆ? ಅದಕ್ಕೇನು ಮಾಡಬೇಕು? ಇವುಗಳನ್ನೆಲ್ಲ ನಾವು ಗೊತ್ತುಮಾಡಿಕೊಳ್ಳಬೇಕಾಗುತ್ತದೆ. ದೇವರ ನೆರವು ದೊರೆತರೆ ಜಗತ್ತು ಸುಖಮಯವಾಗುವದೆಂದು ಗೊತ್ತಾದರಂತೂ ಈ ಪ್ರಶ್ನೆಗಳ ಮಹತ್ವವು ತನ್ನ ತುಟ್ಟತುದಿಗೇರುವದು. ಆದ್ದರಿಂದ ಈ ಜಗತ್ತಿನಲ್ಲಿ ಹುಟ್ಟಿರುವ ಎಲ್ಲರೂ ಈಶ್ವರ, ಜೀವ, ಜಗತ್ತು- ಇವರ ಸ್ವರೂಪ ಮೊದಲಾದ ವಿಚಾರಗಳನ್ನು ಪ್ರಯತ್ನಪೂರ್ವಕವಾಗಿ ತಿಳಿಯಬೇಕಾಗಿರುವದು.

*****

## 2. ಈ ಒಗಟುಗಳನ್ನು ಒಡೆಯುವದಕ್ಕೆ ವೇದಾಂತವೇ ಗತಿ

ಈ ಒಗಟುಗಳನ್ನು ನಾವು ನಾವೇ ನಮ್ಮ ಬುದ್ಧಿಯ ಬಲದಿಂದ ಒಡೆಯುವದೆಂಬುದು ಆಗದ ಮಾತು. ಇಂದ್ರಿಯಗಳಿಗೆ ಇದಿರಾಗಿ ನಿಂತು ಕಾಣಿಸಿಕೊಳ್ಳುವ ವಿಷಯದಲ್ಲಾದರೆ ಬುದ್ಧಿಯು ತನ್ನ ಬಾಲವನ್ನು ಸ್ವಲ್ಪ ಅಲ್ಲಾಡಿಸೀತು. ಮೇಲೆ ಹೇಳಿದ ಮೂರು ವಸ್ತುಗಳಲ್ಲಿ ಜೀವ ಮತ್ತು ಈಶ್ವರ ಎಂಬ ಎರಡಂತು ಅಂಥವುಗಳಲ್ಲವೇ ಅಲ್ಲ. ಜೀವನಿರುವ ಶರೀರವು ಕಣ್ಣೆದುರಿಗೆ ಕಾಣಬಹುದು. ಆದರೆ ಅದು ಜೀವನ ಸ್ವರೂಪವಲ್ಲವೆಂದು ಮೊದಲೇ ನೆನಪುಗೊಟ್ಟಿದ್ದೇವೆ. ಶರೀರಕ್ಕೆ ಶಕ್ತಿಯನ್ನು ಕೊಡುವದಾಗಿ ಒಳಗಿರುವ ಚೈತನ್ಯವು ಜೀವನ ಸ್ವರೂಪ. ತನ್ನನ್ನು ತಾನೇ ಕಾಣಲರಿಯದ ಕಣ್ಣು ತನ್ನ ಬೆನ್ನಹಿಂದೆ ಇರುವ ಜೀವನನ್ನು ಹೇಗೆ ಕಂಡೀತು? ಆದ್ದರಿಂದ ಜೀವಸ್ವರೂಪವು ಕಣ್ಣಿಗೆ ಕಾಣತಕ್ಕದ್ದಲ್ಲ. ಈಶ್ವರನೆಂಬುವನಂತು ಪುರಾಣದ ವ್ಯಕ್ತಿಯಾಗಿರುವನೇ ಹೊರತು ಎಲ್ಲಿಯೂ ಕಣ್ಣೆದುರಿಗೆ ಬಂದು ವ್ಯವಹಾರಮಾಡಿದ್ದು ಕಂಡು ಬಂದಿಲ್ಲ. ಹೀಗೆ ಜೀವ ಮತ್ತು ಈಶ್ವರ ಎಂಬೆರಡು ವಸ್ತುಗಳೂ ಇಂದ್ರಿಯಗಳಿಗೆ ನಿಲುಕದೆ ಇರತಕ್ಕವುಗಳು. ಇವುಗಳ ಮುಂದೆ ಬುದ್ಧಿಯ ಆಟವು ನಡೆಯಲಾರದು.

ಇನ್ನು ಜಗತ್ತೆಂಬುದು ಇಂದ್ರಿಯಗಳಿಗೆ ಕಾಣತಕ್ಕದ್ದೇನೋ ಅಹುದು. ಇಷ್ಟುಮಾತ್ರದಿಂದ ಬುದ್ಧಿಯು ಅದನ್ನು ತೂಕಕ್ಕೆ ಹಾಕಿ ಎತ್ತಿಹಿಡಿಯಲಾರದು. ಏಕೆಂದರೆ: ಜಗತ್ತಿನಲ್ಲಿಯೇ ಸೇರಿಕೊಂಡಿರುವ ನಮ್ಮ ಇರುವಿಕೆಯು ಮಹಾಕಾಶದಲ್ಲಿ ತೇಲಾಡುವ ಪರಮಾಣುವಿನಂತೆ ಇರುವದು. ನಾವಿನ್ನು ಹೇಗೆ ಜಗತ್ತನ್ನು

ತೂಗಲಾದೀತು! ಜಗತ್ತು ಹುಟ್ಟಿದಮೇಲೆ ತಲೆ ಎತ್ತಿರುವ ನಮ್ಮ ಬುದ್ಧಿಯು ಜಗತ್ತು ಹುಟ್ಟುವದಕ್ಕೆ ಮುಂಚೆ ಇದ್ದ ಸ್ಥಿತಿಯನ್ನು ನಿರ್ಧರಿಸಹೋಗುವುದು ಸಾಹಸದ ಮಾತು. ಆದರೂ ಜಗತ್ತು ಇಂದ್ರಿಯಗಳಿಗೆ ಕಾಣಬರುವದಾದ್ದರಿಂದ ಭೌತಿಕಶಾಸ್ತ್ರಜ್ಞರು ಅದರ ಹಾಸುಹೊಕ್ಕುಗಳನ್ನೆಲ್ಲ ಕಾಣುವ ಕೆಲಸಕ್ಕೆ ಕೈಹಾಕಿ ಎಷ್ಟೋ ದೂರ ಮುಂದುವರಿದಿರುವರು. ಆದರೂ ಅವರಿಗೆ ಅದು ನಿಲುಕಿಲ್ಲ. ಮುಂದೆಯೂ ನಿಲುಕಲಾರದೆಂದೇನಾದರೂ ಭವಿಷ್ಯವನ್ನು ಹೇಳಹೋದರೆ ಅದು ಈ ಕಾಲದಲ್ಲಿ ಯಾರಿಗೂ ಸೊಗಸುವದಿಲ್ಲ. ಒಂದು ಪಕ್ಷ ಅವರು ಅದರ ನೆಲೆಯನ್ನು ಕಂಡುಹಿಡಿದರೂ ಜಗತ್ತೆಂಬುದೆಂದಿದ್ದೇ ಇರುವದೆಂದು ಮೊದಲೇ ಇಟ್ಟುಕೊಂಡು ಎಚ್ಚರದಲ್ಲಿ ಆಗುವ ಅದರ ಬದಲಾವಣೆಗಳೇ ಮೊದಲಾದವುಗಳ ಮೇಲೆ ತಮ್ಮ ವಿಚಾರವನ್ನು ಹಾಯಿಸಬಹುದು. ಆದರೆ ಅದು ಕನಸಿನಲ್ಲಿಯೂ ನಿದ್ರೆಯಲ್ಲಿಯೂ ಇಲ್ಲದಂತಾಗುವ ವಿಷಯವನ್ನು ಕೆಣಕುವದಕ್ಕೆ ಅವರು ಹೋಗುವ ಸೂಚನೆ ಕಾಣುವದಿಲ್ಲ. ಒಂದು ಪಕ್ಷ ಅದಕ್ಕೂ ಕೈಹಾಕಿದರೆ ಅದು ಇಂದ್ರಿಯಗಳಿಗೆ ನಿಲುಕದ ವಿಷಯವೆಂದು ಮನಗಾಣುವುದರ ಹೊರತು ಅವರಿಗೆ ಬೇರೆ ಗತಿ ಇಲ್ಲ. ಏಕೆಂದರೆ, ಇಂದ್ರಿಯಗಳಿಗೆ ನಿಲುಕುವದೆಂಬ ಮಾತು ಬರೀ ಎಚ್ಚರಕ್ಕೆ ಸಂಬಂಧಪಟ್ಟದ್ದಾಗಿರುವದು. ಒಂದು ಪಕ್ಷ ಕನಸಿನಲ್ಲಿಯೂ ಇಂದ್ರಿಯಗಳಿಗೆ ನಿಲುಕವದೆಂಬ ಮಾತಿದ್ದರೂ ತನಿನಿದ್ರೆಯಲ್ಲಂತೂ ಅದರ ಸೆಲೆಯೇ ಇಲ್ಲ. ಇನ್ನು ಎಷ್ಟೋ ಜನರು ಕನಸುಗಾಣುತ್ತಿರುವಾಗಲೂ ಎಷ್ಟೋ ಜನರು ಎಚ್ಚರದಲ್ಲಿ ಜಗತ್ತನ್ನು ಕಾಣುತ್ತಿರುವರೆಂಬುದರ ಮೇಲೆ ಎಚ್ಚರದ ಜಗತ್ತು ಕನಸಿನಲ್ಲಿ ಇಲ್ಲದಂತಾಗುವದೆಂಬ ಮಾತೇ ನಿಲ್ಲುವದಿಲ್ಲವೆಂದು ಹಾರಿಸುವದಕ್ಕೆ ಹೋಗುವದೂ ಕೆಲಸಕ್ಕೆ ಬರುವದಿಲ್ಲ. ಎಚ್ಚರದ ಜಗತ್ತು ಎಚ್ಚರದಲ್ಲಿರುವ ಎಲ್ಲರಿಗೂ ಕಾಣುತ್ತಲೆ ಇರುವದು ನಿಜವಾದರೂ ಯಾರ ಕನಸಿನಲ್ಲಿಯೂ ಅದು ಬಂದು ಕಾಣಿಸಿಕೊಳ್ಳುವದಿಲ್ಲ. ಎಚ್ಚರದ ಜಗತ್ತು ಎಚ್ಚರವೆಂಬ ಅವಸ್ಥೆಯನ್ನು ಬಿಟ್ಟು ಇನ್ನೊಂದವಸ್ಥೆಯನ್ನು ಇಣಕಿ ನೋಡಲೂ ಆರದು. ಆದ್ದರಿಂದ ಹೀಗಿರುವ ಜಗತ್ತಿನ ನೆಲೆಯನ್ನು ಕಾಣುವದು ಇಂದ್ರಿಯಗಳಿಗೆಂದೂ ದಕ್ಕುವ ಮಾತಲ್ಲ.

ಹೀಗೆ ಜಗತ್ತಿನ ಬುಡವನ್ನು ಅಲ್ಲಾಡಿಸಿ ನೋಡುವದು ಇಂದ್ರಿಯಗಳಿಗೆ ಆಗದ ಮಾತಾದ್ದರಿಂದ ಇಂದ್ರಿಯಗಳು ಈ ವಿಚಾರದಲ್ಲಿ ತಲೇ ಬಗ್ಗಿಸಿಕೊಳ್ಳುವವೆಂಬ ಮಾತೊಂದು ಕಡೆ ಇರಲಿ. ತಮ್ಮ ಆಟದ ಬಯಲಾದ ಈ ಜಗತ್ತಿನಲ್ಲಿ ತಾವು ಯಾವ ವಸ್ತುಗಳ ಹೆಗಲ ಮೇಲೆ ಕೈಹಾಕಿಕೊಂಡು ಪಿಶಾಚ ನರ್ತನವನ್ನು ಮಾಡುತ್ತಿರುವವೊ

ಅಂಥ ವಿಷಯಗಳ ವಿಚಾರದಲ್ಲಿ ಕೂಡ ಇಂದ್ರಿಯಗಳು ತಾವು ಸಾಕ್ಷ್ಯವನ್ನು ಹೇಳುವದಕ್ಕೆ ಎದೆಗೊಟ್ಟು ನಿಲ್ಲಲಾರವು. ಒಂದು ಪಕ್ಷ ಹೇಳಿದರೂ ಎಷ್ಟೋ ಸಂದರ್ಭಗಳಲ್ಲಿ ಆ ಮಾತಿಗೆ ಬೆಲೆ ಇರುವದಿಲ್ಲ. ಈಗ ನೋಡಿ, ತಾಯಿತಂದೆಗಳು ಇಂದ್ರಿಯಗಳಿಗೆ ಕಾಣಬರುವವರಷ್ಟೆ. ಈ ದಂಪತಿಗಳು ತನ್ನ ತಾಯಿತಂದೆಗಳೆಂದು ಬೆಟ್ಟಿಟ್ಟು ತೋರಿಸಿ ಇಂದ್ರಿಯಗಳು ಹೇಳಲಾದೀತೆ? ಆ ದಂಪತಿಗಳಿಂದ ತಾನು ಹುಟ್ಟಿದ್ದು ತನಗೆ ಗೊತ್ತಿದೆಯೆ? ಹಾಗೆ ಗೊತ್ತಾಗುವದಾಗಿದ್ದರೆ ಕುಂತಿಯ ಮಗನಾದ ಕರ್ಣನು ತನ್ನನ್ನು ರಾಧೆಯ ಮಗನೆಂದೇಕೆ ತಿಳಿದುಕೊಂಡನು? ಆದ್ದರಿಂದ ಈ ವಿಷಯದಲ್ಲಿ ಇಂದ್ರಿಯಗಳು ನುಡಿಯುವ ಸಾಕ್ಷ್ಯಕ್ಕೆ ಹುರುಳಿಲ್ಲ. ಆದಕಾರಣ ಪ್ರತ್ಯಕ್ಷವೆಂಬ ಪ್ರಮಾಣವು ಜಗತ್ತಿನ ಬುಡವನ್ನು ಅಲ್ಲಾಡಿಸಲಾರದು.

ಪ್ರತ್ಯಕ್ಷವನ್ನು ಹಿಂದಕ್ಕಿಟ್ಟು ಮುಂದೆ ಹೊರಟರೆ ಅನುಮಾನ ಪ್ರಮಾಣದ ಹಣೆಯ ಬರಹವೂ ಅಷ್ಟೆ. ಪ್ರತ್ಯಕ್ಷವನ್ನು ಗಟ್ಟಿಯಾಗಿ ಹಿಡಿದುಕೊಂಡು ಅದರ ಬೆಂಬಲದಿಂದ ಊಹೆಗೆ ನಿಲುಕಿಸಿಕೊಳ್ಳುವದು ಅನುಮಾನ. ಪ್ರತ್ಯಕ್ಷವೇ ತನ್ನ ಕಾಲಮೇಲೆ ತಾನು ನಿಲ್ಲದಿರುವಾಗ ಅದರ ಶಕ್ತಿಯನ್ನು ಕೈಗಡವಾಗಿ ತೆಗೆದುಕೊಂಡು ತಲೇ ಎತ್ತುವ ಅನುಮಾನದಲ್ಲಿನ್ನೇನು ಕೆಚ್ಚಿದ್ದೀತು?

ಅನುಮಾನವನ್ನೂ ಪಕ್ಕಕ್ಕೆ ಸರಿಸಿಬಿಟ್ಟರೆ ಇನ್ನು ಶಬ್ದವೆಂಬ ಪ್ರಮಾಣವೇ ಗತಿ. ಲೋಕದಲ್ಲಿ ನೋಡಿದರೆ ತನ್ನ ತಾಯಿತಂದೆಗಳು ಯಾರೆಂಬುದೂ ತನಗೆ ಎರಡನೆಯವರಿಂದಲೇ ತಿಳಿಯಬೇಕು. ಆದರೆ ಎರಡನೆಯವರ ಮಾತಿನ ಮೇಲೆ ಭರವಸೆಯನ್ನಿಡುವದರಲ್ಲಿಯೂ ಲೋಕದಲ್ಲಿ ಮೋಸವಾಗುವದುಂಟು. ಕರ್ಣನು ತಾನು ರಾಧೆಯ ಮಗನೆಂದು ಎರಡನೆಯವರ ಮಾತಿನಿಂದಲೆ ತಿಳಿದಿದ್ದನು. ಆದರೆ ಅದು ತಪ್ಪೆಂದು ಎಷ್ಟೋ ದಿನದ ಮೇಲೆ ಗೊತ್ತಾಯಿತು. ಇದಕ್ಕೆ ಕಾರಣವೇನೆಂದರೆ: ಕರ್ಣನಿಗೆ ರಾಧೆಯನ್ನು ತಾಯಿಯೆಂದು ತಿಳಿಸಿದವರು ಚೆನ್ನಾಗಿ ಅರಿತವರೂ ಅಲ್ಲ; ಅವನಿಗೆ ನಿಜವನ್ನೇ ತಿಳಿಸಬೇಕೆಂಬ ಉದ್ದೇಶದವರೂ ಅಲ್ಲ, ಕರ್ಣನು ರಾಧೆಯ ಮನೆಯಲ್ಲಿ ಬೆಳೆಯುತ್ತಿದ್ದದ್ದನ್ನು ನೋಡಿ ಅವರು ಹೆಚ್ಚು ವಿಚಾರವಿಲ್ಲದೆ ಕರ್ಣನನ್ನು ರಾಧೆಯ ಮಗನೆಂದು ಹೇಳಿಬಿಟ್ಟರು. ಅವನ ಹುಟ್ಟಿನ ಆಗುಹೋಗುಗಳನ್ನೆಲ್ಲ ಅರಿತ ಕೃಷ್ಣನು ಅವನಿಗೆ ನಿಜವನ್ನೇ ತಿಳಿಸಬೇಕೆಂದು ಬಯಸುವವನಾಗಿ ಅವನ ನಿಜತ್ವವನ್ನು ಬಯಲಿಗೆ ತಂದನು. ಹೀಗೆ ಚೆನ್ನಾಗಿ ತಿಳಿದವರಾಗಿ ನಿಜವನ್ನೆ ತಿಳಿಸಬೇಕೆನ್ನುವವರ ಮಾತೇ ಈ ಲೋಕದಲ್ಲಿ ಬಹು ದೊಡ್ಡ ಪ್ರಮಾಣ. ಎಲ್ಲ ನಡೆವಳಿಕೆಗಳಿಗೂ ಇದು ತಾಯಿಬೇರು.

ಈಶ್ವರ, ಜೀವ ಮತ್ತು ಜಗತ್ತು - ಈ ವಿಷಯಗಳಿಗೂ ಅಂಥ ಮಾತೇ ಪ್ರಮಾಣ. ನಮ್ಮಲ್ಲಿರುವ ಅಂಥ ಮಾತುಗಳ ಗುಂಪನ್ನು ವೇದಾಂತವೆನ್ನುತ್ತಾರೆ. ವೇದಾಂತವೆಂದರೆ ವೇದದ ಕೊನೆಯಲ್ಲಿರುವ ಉಪನಿಷತ್ತುಗಳೆಂದರ್ಥ. ವೇದವು ಯಾರಿಂದಲೂ ಪ್ರಯತ್ನಪೂರ್ವಕವಾಗಿ ಹೇಳಿದ ಮಾತುಗಳ ಗುಂಪಲ್ಲ. ಹಾಗಿದ್ದರೆ ಆ ಪುರುಷನ ಲೋಪದೋಷಗಳ ಸೋಂಕು ಆ ಮಾತುಗಳಲ್ಲಿಯೂ ಇರುತ್ತಿತ್ತು. ವೇದವು ದೇವರ ಬಾಯಿಂದಲೆ ಬಂದದ್ದೆನ್ನುವರು. ದೇವರು ಎಲ್ಲವನ್ನೂ ಬಲ್ಲವನೆಂದೂ ಎಲ್ಲರಿಗೂ ನಿಜವನ್ನು ತಿಳಿಸುವವನೆಂದೂ ಎಲ್ಲರೂ ಒಪ್ಪಿಕೊಳ್ಳುವರು. ಆದ್ದರಿಂದ ಅವನ ಮಾತಿನಲ್ಲಿ ಮೋಸದ ಸೆಲೆ ಇಲ್ಲ. ವೇದವು ಈ ದೇವರ ಬಾಯಿಂದ ಬಂದದ್ದೆಂದು ಒಪ್ಪಿಕೊಳ್ಳದಿದ್ದರೂ ಅದು ಯಾರೊಬ್ಬರ ಪ್ರಯತ್ನದಿಂದಲೂ ಬಂದದ್ದಲ್ಲವೆಂಬ ಮಾತಿಗೆರಡಿಲ್ಲ. ಇಂದ್ರಿಯಗಳಿಗೂ ಮತ್ತು ಮನಸ್ಸಿಗೂ ನಿಲುಕದ ವಿಚಾರಗಳಿಗೆಲ್ಲ ನಮಗೆ ವೇದವೇ ಪ್ರಮಾಣ. ವೇದಾಂತವು ಈಶ್ವರ, ಜೀವ ಮತ್ತು ಜಗತ್ತು ಮೊದಲಾದ ವಿಷಯಗಳ ವಿಚಾರದಲ್ಲೆಲ್ಲ ಬಹು ಚೆನ್ನಾಗಿ ನಮ್ಮ ಕಣ್ಣು ಪರೆಯನ್ನು ತೆಗೆಯುವದು.

ವೇದಾಂತದ ಮೇಲೆ ಭರವಸೆಯನ್ನಿಡುವದೆಂಬುದು ಒಂದು ಕುರುಡು ನಂಬಿಕೆಯನ್ನು ಬೆಳೆಸುವ ಮಾತಾಯಿತೆಂದು ತಿಳಿಯಬಾರದು. ವೇದವು ತಾನೊಂದು ಹೊಸ ಮಾತನ್ನು ಹೇಳಿ ಅಲ್ಲಿಗೇ ಸುಮ್ಮನಾಗಿದ್ದರೆ ಅದರ ಮೇಲೆ ಭರವಸೆಯನ್ನಿಡುವದು ಕುರುಡು ನಂಬಿಕೆಯಾಗುತ್ತಿತ್ತು. ಅದು ತಾನು ಹೇಳುವ ಅಭಿಪ್ರಾಯಗಳನ್ನು ಯುಕ್ತಿಗಳಿಂದ ಸಿದ್ಧಗೊಳಿಸಿ ತೋರಿಸುತ್ತದೆ. ಆದ್ದರಿಂದ ಅದು ಕುರುಡು ನಂಬಿಕೆಯಲ್ಲ; ನಿಜವಾದ ತಿಳಿವಳಿಕೆ. ಯುಕ್ತಿಗಳಿಂದ ಸಿದ್ಧವಾಗುವ ತತ್ತ್ವವನ್ನು ತಿಳಿಯುವದಕ್ಕೆ ವೇದಾಂತಕ್ಕೇಕೆ ಶರಣು ಹೋಗಬೇಕೆಂದು ತೋರಬಹುದು. ಆ ಯುಕ್ತಿಗಳು ವೇದಾಂತಗಳಿಂದ ನಮಗೆ ತಿಳಿಯಬೇಕೇ ಹೊರತು ನಮ್ಮ ಬುದ್ಧಿಯಲ್ಲಿ ತಾನಾಗಿ ತಲೆ ಎತ್ತುವಂಥವುಗಳಲ್ಲ. ಇನ್ನು ಆ ಯುಕ್ತಿಗಳನ್ನು ಹೊಡೆದುಹಾಕುವ ಬೇರೆ ಯುಕ್ತಿಗಳೂ ಇದ್ದರೆ ಗತಿಯೇನೆಂದು ಹೆದರಬೇಕಾದದ್ದಿಲ್ಲ. ಆ ಯುಕ್ತಿಗಳು ನಮ್ಮ ಅನುಭವವೆಂಬ ಬಲವಾದ ಅಡಿಗಲ್ಲಿನ ಮೇಲೆ ನಿಂತಿರುವವುಗಳಾದ್ದರಿಂದ ಅವುಗಳನ್ನು ಕದಲಿಸುವದು ಸಾಧ್ಯವಲ್ಲ. ಇನ್ನು ನಮ್ಮ ಅನುಭವದ ಮಾತಿಗಾದರೂ ವೇದಾಂತದ ದಾಕ್ಷಿಣ್ಯವೇಕೆಂದು ಕೇಳಬಹುದು. ಆ ಅನುಭವಗಳು ಕೂಡ ವೇದಾಂತವು ತೋರಿಸಿದ ಮೇಲೆ ನಮ್ಮಲ್ಲಿ ಎದ್ದು ಕಾಣುವವೇ ಹೊರತು ಇಲ್ಲದಿದ್ದರೆ ಅವುಗಳ ಸುಳಿವೇ ನಮಗೆ ತಿಳಿಯುವದಿಲ್ಲ. ಆದ್ದರಿಂದಲೆ

ಪಾಶ್ಚಿಮಾತ್ಯ ಪಂಡಿತರು ಜಗತ್ತಿನ ತತ್ತ್ವವನ್ನು ಕಾಣಬೇಕೆಂದು ತಮ್ಮ ವಿಚಾರ ಶಕ್ತಿಯನ್ನು ಎಷ್ಟೇ ಮುಂದುವರಿಸಿದರೂ ಕೆಲವು ಅನುಭವಗಳನ್ನೆತ್ತಿ ವಿಚಾರಕ್ಕೆ ಮುಂದಿಡುವ ವೇದಾಂತದ ನೆರವಿಲ್ಲದ್ದರಿಂದ ಅವರು ನಮ್ಮ ವೈದಿಕ ಮಹರ್ಷಿಗಳ ಮಟ್ಟಕ್ಕೆ ಏರಲಿಲ್ಲ. ಈಗ ನಾವು ತಿಳಿಯಬೇಕಾದ ತತ್ತ್ವವು ಅನುಭವಕ್ಕೂ ಯುಕ್ತಿಗೂ ಹೊಂದಿಕೆಯಾದದ್ದಾದ್ದರಿಂದಲೆ ಅವುಗಳನ್ನು ತಮ್ಮ ಬುದ್ಧಿವೈಭವಕ್ಕೆ ತಕ್ಕಂತೆ ಬಳಸುತ್ತಿರುವ ಪಾಶ್ಚಾತ್ಯ ಪಂಡಿತರು ಕೂಡ ಆ ತತ್ತ್ವದ ಎಷ್ಟೋ ಹತ್ತಿರಕ್ಕೆ ಬಂದಿರುವರು.

ಈ ತತ್ತ್ವದ ವಿಚಾರದಲ್ಲಿ ಬೇರೆಬೇರೆ ಮತದವರಲ್ಲಿ ಬೇರೆಬೇರೆ ಧರ್ಮಗ್ರಂಥಗಳಿರುವಾಗ ವೇದಾಂತದಲ್ಲೇನು ಹೆಚ್ಚುಗಾರಿಕೆಯೆಂದರೆ: ಅವೆಲ್ಲ ಒಬ್ಬೊಬ್ಬ ಪುರುಷನ ಬುದ್ಧಿಯ ಲೋಪದೋಷಗಳ ಸೋಂಕಿನಿಂದ ಕೂಡಿದವುಗಳು; ವೇದಾಂತದಲ್ಲಿ ಅದಿಲ್ಲ. ಇದಲ್ಲದೆ ಆ ಗ್ರಂಥಗಳಲ್ಲಿ 'ನಾನು ಹೇಳುವ ಈ ಮಾತನ್ನು ಕೇಳಿ ಇದರಂತೆ ನಡೆಯಿರಿ' ಎಂದಿದೆ. ವೇದದಲ್ಲಿ 'ಈ ಮಾತು ಯುಕ್ತಿಗೂ ಅನುಭವಕ್ಕೂ ಹೊಂದಿಕೆಯಾಗಿರುವದರಿಂದ ಇದರಂತೆ ನಡೆಯಿರಿ' ಎಂದಿದೆ. ಇನ್ನೊಂದು ವಿಶೇಷವೇನೆಂದರೆ : ಇಂಥ ತತ್ತ್ವವಿಚಾರಗಳಿಗೆಲ್ಲ ನಮ್ಮ ದೇಶವೇ ತೌರುಮನೆಯೆಂದು ಜಗತ್ತಿನ ವಿಚಾರಪರರೆಲ್ಲರೂ ಒಪ್ಪಿರುವರು. ನಮ್ಮ ದೇಶದವರಿಗೆ ಸ್ವಭಾವವಾಗಿ ಈ ವಿಚಾರದಲ್ಲಿ ಮನಸ್ಸು ಮುಂದುವರಿಯುವದು ಹೆಚ್ಚು. ಉಳಿದ ದೇಶಗಳಲ್ಲಿ ಹಾಗಿಲ್ಲ. ಅಲ್ಲಿನವರಿಗೆ ಈ ಲೋಕದಲ್ಲಿ ನೆಮ್ಮದಿಯಾಗಿ ಬಾಳಬೇಕೆಂಬ ಬಾಯಾರಿಕೆ ಹೆಚ್ಚು. ಅದರ ಜೊತೆಗೆ ತತ್ತ್ವವಿಚಾರದ ಹಂಬಲೂ ಇರುವವರು ಒಬ್ಬೊಬ್ಬರಿರುತ್ತಾರೆ. ಆದ್ದರಿಂದ ನಮ್ಮ ದೇಶದವರನ್ನು ಉದ್ಧರಿಸಬೇಕೆಂದು ಇಲ್ಲಿ ಅವತರಿಸಿದ ಪರಮಾತ್ಮನು ಇವರ ತತ್ತ್ವವಿಚಾರದ ಬಾಯಾರಿಕೆಯ ವೇಗಕ್ಕೆ ತಕ್ಕಂತೆ ತತ್ತ್ವ ವಿಚಾರದ ಉಪದೇಶವನ್ನೆ ಮುಖ್ಯವಾಗಿ ಹೇಳಿರುವನು. ಹೀಗಾಗಿ ಈಶ್ವರ, ಜೀವ ಮತ್ತು ಜಗತ್ತು ಇವುಗಳ ವಿಚಾರವು ಪರಮ ದಯಾಳುವಾದ ಆ ದೇವರು ನಮಗೆ ನಿಜವನ್ನೆ ತಿಳಿಸಬೇಕೆಂಬ ಉದ್ದೇಶದಿಂದ ಹೇಳಿರುವ ವೇದಾಂತದಲ್ಲಿ ಪೂರ್ಣವಾಗಿ ಇಳಿದು ಬಂದಿರುವದು. ಪರದೇಶದವರನ್ನು ಉದ್ಧರಿಸಬೇಕೆಂದು ಪರದೇಶದಲ್ಲಿ ಅವತರಿಸಿದ ಪರಮಾತ್ಮನು ಅಲ್ಲಿ ಅವರ ಈ ಲೋಕದ ನೆಮ್ಮದಿಯಾದ ಬಾಳಿಕೆಯ ಬಾಯಾರಿಕೆಗೆ ತಕ್ಕಂತೆ ಲೋಕಾಭಿರಾಮವಾದ ನಡೆನುಡಿಗಳ ಮಾತುಗಳನ್ನೆ ಹೆಚ್ಚಾಗಿ ಹೇಳಿ ಊಟದೊಳಗಿನ ಉಪ್ಪಿನಕಾಯಂತೆ ತತ್ತ್ವವಿಚಾರದ ಕೆಲವು ಮಾತುಗಳನ್ನು ಮಾತ್ರ ಅಲ್ಲಿ

ಸೂಚಿಸಿರುವನು. ಹೀಗಾಗಿ ಆ ಗ್ರಂಥಗಳಲ್ಲಿ ತತ್ತ್ವವಿಚಾರವು ಹೆಚ್ಚಾಗಿ ಇಳಿದುಬಂದಿಲ್ಲ. ಆದ್ದರಿಂದ ಈಗ ನಮ್ಮ ಮುಂದಿರುವ ಒಗಟುಗಳನ್ನು ಒಡೆಯುವುದಕ್ಕೆ ವೇದಾಂತವೇ ಗತಿ.

*****

## 3. ವೇದಾಂತದ ತಾತ್ಪರ್ಯ

ಸೃಷ್ಟಿಗಿಂತ ಮೊದಲಂತು ಈಶ್ವರನೊಬ್ಬನೇ ಇದ್ದನೆಂದೂ ಎರಡನೆಯದೇನೇನೂ ಇರಲಿಲ್ಲವೆಂದೂ ಆಸ್ತಿಕರೆಲ್ಲರೂ ಅಭಿಪ್ರಾಯಪಡುತ್ತಾರೆ. ಎರಡನೆಯವುಗಳನ್ನು ಎಣಿಸಬೇಕಾದರೆ ಮೊದಲನೆಯದನ್ನು ಒಂದನೆಯದೆನ್ನ ಬೇಕಾಗುವದು. ಎರಡನೆಯವುಗಳಿಲ್ಲದಿದ್ದರೆ ಮೊದಲನೆಯದನ್ನು ಒಂದನೆಯದೆನ್ನ ಬೇಕಾದ ಅಗತ್ಯವೇ ಇಲ್ಲ. ಎರಡನೆಯವುಗಳಿಂದ ಬಿಡಿಸಿ ಹೇಳಬೇಕಾದರೆ ಮೊದಲನೆಯದಕ್ಕೆ ಏನಾದರೂ ಹೆಸರಿಡಬೇಕಾಗುವದು. ಎರಡನೆಯವುಗಳೇ ಇಲ್ಲದ ಸ್ಥಿತಿಯಲ್ಲಿರುವುದಕ್ಕೆ ಅದಕ್ಕೆ ತನ್ನ ಸ್ವಂತವಾದ ಯಾವ ಹೆಸರೂ ಇರುವ ಸಂಭವವಿಲ್ಲ. ಆದ್ದರಿಂದ ಅದನ್ನು ಎರಡನೆಯದಿಲ್ಲದ್ದೆಂದು ಎಲ್ಲರೂ ಒಮ್ಮುಖವಾಗಿ ಒಪ್ಪುವರು. ಸೃಷ್ಟಿಯಾಗಿರುವದೆಂಬ ಈ ಕಾಲದಲ್ಲಿ ಬೇರೆಬೇರೆ ಜೀವರು ಮತ್ತು ಬಗೆಬಗೆಯ ವಸ್ತುಗಳು ಎಂಬ ಭೇದಗಳುಳ್ಳ ಎರಡನೆಯವುಗಳು ಕಣ್ಣಿಗೆ ಕಟ್ಟಿದಹಾಗೆ ಕಾಣುತ್ತಿರುವವು. ಆದರೆ ಈ ಭೇದಗಳು ನಿಜವಾದವುಗಳೆ? ಮೊದಲಿಲ್ಲದೆ ಇದ್ದು ಈಗ ತಲೇ ಎತ್ತಿರುವುದು ಹೇಗೆ ನಿಜವಾದದ್ದೆನಿಸೀತು? ನಿಜವಾದದ್ದೆನ್ನುವದು ಹಿಂದೆಯೂ ಈಗಲೂ ಮುಂದೆಯೂ ಇರುವದಾಗಬೇಕು 'ಹುಟ್ಟಿದವುಗಳಿಗೆಲ್ಲ ಸಾವು ಬೆನ್ನು ಹತ್ತಿಯೇ ಇರುವದಲ್ಲ! ಇನ್ನು ಭೇದಗಳನ್ನು ಸುಳ್ಳಾದವುಗಳೆನ್ನೋಣವೆಂದರೆ ಎದುರಿಗೆ ಕಾಣುವವಲ್ಲ!' ಎಂಬ ವಿಚಾರವು ಮನಸ್ಸನ್ನು ಕೊರೆಯುತ್ತಿರುವದು. ಈ ಯೋಚನೆಯನ್ನೆ ಹಚ್ಚಿಕೊಳ್ಳದವರು ಅದರ ಕೊರೆತಕ್ಕೆ ಸಿಕ್ಕದೆ ಹಾಯಾಗಿರಬಹುದು. ಬುದ್ಧಿಶಾಲಿಗಳು ಹಾಗಿರುವದಕ್ಕಾಗುವದಿಲ್ಲ. ದೇವರು ನಮಗೆ ಬುದ್ಧಿಯನ್ನು ಕೊಟ್ಟಿರುವದೇಕೆ? ಈ ಜಗತ್ತಿನ ಬಾಳಿನಲ್ಲಿ ನೆಮ್ಮದಿಯಾಗಿರುವ ಮಾತ್ರಕ್ಕೆ ಅಲ್ಲ. ಎಷ್ಟೋ ಪಶುಪಕ್ಷಿಗಳೂ ನೆಮ್ಮದಿಯಾಗಿರಬಹುದು. ನಾವು ಬುದ್ಧಿಯನ್ನು ಪಡೆದಿರುವದು ಸಾರ್ಥಕವಾಗುವದಕ್ಕಾಗಿ ಅದನ್ನು ಈ ವಿಚಾರಕ್ಕೆ ಉಪಯೋಗಿಸಲೇ ಬೇಕು. ಆದ್ದರಿಂದ ನಮಗೆ ಈ ಜಗತ್ತನ್ನು ಒರೆಗೆ ಹಚ್ಚಿ ನೋಡಬೇಕೆಂಬ ಚಿಂತೆ.

ಈ ಎರಡನೆಯವುಗಳೆಲ್ಲ ನಮಗೆ ಕಾಣುವಂತೆ ನಿಜವಾದವುಗಳೇ ಎಂದು ಉಳಿದ ಎಲ್ಲ ಧರ್ಮಪಂಥಗಳವರೂ ಅಭಿಪ್ರಾಯಪಡುವರು. ವೇದವನ್ನು ಹಿಡಿದು ಮಾತಾಡುತ್ತೇವೆಂದು ಹೇಳುವ ಕೆಲವರು ಕೂಡ ಅದೇ ಹಿಮ್ಮೇಳವನ್ನು ಹಾಡುವರು. ಇಲ್ಲಿ ನಮಗೊಂದು ಸಂಶಯದ ಸಿಬುರೇಳುತ್ತದೆ. ಕಾಣುವ ಎರಡನೆಯವುಗಳೆಲ್ಲ ಕಾಣುವಂತೆ ನಿಜವಾದವುಗಳೆಂದು ಹೇಳುವದಕ್ಕೆ ಧರ್ಮಗ್ರಂಥಗಳೇಕೆ ತಲೆಹಾಕಬೇಕು? ಅದರಲ್ಲಿ ದೇವರ ಮುಖದಿಂದ ಬಂತೆಂಬ ವೇದವು ಎಳೇ ಮಕ್ಕಳಿಗೆ ಕೂಡ ತಾನಾಗಿ ತಿಳಿಯುವ ಈ ಅಭಿಪ್ರಾಯವನ್ನು ಹೇಳಿರುವದೆಂಬುದು ಎಲ್ಲರಿಗೂ ತಿಳಿದ ಗುಟ್ಟನ್ನು ಎಲ್ಲವನ್ನೂ ತಿಳಿದವನೊಬ್ಬನು ಪಿಸುಮಾತಿನಲ್ಲಿ ಹೇಳಿದಂತಾಗುವದು. ವೇದಾಂತಕ್ಕೆ ಎಲ್ಲರೂ ಬಾಯಿಹಾಕಬಾರದೆಂದು ಹೇಳುವದುಂಟು. ಅಲ್ಲಿ ಎಲ್ಲರ ಹಲ್ಲಿಗೂ ನುರಿಯದಂಥ ಗಡುಸಾದ ತತ್ತ್ವವಿಚಾರವಿರುವದೇ ಅದು ಗಟ್ಟಿತಲೆಯ ಪರಂಪರೆಯವರಾದ ಕೆಲವರಿಗೆ ಮೀಸಲಾಗಿರುವದಕ್ಕೆ ಕಾರಣ. ಎರಡನೆಯವುಗಳೆಲ್ಲ ನಿಜವೆಂದು ಹೂಂಗುಟ್ಟಿದ ಮೇಲೆ ಅದರಲ್ಲಿನ್ನೇನು ಹೆಚ್ಚಿನ ತೂಕವುಳ್ಳ ವಿಚಾರವಿದೆ? ಇದುವರೆಗೂ ಅಂಥದ್ದೇನೂ ಕಂಡುಬಂದಿಲ್ಲವಾದ್ದರಿಂದ ಎಲ್ಲ ಧರ್ಮಗ್ರಂಥಗಳೂ ಅದರಲ್ಲಿಯೂ ವೇದಾಂತವು ಕೂಡ ತಲೆಯನ್ನು ತಗ್ಗಿಸಬೇಕಾಗುತ್ತದೆ. ಹೀಗಾಗುವದು ಯಾರಿಗೂ ಸರಿದೋರುವದಿಲ್ಲ.

ಭೌತಿಕಶಾಸ್ತ್ರದವರು ಜಗತ್ತಿನ ಇರುವಿಕೆಯ ನಿಜತ್ವದ ವಿಚಾರವನ್ನು ಹೇಗೆ ತಲೆಗೆ ಹಚ್ಚಿಕೊಳ್ಳಲಿಲ್ಲವೊ ಹಾಗೆ ಮತಾಂತರದವರ ಧರ್ಮಗ್ರಂಥಗಳೂ ಆ ವಿಚಾರವನ್ನು ಕೈಬಿಟ್ಟಿರುವಂತೆ ತೋರುತ್ತದೆ. ಈ ಲೋಕದ ಬಾಳಿನ ನೆಮ್ಮದಿಯನ್ನು ಮಾತ್ರ ಬಯಸುವವರಿಗೆ ಈ ವಿಚಾರದ ಅಗತ್ಯವಿಲ್ಲವೆಂದು ಅಲ್ಲಿ ಈ ವಿಚಾರವನ್ನೆತ್ತದೆ ಇರಬಹುದು. ಇಷ್ಟೇ ಅಲ್ಲ, ಜಗತ್ತಿನ ಇರುವಿಕೆಯ ಬುಡವನ್ನೇ ಅಲ್ಲಾಡಿಸುವದಕ್ಕೆ ಹೊರಟರೆ ಜಗತ್ತಿನಲ್ಲಿ ನೆಮ್ಮದಿಯನ್ನು ಬಯಸುವವರಿಗೆ ನಿರಾಶೆಯೇ ಗತಿಯಾದೀತೆಂಬ ಹೆದರಿಕೆಯೂ ದೇವರಿಗೆ ತಲೆದೋರಿರಬಹುದು. ಇಲ್ಲಿಯವರು ಆ ವಿಚಾರಕ್ಕೆ ತಲೆಗೊಡಬಲ್ಲವರಾಗಿರುವದನ್ನು ನೋಡಿ ನಮ್ಮ ವೇದಪುರುಷನು ವೇದಾಂತದಲ್ಲಿ ವಿಚಾರಕ್ಕೇ ಪ್ರಾಶಸ್ತ್ಯವನ್ನು ಕೊಟ್ಟು ಅದನ್ನೇ ಹತ್ತು ಕಡೆಯಿಂದಲೂ ನೋಡಿ ತನ್ನದೇ ಆದ ಒಂದು ಸಿದ್ಧಾಂತವನ್ನು ನಮ್ಮ ಮುಂದಿಟ್ಟಿರುವನು. ಆ ಸಿದ್ಧಾಂತವೇನೆಂದರೆ :

(1) ಸೃಷ್ಟಿಗೆ ಮೊದಲು ಹೇಗೆ ಎರಡನೆಯದಿಲ್ಲದ ಸ್ಥಿತಿ ಇತ್ತೋ ಹಾಗೆ

ಈಗಲೂ ಮುಂದಕ್ಕೂ ಯಾವಾಗಲೂ ಎರಡನೆಯದಿಲ್ಲದ ಸ್ಥಿತಿಯೇ ಇರುವದು. ಈಶ್ವರನೊಬ್ಬನೇ ನಿಜವಾಗಿರುವ ವಸ್ತು.

(2) ಬೇರೆಬೇರೆ ಪ್ರಾಣಿಗಳಲ್ಲಿ ಬೇರೆಬೇರೆ ಜೀವರ ರೂಪದಲ್ಲಿ ಕಾಣುವವನೂ ಆ ಈಶ್ವರನೆ. ಆಕಾಶವು ಎಲ್ಲೆಲ್ಲಿಯೂ ವ್ಯಾಪಿಸಿರುವಂತೆ ಈಶ್ವರನು ಎಲ್ಲೆಲ್ಲಿಯೂ ತುಂಬಿಕೊಂಡಿರುವನು. ಆ ಆಕಾಶವು ಬೇರೆಬೇರೆ ಗಡಿಗೆಗಳ ಸಂಬಂಧದಿಂದ ಬೇರೆಬೇರೆಯಾದ ಗಡಿಗೆಯ ಬಯಲುಗಳೆಂಬಂತೆ ಈಶ್ವರನೆ ಬೇರೆಬೇರೆ ದೇಹಗಳ ಸಂಬಂಧದಿಂದ ಬೇರೆಬೇರೆಯಾದ ಜೀವರೆನಿಸಿ ಕೊಂಡಿರುವನು.

(3) ಬಹುಬಗೆಯೆಂಬುದೆಂದೆಂದಿಗೂ ಎಳ್ಳಷ್ಟೂ ನಿಜವಲ್ಲ. ಎರಡನೆಯವುಗಳೆಲ್ಲ ಈಶ್ವರನ ಮಾಯೆಯಿಂದಾಗಿರುವ ಬರೀ ತೋರಿಕೆ. ಬಹುಬಗೆಯನ್ನು ನಿಜವೆಂದು ಕಾಣುವವನು ಸಾವಿನಿಂದ ಸಾವನ್ನು ಪಡೆಯುತ್ತಿರುತ್ತಾನೆ. ಎರಡನೆಯವೆಂಬವುಗಳೆಲ್ಲ ಹೆದರಿಕೆಯ ತೌರೂರುಗಳು.

(4) ಕಾಣುವ ಎರಡನೆಯವುಗಳನ್ನೆಲ್ಲ ಈಶ್ವರಭಾವನೆಯಿಂದ ಮುಚ್ಚಿ ಹಾಕಿಬಿಡಬೇಕು.

*****

# 4. ನಾನೆಂಬ ಮಾತಿನ ತಪ್ಪಾದ ಅರ್ಥ

'ಯಾವ ಭೇದವೂ ಇಲ್ಲದ ಸ್ಥಿತಿಯೇ ಈಗಲೂ ಇರುವದಾದರೆ ನಮಗೆ ಲೆಕ್ಕವಿಲ್ಲದಷ್ಟು ಭೇದಗಳು ಕಾಣುತ್ತಿರುವದೇಕೆ? ಈಶ್ವರ, ಜೀವ,ಜಗತ್ತು ಎಂಬ ಮೂರರಲ್ಲಿ ಒಂದಕ್ಕೊಂದರ ಬೆರಕೆಯಿಂದ ಜೀವನಿಗೂ ಈಶ್ವರನಿಗೂ ಭೇದ, ಒಬ್ಬ ಜೀವನಿಗೂ ಇನ್ನೊಬ್ಬ ಜೀವನಿಗೂ ಭೇದ, ಈಶ್ವರನಿಗೂ ಜಗತ್ತಿಗೂ ಭೇದ, ಜೀವರಿಗೂ ಜಗತ್ತಿಗೂ ಭೇದ, ಜಡಗಳಿಗೊಂದಕ್ಕೊಂದು ಭೇದ- ಹೀಗೆ ಐದು ಬಗೆಯ ಭೇದಗಳು ಎದ್ದು ಕಾಣುತ್ತ ಭೇದವಿಲ್ಲದ ಸ್ಥಿತಿಯನ್ನು ಮರೆಮಾಡುವವು. ಇದಕ್ಕೇನು ಗತಿ?' ಎಂಬ ಪ್ರಶ್ನೆಯು ತಾನಾಗಿ ನಮ್ಮ ಮುಂದೆ ಬಂದು ನಿಲ್ಲುವದು. ಈ ಭೇದದ ತೋರಿಕೆಯು ಕಣ್ಣಲ್ಲಿ ಕಸರುಳ್ಳವನಿಗೆ ಇಬ್ಬರು ಚಂದ್ರರು ಕಾಣುವಂತೆ ಇರುವದು. ಇದರ ಬಣ್ಣವನ್ನು ಬಯಲಿಗೆ ತರುವದಕ್ಕೆ ಮುಂಚೆ ನಮ್ಮ ಆತ್ಮಸ್ವರೂಪದ ನೆಲೆಯನ್ನು ನಾವು ಅರಿಯುವದು ಬಹು ಅಗತ್ಯವಾಗುವದು. ತಮ್ಮ ನೆಲೆಯೇ ತಮಗೆ

ಗೊತ್ತಿಲ್ಲದವರು ಇನ್ನೊಂದರ ನೆಲೆಯನ್ನು ಹೇಗೆ ಕಂಡಾರು? ಆದ್ದರಿಂದ ಈಗ ನಾವು ನಮ್ಮ ಆತ್ಮಸ್ವರೂಪದ ವಿಚಾರವನ್ನು ತೆಗೆದುಕೊಳ್ಳೋಣ.

'ನಾವೆಲ್ಲರೂ ನಾನು-ನಾ'ನೆಂದು ಹೇಳಿಕೊಳ್ಳುತ್ತಿರುವೆವಷ್ಟೆ. ಆ 'ನಾನು' ಎಂಬ ಮಾತಿನಿಂದ ಕರೆಸಿಕೊಳ್ಳುವ ವಸ್ತುವೇ ನಮ್ಮ ಸ್ವರೂಪ. ಅದು ಯಾವದು? ಸಾಮಾನ್ಯವಾಗಿ ದೇಹವನ್ನು ನಾನೆನ್ನುವದೇ ಹೆಚ್ಚು. ಏಕೆಂದರೆ: 'ನಾನು ನಾ'ನೆನ್ನುವಾಗ ಎಲ್ಲರೂ ಎದೆಯ ಮೇಲೆ ಕೈ ಇಟ್ಟುಕೊಳ್ಳುತ್ತಾರೆ. ನಾನು ಕೆಂಪು, ನಾನು ಉದ್ದ- ಎಂಬ ಮುಂತಾದ ಮಾತುಗಳಲ್ಲಿಯೂ 'ನಾನು' ಎಂಬ ಮಾತಿಗೆ ಶರೀರವೇ ಅರ್ಥ. ಹೆಚ್ಚು ವಿಚಾರಮಾಡದಿರುವಾಗ ಈ ಅರ್ಥವು ಸರಿಯಾಗಿ ಕಂಡರೂ ವಿಚಾರದ ಕಡೆತಕ್ಕೆ ಕೊಟ್ಟರೆ ಇದು ಧೂಳೆದ್ದು ಹೋಗುವದು. ಏಕೆಂದರೆ:

(1) ನಾನು ತಿಳಿಯುತ್ತೇನೆನ್ನುವಾಗ ನಮ್ಮ ಸ್ವರೂಪವು ತಿಳಿಯುವ ಶಕ್ತಿಯುಳ್ಳದ್ದಾಗಬೇಕು. ಶರೀರಕ್ಕೆ ಅದಿಲ್ಲ. ಆದ್ದರಿಂದ ನಾನೆಂಬ ಮಾತಿನ ಅರ್ಥವು ಶರೀರವಲ್ಲ.

(2) ಕನಸಿನಲ್ಲಿ ನಾನು ಕಾಶಿಯಲ್ಲಿದ್ದೆನೆಂದು ಎಚ್ಚರದಲ್ಲಿ ಹೇಳುವೆವಷ್ಟೆ. ಎಚ್ಚರದ ನಮ್ಮ ಸ್ವರೂಪವು ಕನಸಿನಲ್ಲಿ ಕಾಶಿಯಲ್ಲಿ ಇರಬೇಕಾಯಿತು. ನಮ್ಮ ಶರೀರವು ಎಚ್ಚರದಲ್ಲಿ ಮಲಗಿದ ಕಡೆಯಲ್ಲಿಯೇ ಇರುವದು. ಅದು ಕಾಶಿಗೆ ಹೋಗಿಲ್ಲವಾದ್ದರಿಂದ ನಾನೆಂಬ ಮಾತಿನ ಅರ್ಥವು ಶರೀರವಲ್ಲ.

(3) ನಮ್ಮ ಶರೀರವು ಮುಕ್ಕಾಗದೆ ಇದ್ದರೂ ಅದರೊಳಗೆ ಪ್ರಾಣವಾಯು ಓಡಾಡದೆ ಇದ್ದರೆ ನಮ್ಮ ಹಿತಚಿಂತಕರೆ ಆಗ ಅದನ್ನು ಸುಟ್ಟೋ ಹೂಳಿಯೋ ಬಿಡುವರು. ಆದ್ದರಿಂದ ಶರೀರವು ನಮ್ಮ ಸ್ವರೂಪವಲ್ಲ.

(4) ನನ್ನ ಶರೀರವು ಸುಂದರವಾದದ್ದೆನ್ನುವಾಗ ನನಗೆ ಬೇರೆಯಾಗಿ ನನ್ನದೆನಿಸಿಕೊಳ್ಳುವ ಶರೀರವು ನಾನೆಂಬ ಮಾತಿನ ಅರ್ಥವಾಗಲಾರದು.

ಆದ್ದರಿಂದ ನಾನೆಂಬ ಮಾತಿನ ಅರ್ಥವಾದ ವಸ್ತುವನ್ನು ಇನ್ನೂ ಒಳಹೊಕ್ಕು ಹುಡುಕಿ ಕಾಣಬೇಕು. ಶರೀರವನ್ನು ನಾನಲ್ಲವೆಂದು ಕೈಬಿಟ್ಟು ಒಳಹೊಕ್ಕು ಹುಡುಕಿದರೆ ಇಂದ್ರಿಯಗಳು ಮುಂದೆ ಬಂದು ನಿಲ್ಲುವವು. ಏಕೆಂದರೆ : ನಾನು ನೋಡುತ್ತೇನೆ, ನಾನು ಕೇಳುತ್ತೇನೆ- ಎನ್ನುವಾಗ ಕಣ್ಣು, ಕಿವಿ ಮೊದಲಾದ ಇಂದ್ರಿಯಗಳನ್ನು ನಾನೆಂದಂತಾಗುವದು. ವಿಚಾರವನ್ನು ಮುಂದು ಮಾಡುತ್ತಲೆ ಅವುಗಳು ನಾವಲ್ಲವಾಗುವವು. ಏಕೆಂದರೆ :

(1) ಕಣ್ಣುಬಿಟ್ಟುಕೊಂಡು ನೋಡುತ್ತಿದ್ದರೂ ಎಷ್ಟೋ ವೇಳೆ ಮನಸ್ಸು ಬೇರೆಕಡೆಗೆ ಹೋಗಿದ್ದದ್ದರಿಂದ ನಾವು ನೋಡಿಲಿಲ್ಲವೆನ್ನುತ್ತೇವೆ. ಹೀಗೆ ಇಂದ್ರಿಯಗಳು ನೋಡುವ ಮತ್ತು ಕೇಳುವ ಮೊದಲಾದ ಕೆಲಸಗಳನ್ನು ಸ್ವತಂತ್ರವಾಗಿ ಮಾಡಲಾರವಾದ್ದರಿಂದ ಅವು ನಾನೆಂಬ ಮಾತಿನಿಂದ ಕರೆಸಿಕೊಳ್ಳುವದಕ್ಕೆ ತಕ್ಕವುಗಳಲ್ಲ.

(2) ನಾನು ಹೀಗೆ ಊಹಿಸುತ್ತೇನೆನ್ನುವಾಗ ನಮ್ಮ ಸ್ವರೂಪವು ಊಹಿಸುವ ಶಕ್ತಿಯುಳ್ಳದ್ದಾಗಬೇಕು. ಇಂದ್ರಿಯಗಳಿಗೆ ಅದಿಲ್ಲ. ಆದ್ದರಿಂದ ಅವು ನಮ್ಮ ಆತ್ಮವಲ್ಲ.

(3) ಕನಸಿನಲ್ಲಿ ನಾನು ಏನೇನನ್ನೋ ಕಂಡೆನೆಂದೂ ಕೇಳಿದೆನೆಂದೂ ಹೇಳುವೆವಷ್ಟೆ. ನಮ್ಮ ಇಂದ್ರಿಯಗಳು ಹಾಸಿಗೆಯ ಮೇಲೆ ಬಿದ್ದಿರುವ ಶರೀರದಲ್ಲಿ ನಿದ್ರಿಸುತ್ತಿರುವವು. ಅವು ಎಲ್ಲಿಯೂ ಏನನ್ನೂ ಕಾಣಲೂ ಇಲ್ಲ; ಕೇಳಲೂ ಇಲ್ಲ. ಆದ್ದರಿಂದ ಅವು ನಮ್ಮ ಆತ್ಮವಲ್ಲ.

(4) ಕೆಲವು ಇಂದ್ರಿಯಗಳು ಕೆಟ್ಟುಹೋದರೂ 'ನಾನು, ನಾ'ನೆಂಬ ಮಾತಿನ ಅರ್ಥಕ್ಕೆ ಯಾವ ಕೊರತೆಯೂ ಇಲ್ಲದಿರುವದು. ಆದ್ದರಿಂದ ಇಂದ್ರಿಯಗಳು ಆತ್ಮವಲ್ಲ.

(5) ನನ್ನ ಇಂದ್ರಿಯಗಳೆನ್ನುವಾಗ ಇಂದ್ರಿಯಗಳು ನಮ್ಮ ಸ್ವರೂಪಕ್ಕಿಂತ ಬೇರೆಯೆಂದಂತಾಗುವದರಿಂದ ಅವು ನಮ್ಮ ಸ್ವರೂಪವಲ್ಲ.

ಇಂದ್ರಿಯಗಳನ್ನು ಕೈಬಿಟ್ಟು ಇನ್ನೂ ಒಳಹೊಕ್ಕರೆ ಪ್ರಾಣವಾಯುವೆದ್ದು ಕಾಣುವದು. ವಿಚಾರದ ಮುಂದೆ ಅದೂ ನಮ್ಮ ಆತ್ಮನೆನಿಸಿಕೊಳ್ಳುವದಿಲ್ಲ. ಏಕೆಂದರೆ:

(1) ನಾನು ನಿದ್ರೆಯಲ್ಲಿರುವಾಗ ಪ್ರಾಣವಾಯು ಮೂಗಿನಲ್ಲಿ ಓಡಾಡುತ್ತಿದ್ದರೂ ನಮ್ಮ ಪದಾರ್ಥಗಳನ್ನು ಕಳ್ಳರು ಹೊತ್ತುಕೊಂಡು ಹೋಗುವದನ್ನು ನೋಡುತ್ತ ಅದು ಸುಮ್ಮನಿರುವದು. ಅದು ನಮ್ಮ ಸ್ವರೂಪವಾಗಿದ್ದರೆ ಹಾಗೆ ಸುಮ್ಮನಿರುತ್ತಿರಲಿಲ್ಲ. ಆದ್ದರಿಂದ ಅದು ನಾನೆಂಬ ಮಾತಿನ ಅರ್ಥವಲ್ಲ.

(2) ಅದು ಯಾವಾಗಲೂ ಹೊರಕ್ಕೂ ಒಳಕ್ಕೂ ಓಡಾಡುತ್ತಲೇ ಇರುವದರಿಂದಲೂ ಅದು ನಮ್ಮ ಸ್ವರೂಪವಲ್ಲ.

(3) ನನ್ನ ಪ್ರಾಣಗಳೆನ್ನುವಾಗ ಅದು ನನ್ನದೆಂಬ ಮಾತಿನಿಂದ ಕರೆಸಿಕೊಳ್ಳುವದರಿಂದಲೂ ಅದು ನಾನೆಂಬ ಮಾತಿನ ಅರ್ಥವಲ್ಲ.

ಪ್ರಾಣವನ್ನೂ ಕೈಬಿಟ್ಟು ಒಳಕ್ಕೆ ಮುಂದೆ ಹೋದರೆ ಅಂತಃಕರಣವೆಂಬ ವಸ್ತು ಕಾಣಿಸಿಕೊಳ್ಳುವದು. ಅದರಲ್ಲಿ ಎರಡು ಭಾಗಗಳು ತೋರುವವು. ಮುಂದಿಟ್ಟ ಪತ್ರದಲ್ಲಿರುವ ಸಂಗತಿಯು ನ್ಯಾಯಾನ್ಯಾಯಗಳ ವಿಚಾರಕ್ಕೆ ಹೋಗದೆ ತನ್ನ ಮುಂದೆ ಬಂದದ್ದನ್ನೆಲ್ಲ ರಿಜಿಸ್ಟರ್ ಮಾಡುವ 'ಸಬ್-ರಿಜಿಸ್ಟ್ರಾರ್' ಎಂಬ ಅಧಿಕಾರಿಯಂತೆ ಇಂದ್ರಿಯಗಳು ಹೇಳಿದ ಸುದ್ದಿಯನ್ನೆಲ್ಲ ಸುಮ್ಮನೆ ತಿಳಿದುಕೊಳ್ಳುವದು ಮನಸ್ಸೆಂಬ ಒಂದು ಭಾಗ. ಮುಂದೆ ಬಂದ ವಾದದಲ್ಲಿರುವ ಪತ್ರದ ನ್ಯಾಯಾನ್ಯಾಯಗಳನ್ನು ಗೊತ್ತುಮಾಡಿ ಹೇಳುವ ನ್ಯಾಯಾಧೀಶನಂತಿರುವದು ಬುದ್ಧಿಯೆಂಬ ಇನ್ನೊಂದು ಭಾಗ. ನಾನು ತಿಳಿಯುತ್ತೇನೆ, ನನಗೆ ಹೀಗೆ ತೋರುತ್ತದೆ- ಎನ್ನುವಾಗ ಮೇಲೆ ಹೇಳಿದ ಎರಡು ಭಾಗಗಳುಳ್ಳ ಅಂತಃಕರಣವೆಂಬ ಒಳಗಣ ಸಾಧನವು ನಾನೆಂಬ ಮಾತಿನ ಅರ್ಥವಾಗಿ ಬಳಕೆಯಲ್ಲಿರುವದು. ವಿಚಾರದ ಮುಂದೆ ಅದೂ ಅಡಗಿ ಹೋಗುವದು. ಏಕೆಂದರೆ:

(1) 'ನಾನು ಇಷ್ಟು ಹೊತ್ತೂ ಒಳ್ಳೆ ನಿದ್ರೆಯಲ್ಲಿದ್ದೆನು ಎನ್ನುವಾಗ ನಿದ್ರೆಯಲ್ಲಿ ನಮ್ಮ ಇರುವಿಕೆಯುಂಟಾದರೂ ಅಲ್ಲಿ ಮನಸ್ಸೂ ಬುದ್ಧಿಯೂ ಇರುವದಿಲ್ಲ. ಆದ್ದರಿಂದ ಅವು ನಮ್ಮ ಸ್ವರೂಪವಲ್ಲ.

(2) ನನ್ನ ಮನಸ್ಸು ಎಲ್ಲಿಯೋ ಹೋಗಿತ್ತೆನ್ನುವಾಗ ನನ್ನದೆನಿಸಿಕೊಳ್ಳುವ ವಸ್ತು ನಾನೆಂಬ ಮಾತಿನಿಂದ ಕರೆಸಿಕೊಳ್ಳತಕ್ಕದ್ದಾಗಲಾರದು.

ಅಂತಃಕರಣವನ್ನು ಹಿಂದಕ್ಕಿಟ್ಟು ಒಳಗೆ ಹುಡುಕಿದರೆ ಏನೂ ಇಲ್ಲದ ಶೂನ್ಯಸ್ಥಿತಿ ತೋರುವದು. ತನಿನಿದ್ರೆಯಲ್ಲಿ ಹಾಯಾಗಿ ಸುಖವನ್ನು ಅನುಭವಿಸುವ ನಾವು ಇದ್ದೂ ಎರಡನೆಯದೆಂಬುದಿಲ್ಲದಿರುವ ಮಾತ್ರವನ್ನು ನಮಗೆ ಗಂಟು ಹಾಕಿಕೊಂಡು ನಮ್ಮ ಇರುವಿಕೆಯನ್ನು ಉಪೇಕ್ಷಿಸಿ ನಮ್ಮನ್ನು ಶೂನ್ಯವಾಗಿ ಮಾಡುವದು ನಾಚಿಕೆಗೇಡು.

ದೇಹ ಮೊದಲಾದವುಗಳೆಲ್ಲ ಜಡವಾದ ಪದಾರ್ಥಗಳು ಮತ್ತು ನಮ್ಮ ಸುಖಕ್ಕೆ ಸಾಧನಗಳು. ಅವೇ ನಾವಲ್ಲ. ಅವೆಲ್ಲವುಗಳ ಗುಂಪನ್ನು ನಮ್ಮ ಸ್ವರೂಪವೆನ್ನೋಣವೆಂದರೆ ಅವುಗಳಲ್ಲಿ ಯಾವದು ಕಡಿಮೆಯಾದರೂ ನಾನೆಂಬ ಮಾತಿನ ಅರ್ಥವು ಕಡಿಮೆಯಾಗಬೇಕಾದೀತು. ಹಾಗಾಗುವದಿಲ್ಲವಾದ್ದರಿಂದ ಆ ಗುಂಪೂ ನಮ್ಮ ಸ್ವರೂಪವಲ್ಲ.

*****

## 5. ನಾನೆಂಬ ವಸ್ತುವಿನ ಸ್ವರೂಪವು 'ಇರುವಿಕೆ'

ನಾನೆಂಬ ಮಾತಿನ ಅರ್ಥವನ್ನು ಗೊತ್ತುಮಾಡುವದಕ್ಕೆ ಬುದ್ಧಿಯ ಕುಶಲತೆ ಬಹಳ ಬೇಕು. ಲೋಕದಲ್ಲಿ ಸಾಮಾನ್ಯವಾಗಿ ಎಲ್ಲರೂ ಅದರ ತಪ್ಪಾದ ಅರ್ಥವನ್ನೆ ಕಪಿಮುಷ್ಟಿಯಿಂದ ಹಿಡಿದುಕೊಂಡು ಅದರ ಫಲವಾಗಿ ವ್ಯವಹಾರದಲ್ಲಿ ಮುಗ್ಗರಿಸಿ ಮೂರು ಉರುಳಾಗುತ್ತಿರುವರು. ಅದರ ಸ್ವರೂಪವನ್ನು ಗೊತ್ತುಮಾಡಿ ಹೇಳುವ ಎದೆಗಾರಿಕೆ ಜಗತ್ತಿನಲ್ಲಿ ವೇದಕ್ಕೆ ಮಾತ್ರವೇ ಮೀಸಲು. ಬರೀ ಅದರ ಮಾತೆಂದು ಯಾರೂ ಹೂಂಗುಟ್ಟಬೇಕಾದದ್ದಿಲ್ಲ. ಆ ಅಭಿಪ್ರಾಯವು ಯುಕ್ತಿಯಿಂದ ಕೂಡ ಎದ್ದುಕಾಣುವದು. ತನಿನಿದ್ರೆಯಲ್ಲಿ ದೇಹ ಮೊದಲಾದ ಯಾವದೂ ಇಲ್ಲದೆ ನಾನೆನಿಸಿಕೊಳ್ಳುವ ವಸ್ತು ಒಂದೇ ಒಂದಾಗಿರುವ ಅನುಭವವನ್ನು ಮರೆಯಬಾರದು. ದೇಹ ಮೊದಲಾದವುಗಳು ಆಗ ಇಲ್ಲದ್ದರಿಂದ ನಾನೆಂಬ ಮಾತಿನ ಅರ್ಥಗಳಾಗಲಾರದೆ ಹೋದವು. ಆಗಲೂ ನಮ್ಮನ್ನು ಎಡೆಬಿಡದಿರುವ ಸ್ಥಿತಿಯೇ ನಮ್ಮ ಸ್ವರೂಪ.

ಅದನ್ನು ಈಗ ನಾವು ಇಂಥದ್ದೆಂದು ಗೊತ್ತುಮಾಡಬೇಕಾಗಿದೆ. ಅದಕ್ಕೊಂದು ದಾರಿ ಇದೆ. ಲೋಕದಲ್ಲಿ ತನ್ನ ಸುಖಕ್ಕೆ ನೆರವಾಗುವಳೆಂದು ಹೆಂಡತಿಯ ಮೇಲೆ ಪ್ರೀತಿ; ತನ್ನ ಸುಖಕ್ಕೆ ನೆರವಾಗುವನೆಂದು ಗಂಡನ ಮೇಲೆ ಪ್ರೀತಿ; ತಮ್ಮ ಸುಖಕ್ಕೆ ನೆರವಾಗುವರೆಂದು ತಾಯಿತಂದೆಗಳಿಗೆ ಮಕ್ಕಳ ಮೇಲೆ ಪ್ರೀತಿ; ತಮ್ಮ ಸುಖಕ್ಕೆ ನೆರವಾಗುವದೆಂದು ಜನರಿಗೆಲ್ಲ ಹಣದ ಮೇಲೆ ಪ್ರೀತಿ. ಹೀಗೆ ನಾವು ಯಾವದನ್ನು ಪ್ರೀತಿಸಿದರೂ ಅದು ನಮ್ಮ ಸುಖಕ್ಕೆ ನೆರವಾಗುವದೆಂದೇ ಇರುವದು. ಈ ರೀತಿಯಲ್ಲಿ ನೋಡಿದರೆ ತಾನು ತನಗಾಗಿ ಪ್ರೀತಿಸುವ ಹೆಂಡತಿ, ಗಂಡ, ಮಕ್ಕಳು, ಹಣ ಮೊದಲಾದವುಗಳಿಗಿಂತ ತನ್ನ ಮೇಲೆ ತನಗೆ ಅತಿ ಪ್ರೀತಿಯೆಂದು ಸ್ಪಷ್ಟವಾಗುವದು. ಆ ತನ್ನ ಅತಿ ಪ್ರಿಯವಾದ ಸ್ವರೂಪವು ತನ್ನ ಪೂರ್ಣತೆಯಲ್ಲಿ ತಾನು ಇರುವ ಪಕ್ಷದಲ್ಲಿ ಯಾರಿಗೂ ಯಾವ ಬಯಕೆಯೂ ಹುಟ್ಟುವ ಸಂಭವವೇ ಇರುತ್ತಿರಲಿಲ್ಲ. ಅತಿ ಪ್ರಿಯವಾದದ್ದು ಪೂರ್ಣವಾಗಿರುವಾಗ ಇನ್ನೇತರ ಬಯಕೆಯುಂಟಾದೀತು! ಆದರೆ ಈಗ ಬಯಕೆಗಳು ಒಂದರ ಮೇಲೊಂದು ಹುಟ್ಟುತ್ತಿರುವದನ್ನು ನೋಡಿದರೆ ಆ ನಮ್ಮ ಅತಿ ಪ್ರಿಯವಾದ ಸ್ವರೂಪದಲ್ಲಿ ಕೆಲಕೆಲವು ಮಟ್ಟಿಗೆ ಮುಕ್ಕುಹೋಗಿರಬೇಕೆಂದು ತೋರುವದು. ಅದನ್ನು ಮತ್ತೆ ಮೈಗೂಡಿಸಿಕೊಳ್ಳುವದಕ್ಕಾಗಿಯೇ ನಮ್ಮ ಹೆಣಗಾಟವಾದ್ದರಿಂದ ನಮ್ಮ ಬಯಕೆಗಳಿಂದಲೆ ನಮ್ಮ ಸ್ವರೂಪದ ನೆಲೆಯನ್ನು

ಕಾಣಬಹುದು. ಬೇನೆಯಿಂದ ಬೇಸತ್ತವನು ತನ್ನ ಹಿಂದಿನ ಕಾಯಪುಷ್ಟಿಯನ್ನು ಬಯಸುವಂತೆ ಹೇಗೊ ನಮ್ಮ ಸ್ವರೂಪದಲ್ಲಿ ಕುಂದುಕೊರತೆಗಳನ್ನು ಪಡೆದವರಂತೆ ಆಗಿರುವ ನಾವು ನಮ್ಮ ಹಿಂದಿನ ಪೂರ್ಣತೆಯನ್ನು ಬಯಸುವವರಾಗಿರುವೆವು. ಪೂರ್ಣತೆಯಿಂದ ಜಾರಿರುವ ನಾವು ಪೂರ್ಣತೆಗೇರುವವರಾಗಿರುವೆವು. ನೀರಿನಿಂದ ಅಗಲಿ ಬಂದಿರುವ ಮೀನಿಗೆ ನೀರಿನಮೇಲಿರುವ ಅತಿ ಪ್ರೀತಿಯ ಬಯಕೆಯು ಅದು ನೀರಿನಲ್ಲಿ ಜೀವಿಸುವ ಸ್ವರೂಪದ್ದೆಂಬುದನ್ನು ನೆನಪುಗೊಡುವಂತೆ ನಮ್ಮ ಅತಿ ಪ್ರೀತಿಯ ಬಯಕೆಗಳು ನಮ್ಮ ಸ್ವರೂಪವನ್ನು ನೆನಪುಗೊಡುವವು. ಅತಿ ಪ್ರೀತಿಯ ಬಯಕೆಗಳು ನಮ್ಮ ಸ್ವರೂಪವನ್ನೇ ಬಯಸುವವುಗಳಾಗಿರುವವೆಂಬುದನ್ನು ಗೊತ್ತುಮಾಡುವದಕ್ಕೆ ಒಂದು ಒರೆಗಲ್ಲಿದೆ. ನಮ್ಮ ಸ್ವರೂಪವಲ್ಲದ ಸ್ಥಿತಿಯಲ್ಲಿ ನಾವು ತೋರಿಕೊಂಡಾಗ ಎಲ್ಲರೂ ಅದರ ಕಾರಣವನ್ನು ತಿಳಿಯಲಿಚ್ಛಿಸುವರು. ನಮ್ಮ ಸರಿಯಾದ ಸ್ವರೂಪದಲ್ಲಿ ನಾವಿರುವಾಗ ಯಾರೂ ಆ ಸ್ಥಿತಿಯ ವಿಷಯದಲ್ಲಿ 'ಏಕೆ?' ಎಂದು ಕೇಳುವದಿಲ್ಲ. ಉದಾಹರಣೆಗೆ ನೋಡಿ. ನಾವು ದುಃಖವನ್ನು ಪಡುತ್ತಿದ್ದರೆ ಎಲ್ಲರೂ ಅದರ ಕಾರಣವನ್ನು ತಿಳಿಯಲಿಚ್ಛಿಸುವರು. ನಮ್ಮ ಸರಿಯಾದ ಸ್ವರೂಪದಲ್ಲಿ ನಾವಿರುವಾಗ ಯಾರೂ ಆ ಸ್ಥಿತಿಯ ವಿಷಯದಲ್ಲಿ 'ಏಕೆ?' ಎಂದು ಕೇಳುವದಿಲ್ಲ. ಉದಾಹರಣೆಗೆ ನೋಡಿ. ನಾವು ದುಃಖವನ್ನು ಪಡುತ್ತಿದ್ದರೆ ಎಲ್ಲರೂ ಅದರ ಕಾರಣವನ್ನು ತಿಳಿಯಲಿಚ್ಛಿಸುವರು. ನಾವು ಎಂದಿನಂತೆ ಇದ್ದರೆ ಯಾರೂ ಅದರ ಕಾರಣವನ್ನು ಕೇಳುವದಿಲ್ಲ. ಇದರಿಂದ ದುಃಖವು ನಮ್ಮ ಸ್ವರೂಪವಲ್ಲವೆಂದಾಗುವದು. ಇದನ್ನೆಲ್ಲ ಮನಸ್ಸಿನಲ್ಲಿಟ್ಟುಕೊಂಡು ನೋಡಿದರೆ ನಮಗೆ ಯಾವದರಮೇಲೆ ಅತಿ ಪ್ರೀತಿಯಿಂದ ಕೊನೆ ಇಲ್ಲದ ಬಯಕೆ ಕಾಣಿಸಿಕೊಳ್ಳುವದೊ ಯಾವದು ಯಾರಿಗೂ ಎಂದೂ ಎಲ್ಲಿಯೂ ಜನರಿಗೆ ಹೆಚ್ಚುಗಟ್ಟಲೆಯದೆನಿಸುವದಿಲ್ಲವೊ ಅದು ನಮ್ಮ ಸ್ವರೂಪವೆಂದು ನಮ್ಮ ಸ್ವರೂಪಕ್ಕೆ ಸ್ಥೂಲವಾಗಿ ಒಂದು ಲಕ್ಷಣವನ್ನು ಹುಟ್ಟುಗಟ್ಟಬಹುದು.

ಈ ಲಕ್ಷಣದಂತೆ ನೋಡಿದರೆ ಮೊದಲು 'ಇರುವಿಕೆ'ಯೆಂಬುದು ನಮ್ಮ ಸ್ವರೂಪ. ಹೇಗೆಂದರೆ:

(1) ಪ್ರತಿಯೊಬ್ಬನೂ ತಾನು ಬಹುಕಾಲ ಬದುಕಿರಬೇಕೆಂದು ಇಚ್ಛಿಸುವನು. ಪ್ರತಿನಿಮಿಷದಲ್ಲಿಯೂ ಸಾಯುವವರನ್ನು ಕಂಡರೂ ತಾನು ಮಾತ್ರ ಸೂರ್ಯಚಂದ್ರರಿರುವವರೆಗೂ ಇರುವವನೆಂದೇ ತನ್ನ ಅಭಿಪ್ರಾಯವಿರುವದು. ಆದ್ದರಿಂದ ಇರುವಿಕೆಯು ನಮ್ಮ ಸ್ವರೂಪ.

(2) 'ನಾನು' ಎಂಬ ಕರ್ತೃಪದದೊಡನೆ 'ಸಾ' ಧಾತುವಿನ ಕ್ರಿಯಾಪದವು

ಎಂದೆಂದೂ ಕೂಡಿ ನಡೆಯುವದಿಲ್ಲ. ನಾನು ಸತ್ತಿದ್ದೆನು, ನಾನು ಸತ್ತೆನು, ನಾನು ಸತ್ತಿರುವೆನು, ನಾನುಸತ್ತಿದ್ದೇನೆ- ಎಂಬ ಮಾತುಗಳೆಂದಿಗೂ ಹೊಂದಿಕೆಯಾಗುವದಿಲ್ಲ. ತನ್ನ ಸಾವನ್ನು ತಾನು ಕಾಣುವದು ಹೇಗೆ? 'ತಾನು ಸಾಯುತ್ತಿದ್ದೇನೆ' ಎಂದರೂ ಸಾವಿನ ಸಂಕಟವನ್ನನುಭವಿಸುತ್ತಿರುವೆನೆಂದು ಮಾತ್ರ ಅಭಿಪ್ರಾಯವೇ ಹೊರತು ಸಾವಿನ ಸಂಬಂಧವನ್ನು ಹೊಂದಿದ್ದೇನೆಂದಾಗುವದಿಲ್ಲ. ಹೀಗೆ ನಮ್ಮ ಆತ್ಮನು ಸಾವನ್ನು ಕಂಡರಿಯದವನಾದ್ದರಿಂದ ಇರುವಿಕೆಯು ನಮ್ಮ ಸ್ವರೂಪ.

(3) ಸಾವನ್ನು 'ದೀರ್ಘನಿದ್ರೆ' ಎನ್ನುವದುಂಟು. ಆ ದೃಷ್ಟಿಯಿಂದ ನೋಡಿದರೆ ನಿದ್ರೆಯು ಸಣ್ಣ ಸಾವು. ನಿದ್ರೆಯು ಕೂಡ 'ನಾನು' ಎಂಬ ಕರ್ತೃಪದದೊಡನೆ ಕೂಡಿನಡೆಯುವದಿಲ್ಲ. ನಾನು ನಿದ್ದೆಯಲ್ಲಿದ್ದೇನೆನ್ನುವದು ಹೊಂದದಮಾತು. ನಿದ್ದೆಯಲ್ಲಿರುವವನು ಅದನ್ನು ಹೇಳುವದು ಹೇಗೆ? 'ನಾನು' ಎಂಬ ಕರ್ತೃಪದದೊಡನೆ ನಿದ್ರೆಯ ಕ್ರಿಯೆಯೇ ಕೂಡಿ ನಡೆಯದಿರುವಾಗ ಸಾವಿನ ವಿಷಯವನ್ನು ಹೇಳಬೇಕಾದದ್ದಿನ್ನೇನು? ಹೀಗೆ ನಮ್ಮ ಸ್ವರೂಪವು ಸಾವಿನ ಸೋಂಕನ್ನು ಸಹಿಸದಿರುವದರಿಂದ ಇರುವಿಕೆಯು ನಮ್ಮ ಸ್ವರೂಪ.

(4) ತಾನು ಸತ್ತಿರುವಂತೆ ಕನಸಿನಲ್ಲಿ ಕಂಡರೂ ಅದನ್ನು ಕಂಡ ತಾನು ಬದುಕಿದ್ದದ್ದು ಸ್ಪಷ್ಟವಾಗಿರುವದು. ಆದ್ದರಿಂದ ಇರುವಿಕೆಯು ನಮ್ಮ ಸ್ವರೂಪ.

(5) ಯಾವನೂ ತನ್ನ ಹಗೆಯನ್ನು ತನ್ನ ಬಳಿಯಲ್ಲಿಟ್ಟು ಕೊಳ್ಳಲಿಚ್ಛಿಸುವದಿಲ್ಲ. ನಾವೆಲ್ಲರೂ ಸಾವನ್ನು ಕಳೆದುಕೊಳ್ಳಬೇಕೆಂದು ಸರ್ವಪ್ರಯತ್ನ ವನ್ನೂ ಮಾಡುತ್ತೇವೆ. ಏಕೆಂದರೆ : ಸಾವು ನಮ್ಮ ಹಗೆ. ಆದ್ದರಿಂದ ಆ ಸಾವಿನ ಹಗೆಯಾದ ಇರುವಿಕೆಯು ನಮ್ಮ ಸ್ವರೂಪ.

(6) ಒಬ್ಬನು ಸತ್ತರೆ ಅದರ ಕಾರಣವೇನೆಂದು ಕಳವಳಗೊಳ್ಳುತ್ತೇವೆ; ಬದುಕಿದ್ದರೆ ಅದು ಯಾರಿಗೂ ಎಲ್ಲಿಯೂ ಹೆಚ್ಚುಗಟ್ಟಲೆಯದೆನಿಸುವದಿಲ್ಲ. ಆದ್ದರಿಂದ ಇರುವಿಕೆಯು ನಮ್ಮ ಸ್ವರೂಪ.

(7) ತಾನು ಇಲ್ಲದಂತಾಗಬೇಕೆಂದು ಯಾರೂ ಬಯಸುವದಿಲ್ಲ. ಆದ್ದರಿಂದಲೂ ಇರುವಿಕೆಯು ನಮ್ಮ ಸ್ವರೂಪ.

(8) 'ಸತ್ತಮೇಲೆ ಜೀವನು ಇರುವನೊ ಇಲ್ಲವೊ?' ಎಂಬ ಮಾತು ಹಿಂದೆ (ಪುಟ 2) ಬಂದಿತ್ತಷ್ಟೆ. ಅವನು ಇರುವಿಕೆಯ ಸ್ವರೂಪನೇ ಆದ್ದರಿಂದ ಅವನು ಹಿಂದೆಯೂ ಇದ್ದನು; ಈಗಲೂ ಇದ್ದಾನೆ; ಮುಂದೆಯೂ ಇರುವನು. ಇರುವಿಕೆಯೂ

ಎಂದೂ ಇಲ್ಲವೆನಿಸುವದಿಲ್ಲ. ಇಲ್ಲದ್ದು ಎಂದೂ ಇರುವದೆನಿಸುವದಿಲ್ಲ. ಆದ್ದರಿಂದ ಇರುವಿಕೆಯ ಸ್ವರೂಪದವರಾದ ಯಾರಿಗೂ ಹುಟ್ಟುಸಾವಿನ ಸೋಂಕೇ ಇಲ್ಲ. ಪ್ರಾಣಿಗಳಲ್ಲಿ ಕಾಣಬರುವ ಹುಟ್ಟುಸಾವು ದೇಹಕ್ಕೆ ಸೇರಿದ್ದು; ದೇಹದೊಳಗೆ 'ನಾನು' ಎಂಬ ಮಾತಿನ ಅರ್ಥವಾಗಿರುವ ಇರುವಿಕೆಯ ಸ್ವರೂಪಕ್ಕಲ್ಲ.

(9) ಇನ್ನೂ ಒಳಹೊಕ್ಕು ವಿಚಾರಮಾಡಿದರೆ ಲೋಕದಲ್ಲಿ ಇಲ್ಲದ್ದು ಹುಟ್ಟುವದಿಲ್ಲ; ಇರುವದು ಹೋಗುವದಿಲ್ಲ. 'ಹುಟ್ಟು' ಎಂಬ ಕನ್ನಡದ ಮಾತಿಗೆ ಸಂಸ್ಕೃದಲ್ಲಿ ಜನ್ಮ, ಉತ್ಪತ್ತಿ, ಸೃಷ್ಟಿ- ಎಂಬ ಮೂರು ಮಾತುಗಳಿವೆ. ಇವೆಲ್ಲ ಇದ್ದದ್ದೆ ಹುಟ್ಟಿತೆನ್ನುವ ಮಾತುಗಳು. ಜನ್ಮವೆಂದರೆ (ಹಿಂದೆ ಅಡಗಿದ್ದದ್ದು ಈಗ) ಮುಂದೆ ಬಂದು ಕಾಣುವದು. ಉತ್ಪತ್ತಿಯೆಂದರೆ (ತಳದಲ್ಲಿದ್ದದ್ದು) ಮೇಲಕ್ಕೆದ್ದು ಕಾಣುವದು. ಸೃಷ್ಟಿಯೆಂದರೆ (ಹಿಡಿದಿದ್ದನ್ನು) ಹೊರಕ್ಕೆ ಬಿಡುವದು. ಇನ್ನು ಸಾವೆಂಬ ಅರ್ಥದಲ್ಲಿ ನಾಶವೆಂಬ ಮಾತಿದೆ. ನಾಶವೆಂದರೆ ಕಾಣದೆ ಹೋಗುವದೆಂದರ್ಥ. ಅದು ಕಣ್ಣಿಗೆ ಮರೆಯಾದ ಮಾತ್ರಕ್ಕೆ ಅದರ ಇರುವಿಕೆಗೇನು ಧಕ್ಕೆ? ಆದ್ದರಿಂದ ಲೋಕದಲ್ಲಿ ಹುಟ್ಟುಸಾವುಗಳೇ ಇಲ್ಲದಿರುವಾಗ ನಾನೆಂಬ ಮಾತಿನ ಅರ್ಥವಾದ ವಸ್ತುವಿಗೆ ಹುಟ್ಟುಸಾವುಗಳ ಮಾತೆಲ್ಲಿಯದು? ಅದು ಯಾವಾಗಲೂ ಇರುವದು.

(10) ತನ್ನ ಇರುವಿಕೆಯು ಎಷ್ಟೋ ಕಾಲವನ್ನೂ ಎಷ್ಟೋ ದೇಶವನ್ನೂ ಎಷ್ಟೋ ವಸ್ತುಗಳನ್ನೂ ವ್ಯಾಪಿಸಿದರೂ ಇನ್ನೂ ಅದರ ಬಯಕೆಯು ಕೊನೆಮುಟ್ಟದೆ ಇರುವದು. ಕೀರ್ತಿಕಾಮರ ಕೀರ್ತಿ ಶರೀರದ ವ್ಯಾಪನೆಯೇ ಇದಕ್ಕೆ ದೃಷ್ಟಾಂತ. ಇದರಿಂದ ನಮಗೆ ನಮ್ಮ ಅತಿ ಪ್ರಿಯವಾದ ಇರುವಿಕೆಯು ಅಖಂಡವಾದದ್ದೆಂದು ಸ್ಪಷ್ಟವಾಗಿ ಎದ್ದು ಕಾಣುವದು.

*****

## 6. ನಾನೆಂಬ ವಸ್ತುವಿನ ಸ್ವರೂಪವು 'ಅರಿವು'

ಇರುವಿಕೆಯ ಸ್ವರೂಪದಂತೆ ನಾನೆಂಬ ಮಾತಿನ ಅರ್ಥವಾದ ವಸ್ತು ಅರಿವಿನ ರೂಪವಾಗಿಯೂ ಇರುವದು. ಹೇಗೆಂದರೆ:

(1) ನಾವು ಇರುವಾಗಲೆಲ್ಲ ಅರಿವು ನಮ್ಮನ್ನು ಎಡೆಬಿಡದೆ ಇದ್ದೇ ಇರುವದು. ಗಂಡನೊಡನೆ ಬೇಸರಗೊಂಡ ಹೆಂಡತಿಯು ಗಂಡನನ್ನು ಕುರಿತು 'ನಮ್ಮಿಬ್ಬರಿಗೂ ಒಪ್ಪಾದ ವಿಷಯವು ಲೋಕದಲ್ಲಿ ಒಂದೂ ಇಲ್ಲ'ವೆಂದು

ನಿಟ್ಟುಸಿರಿಟ್ಟಳಂತೆ. ಅದಕ್ಕೆ ಗಂಡನು ಆಕೆಯನ್ನು ಕುರಿತು 'ಒಂದೂ ಇಲ್ಲವೆನ್ನಬೇಡ; ನಮ್ಮಿಬ್ಬರಿಗೂ ಒಪ್ಪಾದ ವಿಷಯವು ಲೋಕದಲ್ಲಿ ಒಂದೂ ಇಲ್ಲವೆಂಬ ಒಂದು ವಿಷಯವು ನಮ್ಮಿಬ್ಬರಿಗೂ ಒಪ್ಪಾದದ್ದು ಇದ್ದೇ ಇದೆ' ಎಂದನಂತೆ. ಇದರಂತೆ ಈಗ ನಮಗೆ ಯಾವ ಅರಿವೂ ಇಲ್ಲವೆನ್ನುವಾಗಲೂ ಯಾವ ಅರಿವೂ ಇಲ್ಲವೆಂಬ ಅರಿವು ಇದ್ದೇ ಇರುವದು. ಆ ಅರಿವು ನಮ್ಮ ಸ್ವರೂಪ.

(2) ಎಚ್ಚರದಲ್ಲಿಯೂ ಕನಸಿನಲ್ಲಿಯೂ ಏನಾದರೊಂದು ಅರಿವು ಇರಬಹುದಾದರೂ ನಿದ್ರೆಯಲ್ಲಿ ಯಾವ ಅರಿವೂ ಇಲ್ಲವೆಂದರೂ ಸರಿಯಾಗಲಾರದು. ಏಕೆಂದರೆ : ನಿದ್ರೆಯಲ್ಲಿ ಅರಿವು ತಳಾಹಿಡಿದಿರುವದು. ಎಲ್ಲಿಯಾದರೂ ಸೊಳ್ಳೆ ಕಡಿದರೆ ಒಡನೆ ಜ್ಞಾನವಾಹಿ ನರಗಳು ಅದನ್ನು ಮೆದುಳಿಗೆ ತಿಳಿಸುವದೂ ಕ್ರಿಯಾವಾಹಿ ನರಗಳು ನಮ್ಮ ಮೆದುಳಿನ ಅಪ್ಪಣೆಯಂತೆ ಆ ಸೊಳ್ಳೆಯನ್ನು ಹೊಡೆಯುವ ಕೆಲಸವನ್ನು ಮಾಡುವದೂ ಕಂಡುಬಂದಿದೆ. ಆದ್ದರಿಂದ ಆಗಲೂ ಅರಿವು ಇದ್ದೇ ಇರುವದು. ಆ ಅಖಂಡವಾದ ಅರಿವು ನಮ್ಮ ಸ್ವರೂಪ.

(3) ನಾನೆಂಬ ವಸ್ತುವಿನ ಸ್ವರೂಪವು ಅಖಂಡವಾದ ಅರಿವಾದರೆ ಎಷ್ಟೋ ವೇಳೆ 'ನಾನು ಅರಿಯದೆ ತಪ್ಪು ಮಾಡಿದೆ'ನೆನ್ನುವದಕ್ಕೇನು ಕಾರಣವೆಂದರೆ ನಡುಹಗಲಲ್ಲಿ ಸೂರ್ಯನು ಅಖಂಡವಾದ ಬೆಳಕುಳ್ಳವನಾದರೂ ಮನೆಯೊಳಗೆ ಸೇರಿ ಬಾಗಿಲುಗಳನ್ನೆಲ್ಲ ಹಾಕಿಕೊಂಡಿರುವಾಗ ಗವಾಕ್ಷಿಯ ಕಂಡಿಯಿಂದ ಸ್ವಲ್ಪವೇ ಬಿಸಿಲ ಕೋಲು ಬಂದಿದ್ದು ಕೋಣೆಯಲ್ಲಿ ಎಷ್ಟೋಕಡೆ ಕತ್ತಲೆ ಇರುವಂತೆ ಮರೆವೆಂಬ ಎಷ್ಟೋ ಬಾಗಿಲುಗಳು ನಮ್ಮ ಅರಿವನ್ನು ಎಷ್ಟೋ ಕಡೆ ಮರೆಮಾಡಿವೆ. ಆದ್ದರಿಂದ ನಾವು ಎಷ್ಟೋವೇಳೆ ಅರಿಯದೆ ತಪ್ಪುಮಾಡಿದೆವೆನ್ನುತ್ತೇವೆ. ಆ ಮರೆವೆಂಬ ಬಾಗಿಲುಗಳನ್ನು ಹಾರ ಹೊಡೆಯುತ್ತಲೆ ಅರಿವು ಝಗಝಗಿಸುವದು. ಆದ್ದರಿಂದ ನಾನೆಂಬ ವಸ್ತುವಿನ ಅಥವಾ ಸ್ವರೂಪದ ಅರಿವು ಅಖಂಡವಾದದ್ದು.

(4) 'ನಮಗೆ ಅರಿವು ಹೊರಗಣಿಂದ ಬಂದಂತೆ ಕಾಣುವದಲ್ಲ!' ಎಂದರೆ ಅದು ತಪ್ಪು. ಅರಿವು ಹೊರಗಣಿಂದ ಬಂದದ್ದಾದರೆ ನೀರಿಗೆ ಬೆಂಕಿಯಿಂದಲೋ ಬಿಸಿಲಿನಿಂದಲೋ ಹೊರಗಣಿಂದ ಬಂದ ಬಿಸಿ ಸ್ವಲ್ಪ ಹೊತ್ತಿನಲ್ಲಿ ಆರಿಹೋಗುವಂತೆ ಅರಿವೂ ಹಾರಿಹೋಗುತ್ತಿತ್ತು. ಹಾಗಾಗುವದಿಲ್ಲ. ಕಲ್ಲಿನಲ್ಲಿ ಮೂರ್ತಿಯು ಮೊದಲೇ ಇರುವಂತೆ ನಮ್ಮಲ್ಲಿ ಅರಿವು ಯಾವಾಗಲೂ ಇದ್ದೇ ಇದೆ. ಕಲ್ಲಿನ ಮೂರ್ತಿಯನ್ನು ಮಾಡುವವನು ಕಲ್ಲಿನೊಳಕ್ಕೆ ಅದನ್ನು ಹೊರಗಣಿಂದ ತಂದು ತುಂಬುವದಿಲ್ಲ. ಅದು

ಅಲ್ಲಿ ಮೊದಲೇ ಇರುತ್ತದೆ. ಇನ್ನು ಕೆಲವು ಕಲ್ಲಿನ ಅವಯವಗಳು ಆ ಮೂರ್ತಿಯನ್ನು ಮರೆಮಾಡಿ ಅದನ್ನು ಸುತ್ತಲೂ ಮುತ್ತಿಕೊಂಡಿರುವವು. ಉಳಿಯಿಂದ ಅವುಗಳನ್ನು ಹಾರಿಸಿ ಬಿಟ್ಟರೆ ಒಳಗಣ ಮೂರ್ತಿಯು ಎದ್ದು ಕಾಣುವದು. ನಮ್ಮ ಸ್ವರೂಪವಾದ ಅರಿವೂ ಅದರಂತೆ ನಮ್ಮಲ್ಲಿ ಯಾವಾಗಲೂ ಇರುವದು. ಮರೆಯನ್ನು ಕಳೆಯುತ್ತಲೆ ಅದು ಬೆಳಗುವದು. ಹೀಗೆ ನಮ್ಮನ್ನು ಎಡೆಬಿಡದಿರುವ ಅರಿವು ನಾನೆಂಬ ಮಾತಿನ ಅರ್ಥವಾದ ವಸ್ತುವಿನ ಸ್ವರೂಪ.

(5) ವಿದ್ಯೆಯನ್ನು ಕಲಿಯುವಾಗ ನಮಗೆ ಹೊಸಹೊಸದಾಗಿ ಅರಿವು ತಲೆದೋರಿದಂತೆ ಕಂಡರೂ ಅದು ಹೊಸದಲ್ಲವೆಂದೂ ಒಳಗೆ ಇದ್ದ ಅರಿವಿನ ಮರೆಯನ್ನು ಪಕ್ಕಕ್ಕೆ ಸರಿಸುವದು ಮಾತ್ರವೇ ವಿದ್ಯೆಯ ಕೆಲಸವೆಂದೂ ದೊಡ್ಡದೊಡ್ಡವರೆನಿಸಿದವರು ಹೇಳುವರು. ಆದ್ದರಿಂದ ನಮ್ಮ ಅರಿವು ನಮಗೆ ಹೊಸದಾಗಿ ಬರುವದಲ್ಲ. ಅದು ನಮ್ಮ ಸ್ವರೂಪ. ಅದೇ ನಾನೆಂಬ ಮಾತಿನ ಅರ್ಥ.

(6) ಯಾವನೂ ತನ್ನ ಹಗೆಯನ್ನು ತನ್ನ ಬಳಿಯಲ್ಲಿಟ್ಟು ಕೊಳ್ಳಲಿಚ್ಛಿಸುವದಿಲ್ಲ. ನಾವೆಲ್ಲರೂ ಮರೆವನ್ನು ಕಳೆದುಕೊಳ್ಳಬೇಕೆಂದು ಸರ್ವಯತ್ನ ವನ್ನೂ ಮಾಡುತ್ತೇವೆ. ಏಕೆಂದರೆ: ಮರೆವು ನಮ್ಮ ಹಗೆ. ಆದ್ದರಿಂದ ಆ ಮರೆವಿನ ಹಗೆಯಾದ ಅರಿವು ನಮ್ಮ ಸ್ವರೂಪ.

(7) ಒಬ್ಬನು ಒಂದು ವಿಷಯವನ್ನು ಮರೆತರೆ ಅದರ ಕಾರಣವೇನೆಂದು ನಾವು ಕಳವಳಗೊಳ್ಳುತ್ತೇವೆ; ಅರಿತರೆ ಯಾರಿಗೂ ಎಂದೂ ಎಲ್ಲಿಯೂ ಅದು ಹೆಚ್ಚುಗಟ್ಟಲೆಯದೆನಿಸುವದಿಲ್ಲ. ಆದ್ದರಿಂದ ಅರಿವು ನಮ್ಮ ಸ್ವರೂಪ.

(8) ಮನುಷ್ಯನು ಎಷ್ಟು ಅರಿತರೂ ಅರಿವಿನ ಬಯಕೆಯು ಕೊನೆಯಾಗುವದಿಲ್ಲ. ಇದರಿಂದ ನಮ್ಮ ಅತಿ ಪ್ರಿಯಸ್ವರೂಪವಾದ ಅರಿವು ಅಖಂಡವಾದದ್ದೆಂದು ಎದ್ದು ಕಾಣುವದು.

*****

## 7. ನಾನೆಂಬ ವಸ್ತುವಿನ ಸ್ವರೂಪವು 'ಸುಖ'

ಇರುವಿಕೆಯ ಮತ್ತು ಅರಿವಿನ ಸ್ವರೂಪದಂತೆ ನಾನೆಂಬ ಮಾತಿನ ಅರ್ಥವಾದ ವಸ್ತು ಸುಖದ ರೂಪವಾಗಿಯೂ ಇರುವದು, ಹೇಗೆಂದರೆ:

(1) ನಮ್ಮ ಸ್ವರೂಪವಾದದ್ದು ಮೂರು ಅವಸ್ಥೆಗಳಲ್ಲಿಯೂ ಇರಬೇಕಷ್ಟೆ. ಸುಖವು ಎಚ್ಚರದಲ್ಲಿಯೂ ಕನಸಿನಲ್ಲಿಯೂ ಆಗಾಗ ಕಾಣಿಸಿಕೊಳ್ಳುತ್ತಿದ್ದು ಗಾಢನಿದ್ರೆಯಲ್ಲಂತು ತಾನೇತಾನಾಗಿರುವದು. ಹೀಗೆ ಅದು ಯಾವಾಗಲೂ ನಮ್ಮನ್ನು ಎಡೆಬಿಡದೆ ಇರುವದರಿಂದ ಅದು ನಮ್ಮ ಸ್ವರೂಪ.

(2) ಯಾವನೂ ತನ್ನ ಹಗೆಯನ್ನು ಬಳಿಯಲ್ಲಿಟ್ಟುಕೊಳ್ಳಲಿಚ್ಛಿಸುವದಿಲ್ಲ. ನಾವೆಲ್ಲರೂ ದುಃಖವನ್ನು ಕಳೆದುಕೊಳ್ಳಬೇಕೆಂದು ಸರ್ವಯತ್ನವನ್ನೂ ಮಾಡುತ್ತೇವೆ. ಏಕೆಂದರೆ: ದುಃಖವು ನಮ್ಮ ಹಗೆ. ಆದ್ದರಿಂದ ದುಃಖದ ಹಗೆಯಾದ ಸುಖವು ನಮ್ಮ ಸ್ವರೂಪ.

(3) ಒಬ್ಬನು ದುಃಖಿಸುವದನ್ನು ಕಂಡರೆ ಅದರ ಕಾರಣವೇನೆಂದು ಕಳವಳಗೊಳ್ಳುತ್ತೇವೆ. ಅವನು ಎಂದಿನಂತೆ ಸುಖವಾಗಿದ್ದರೆ ಅದು ಯಾರಿಗೂ ಎಂದೂ ಎಲ್ಲಿಯೂ ಹೆಚ್ಚುಗಟ್ಟಲೆಯದೆನಿಸುವದಿಲ್ಲ. ಆದ್ದರಿಂದ ಸುಖವು ನಮ್ಮ ಸ್ವರೂಪ.

(4) ಮನುಷ್ಯನಿಗೆ ಎಷ್ಟು ಸುಖವು ದೊರೆತರೂ ಸುಖದ ಬಯಕೆಯು ಕೊನೆಯಾಗುವದಿಲ್ಲ. ಇದರಿಂದ ನಮ್ಮ ಅತಿ ಪ್ರಿಯಸ್ವರೂಪವಾದ ಸುಖವು ಅಖಂಡವಾದದ್ದೆಂದು ಎದ್ದು ಕಾಣುವದು.

ಹೀಗೆ ನಾನೆಂಬ ಮಾತಿನ ಅರ್ಥವಾದ ವಸ್ತು ಇರುವಿಕೆಯ, ಅರಿವಿನ ಮತ್ತು ಸುಖದ ಸ್ವರೂಪವಾದದ್ದೆಂದು ಗೊತ್ತಾಯಿತು. ನಮ್ಮ ಬಯಕೆಯು ನಾನೆಂಬ ಮಾತಿನ ಅರ್ಥವಾದ ವಸ್ತುವಿನ ಇನ್ನೂ ಎಷ್ಟೋ ಯೋಗ್ಯತೆಗಳನ್ನು ಹೊರಪಡಿಸುವದು. ನಾವು ಎಷ್ಟು ಮಾತ್ರವೂ ಯಾರ ಹಂಗಿಗೂ ಒಳಪಡದೆ ಸ್ವತಂತ್ರರಾಗಿರಬೇಕೆಂದು ಎಲ್ಲರೂ ಬಯಸುವೆವಷ್ಟೆ. ಇದರಿಂದ ನಾನೆಂಬ ಮಾತಿನ ಅರ್ಥವಾದ ವಸ್ತು ಅತ್ಯಂತ ಸ್ವತಂತ್ರವಾದದ್ದೆಂದು ತಿಳಿಯಬೇಕು. ನಮ್ಮಲ್ಲಿ ಪ್ರತಿಯೊಬ್ಬರೂ ತಾವು ಯಾರ ಆಳಿಕೆಗೂ ಒಳಗಾದವರಾಗಿರದೆ ಜಗತ್ತಿನ ಮೇಲೆಲ್ಲ ಅಧಿಕಾರವನ್ನು ನಡೆಸುವವರಾಗಬೇಕೆಂದು ಬಯಸುವೆವಷ್ಟೆ. ಇದರಿಂದ ನಾನೆಂಬ ಮಾತಿನ ಅರ್ಥವಾದ ವಸ್ತು ಸರ್ವೇಶ್ವರನೆಂದು ತಿಳಿಯಬೇಕು. ಇಂಥ ಯೋಗ್ಯತೆಗಳು ಎಷ್ಟೋ ಇರುವವು. ಇಲ್ಲಿ ಇಷ್ಟು ಸಾಕು.

ಹಿಂದೆ (11ನೇ ಪುಟದಲ್ಲಿ) ಹೇಳಿರುವಂತೆ ನಮಗೆ ಈಗಲೂ ಯಾವ ಭೇದವೂ ಇಲ್ಲದ ಸ್ಥಿತಿಯೇ ಇರುವದಾದರೆ ಜೀವನಿಗೂ ಈಶ್ವರನಿಗೂ ಭೇದ, ಒಬ್ಬ ಜೀವನಿಗೂ ಇನ್ನೊಬ್ಬ ಜೀವನಿಗೂ ಭೇದ- ಮೊದಲಾದ ಹಲವು ಬಗೆಯಾಗಿ ಕಾಣುತ್ತಿರುವ ಭೇದಗಳಿಗೇನು ಗತಿಯೆಂದಾಗ ಅದರ ಬಣ್ಣವನ್ನು ಬಯಲಿಗೆ ತರುವದಕ್ಕೆ ಮುಂಚೆ ನಮ್ಮ ಆತ್ಮಸ್ವರೂಪದ ನೆಲೆಯನ್ನು ನಾವು ಅರಿಯುವದು ಬಹು ಅಗತ್ಯವೆಂದು ಆ ವಿಚಾರವನ್ನು ತೆಗೆದುಕೊಂಡು ಕೊನೆಯನ್ನು ಮುಟ್ಟಿದ್ದಾಯಿತಷ್ಟೆ. ಇನ್ನು ಭೇದಗಳ ಬಣ್ಣವು ಬಯಲಿಗೆ ಬೀಳಲೆಂದು ಕೇಳಬಹುದು. ಇನ್ನು ಆ ವಿಚಾರವನ್ನು ತೆಗೆದುಕೊಳ್ಳೋಣ.

*****

## 8. ಜೀವನೂ ಈಶ್ವರನೂ ಬೇರೆಬೇರೆಯಲ್ಲ

ಜೀವರೆಲ್ಲ ಈಶ್ವರನ ಆಳಿಕೆಗೆ ಒಳಪಟ್ಟವರೆಂದೂ ಈಶ್ವರನು ಬೇರೆಯಾಗಿದ್ದು ಅಧಿಕಾರವನ್ನು ನಡೆಸುತ್ತಿರುವನೆಂದೂ ಸಾಮಾನ್ಯವಾಗಿ ಎಲ್ಲರೂ ತಿಳಿಯುವರಷ್ಟೆ. ನಿಜಸ್ಥಿತಿ ಹಾಗಿಲ್ಲ. ಏಕೆಂದರೆ :

(1) ಜೀವನೂ ಈಶ್ವರನೂ ಬೇರೆಬೇರೆಯಲ್ಲ. ನಾವು 'ನಾ'ನೆಂಬ ಮಾತಿನ ಅರ್ಥವಾದ ಜೀವಸ್ವರೂಪವನ್ನು ತಿಳಿಯುವದಕ್ಕೆ ಪ್ರಯತ್ನಮಾಡಿ ನಮಗೆ ಅರಿವಿಲ್ಲದೆ ಅದೇ ಪ್ರಯತ್ನದಿಂದ ಈಶ್ವರ ಸ್ವರೂಪವನ್ನು ತಿಳಿದಿರುವೆವು. ಜೀವನ ಸ್ವರೂಪವು ಅಖಂಡವಾದ ಇರುವಿಕೆ, ಅಖಂಡವಾದ ಅರಿವು, ಅಖಂಡವಾದ ಸುಖ, ಸ್ವಾತಂತ್ರ್ಯ, ಸರ್ವೇಶ್ವರತ್ವ- ಮೊದಲಾದವುಗಳೆಂದು ಗೊತ್ತಾಯಿತಷ್ಟೆ. ಇದು ಜೀವನ ಸ್ವರೂಪವೆಂಬುದು ನಮಗೆ ಹೊಸ ವಿಷಯ. ಜೀವನ ಸ್ವರೂಪವನ್ನು ಹುಡುಕುವದಕ್ಕೆ ಹೊರಡುವ ಮುಂಚೆಯೆ ನಾವು ಅಖಂಡವಾದ ಇರುವಿಕೆ ಮೊದಲಾದವುಗಳು ಈಶ್ವರನ ಸ್ವರೂಪಗಳೆಂದು ಗ್ರಂಥಗಳಿಂದ ತಿಳಿದುಕೊಂಡಿರುತ್ತೇವೆ. ಈಗ ನಾವು ಜೀವನ ಸ್ವರೂಪವನ್ನು ಕಾಣಹೋಗಿ ಈಶ್ವರನ ಸ್ವರೂಪವನ್ನು ಕಂಡದ್ದು ನಮ್ಮ ರೊಟ್ಟಿ ಜಾರಿ ತುಪ್ಪದಲ್ಲಿ ಬಿದ್ದಂತಾಯಿತು. ಈಶ್ವರನ ಅಂಥ ಸಚ್ಚಿದಾನಂದಸ್ವರೂಪನೆಂಬ ವಿಷಯದಲ್ಲಿಯೂ ಅವನು ಸ್ವತಂತ್ರನಾದವನೆಂಬ ಮತ್ತು ಸರ್ವೇಶ್ವರನಾದವನೆಂಬ ವಿಷಯದಲ್ಲಿಯೂ ಯಾವ ಧರ್ಮಸ್ಥಾಪಕರದೂ ಭಿನ್ನಾಭಿಪ್ರಾಯವಿಲ್ಲ. ಆದ್ದರಿಂದ ಆ ಅಭಿಪ್ರಾಯವನ್ನು ಗಟ್ಟಿಗೊಳಿಸುವದಕ್ಕೆ ನಾವು ಹೆಚ್ಚು ಕಷ್ಟಪಡಬೇಕಾದದ್ದಿಲ್ಲ.

ಹೀಗಾಗಿ ಜೀವನಸ್ವರೂಪವೇ ಈಶ್ವರ ಸ್ವರೂಪವೆಂದಾಯಿತು. ಇಬ್ಬರ ಸ್ವರೂಪವೂ ಒಂದೇ ಆದಮೇಲೆ ಅವರನ್ನು ಇಬ್ಬರೆನ್ನುವದೇಕೆ? ಜೀವನೂ ಈಶ್ವರನೂ ಬೇರೆಬೇರೆಯಲ್ಲ.

(2) ಜೀವನೆಂಬುವನು ಬಿಡಿಬಿಡಿಯಾದ ಶರೀರೇಂದ್ರಿಯಗಳಿಗೆ ಶಕ್ತಿಯನ್ನು ಕೊಡುವವನೆಂದೂ ಈಶ್ವರನು ಜಗತ್ತಿನ ಎಲ್ಲ ಶರೀರೇಂದ್ರಿಯಗಳಿಗೆ ಶಕ್ತಿಯನ್ನು ಕೊಡುವವನೆಂದೂ ಭೇದವು ಕಾಣಬಹುದು. ಬಿಡಿಬಿಡಿಯಾದ ಶರೀರೇಂದ್ರಿಯಗಳು ಜೀವನ ಸ್ವರೂಪಕ್ಕೆ ಸೇರಿದವುಗಳಲ್ಲವೆಂದು ತೋರಿಸಿ ಅವೆಲ್ಲವುಗಳ ಒಳಗಿರುವ ಚೈತನ್ಯವನ್ನು ಅವನ ಸ್ವರೂಪವೆಂದು ಹೇಳಿದ್ದಾಗಿದೆಯಷ್ಟೆ. ಜೀವನ ಬಿಡಿಬಿಡಿಯಾದ ಶರೀರೇಂದ್ರಿಯಗಳನ್ನು ಅವು ಅವನ ಸ್ವರೂಪವಲ್ಲವೆಂದು ತಳ್ಳಿಹಾಕಿ ಒಳಗಿರುವ ಚೈತನ್ಯವನ್ನು ನಿಲುಕಿಸಿಕೊಂಡಂತೆ ಈಶ್ವರನ ಉಪಾಧಿಯಾದ ಸಮಷ್ಟಿ ಶರೀರೇಂದ್ರಿಯಗಳನ್ನು ಅವು ಅವನ ಸ್ವರೂಪವಲ್ಲವೆಂದು ತಳ್ಳಿಹಾಕಿ ಒಳಗಿರುವ ಚೈತನ್ಯವನ್ನು ನಿಲುಕಿಸಿಕೊಂಡರೆ ಅವೆರಡು ಸ್ವರೂಪಗಳೂ ಒಂದೇ ಆಗಿ ಕಾಣಬಂದು ಜೀವನಿಗೂ ಈಶ್ವರನಿಗೂ ಇರುವ ಭೇದವು ಹಾರಿ ಹೋಗುವದು. ಈಶ್ವರನು ಜಗತ್ತಿನಲ್ಲೆಲ್ಲ ತುಂಬಿಕೊಂಡಿರುವ ದೊಡ್ಡ ಬಯಲಿನಂತೆ. ಜೀವನು ಗಡಿಗೆಯಲ್ಲೆಲ್ಲ ತುಂಬಿಕೊಂಡಿರುವ ಸಣ್ಣ ಬಯಲಿನಂತೆ ಜಗತ್ತನ್ನೂ ಗಡಿಗೆಯನ್ನೂ ಬುದ್ಧಿಯಿಂದ ಬೇರೆ ಮಾಡಿ ನೋಡಿದರೆ ಒಳಗೆ ಇರುವ ಬಯಲು ಬೇರೆಬೇರೆಯಾಗಿರುವದಿಲ್ಲ. ಹಾಗೆ ಚೈತನ್ಯಸ್ವರೂಪರಾದ ಜೀವನೂ ಈಶ್ವರನೂ ಬೇರೆ ಬೇರೆಯಲ್ಲ.

(3) ಇಬ್ಬರೂ ಒಂದೇ ಆದರೆ ಜೀವನಲ್ಲಿ ಎಷ್ಟೋ ಸಾಮರ್ಥ್ಯಗಳ ಕೊರತೆಗೇನು ಕಾರಣವೆನ್ನಬಹುದು. ನರನು ನಾರಾಯಣನೇ ಸರಿ. ಕುಂತಿಯ ಹೊಟ್ಟೆಯಲ್ಲಿ ಹುಟ್ಟಿದ ಕ್ಷತ್ರಿಯನಾದ ಕರ್ಣನಿಗೆ ತಾನು ಕುಂತಿಯ ಮಗನೆಂಬದಕ್ಕೆ ಮರೆವೆ ಕವಿದುಕೊಂಡಿದ್ದರಿಂದ ಅವನು ರಾಜತ್ವಕ್ಕೆ ಅನರ್ಹನಾದ ಬೆಸ್ತನೆನಿಸಿದಂತೆ ನಾರಾಯಣನ ಸಾಮರ್ಥ್ಯಗಳಿಗೆ ಅಲ್ಲಲ್ಲಿ ಹೇಗೊ ಮರೆವೆ ಕವಿದುಕೊಂಡದ್ದರಿಂದ ಆ ನಾರಾಯಣನೆ ತನ್ನ ಸಾಮರ್ಥ್ಯಗಳಲ್ಲಿ ಕುಗ್ಗಿ ನರನೆನಿಸಿದ್ದಾನೆ. ಕೃಷ್ಣನು ನೆನಪುಗೊಡುತ್ತಲೆ ಕರ್ಣನು ಕ್ಷತ್ರಿಯನಾದಂತೆ ಸದ್ಗುರು ನೆನಪುಗೊಡುತ್ತಲೆ ಜೀವನ ಸಾಮರ್ಥ್ಯಗಳ ಮರೆವೆಯು ಹಾರಿ ಹೋಗಿ ಆ ನರನು ಮೊದಲಿನ ನಾರಾಯಣನಾಗುತ್ತಾನೆ. ನರನೂ ನಾರಾಯಣನೂ ಬೇರೆಬೇರೆಯಲ್ಲ. ಇದರಂತೆ ಜೀವನೂ ಈಶ್ವರನೂ ಬೇರೆಬೇರೆಯಲ್ಲ.

(4) ನಾವು ಎಲ್ಲಿಂದ ಬಂದೆವೆಂದೂ ಎಲ್ಲಿಗೆ ಹೋಗುತ್ತೇವೆಂದೂ ತಿಳಿಯಬೇಕೆಂಬ ಮಾತು ಹಿಂದೆ (2ನೇ ಪುಟದಲ್ಲಿ) ಬಂದಿತ್ತಷ್ಟೆ. ಈಗ ಅದನ್ನೆಲ್ಲ ತಿಳಿದಂತಾಯಿತು. ಹೇಗೆಂದರೆ: ನಾರಾಯಣನೆ ನರನಾದನೆಂಬುದರಿಂದ ನಾವೆಲ್ಲರೂ ಈಶ್ವರನಿಂದ ಹೊರಬಿದ್ದವರಾಗಿಯೂ ಈಶ್ವರನ ಮಹಿಮೆಯ ಬಲದಮೇಲೆ ಇರುವವರಾಗಿಯೂ ಕೊನೆಗೆ ಈಶ್ವರನಲ್ಲಿಗೆ ಹೋಗಿ ಅವನೊಡನೆ ಒಂದಾಗುವವರಾಗಿಯೂ ಇರುವೆವು. ಆದ್ದರಿಂದ ನಮ್ಮ ಬಯಕೆಗಳೆಲ್ಲ ಈಶ್ವರಸ್ವರೂಪವನ್ನೆ ನುಂಗಿ ನೀರು ಕುಡಿಯಬೇಕೆಂದು ಉಕ್ಕಿ ಹರಿಯುತ್ತಿರುವವು. ಈಶ್ವರನಿಂದ ಹೊರಬಿದ್ದು ಈಶ್ವರನಿಂದಲೇ ಬದುಕಿದ್ದು ಕೊನೆಗೆ ಈಶ್ವರನೊಡನೆಯೇ ಒಂದಾಗುವ ನಮ್ಮನ್ನು ಈಶ್ವರನಲ್ಲದೆ ಬೇರೆಯೆನ್ನಬಹುದೆ? ಜೀವನೂ ಈಶ್ವರನೂ ಬೇರೆ ಬೇರೆಯಲ್ಲ.

(5) ವೇದದ ಸೆಲೆಯನ್ನು ಕೂಡ ಅರಿಯದವರ ಬೈಬಲ್ ಮತ್ತು ಕೊರಾನ್ ಮೊದಲಾದ ಧರ್ಮಗ್ರಂಥಗಳಲ್ಲಿಯೂ ಈ ಅಭಿಪ್ರಾಯದ ವಾಸನೆ ಇದ್ದೇ ಇದೆ. ಅದು ಅಲ್ಲಿ ಎದ್ದು ಕಾಣುವಷ್ಟಿಲ್ಲ ಇಷ್ಟೆ. ಆದ್ದರಿಂದ ಜೀವನೂ ಈಶ್ವರನೂ ಬೇರೆಬೇರೆಯಲ್ಲ.

ಇದರಿಂದ ಜೀವರೂಪದಲ್ಲಿ ಕಾಣುವವನು ಈಶ್ವರನೇ ಎಂದು ವೇದದ ಅಭಿಪ್ರಾಯವೆಂಬದಾಗಿ ಹಿಂದೆ (11ನೆ ಪುಟದಲ್ಲಿ) ಹೇಳಿದ ಮಾತು ಈಗ ಯುಕ್ತಿಯಿಂದ ಸಿದ್ಧವಾಗಿರುವದು. ಜೀವನೂ ಈಶ್ವರನೂ ಒಬ್ಬನೇ.

*****

## 9. ಜೀವರಲ್ಲಿ ಒಬ್ಬರಿಗೊಬ್ಬರು ಬೇರೆಬೇರೆಯಲ್ಲ

ಇನ್ನು ಜೀವರಲ್ಲಿ ಒಬ್ಬರಿಗೊಬ್ಬರಿಗೆ ಭೇದವನ್ನು ಹೇಳಬೇಕು. ಅದಕ್ಕೂ ಬುಡವಿಲ್ಲವಾಗುವದು. ಹೇಗೆಂದರೆ :

(1) ಲೋಕದಲ್ಲಿ ಜೀವರಲ್ಲಿ ಒಬ್ಬರಿಗೊಬ್ಬರಿಗೆ ಕಾಣುವ ಭೇದವು ಅವರವರಿಗೆ ಸಂಬಂಧಿಸಿಕೊಂಡಿರುವ ಶರೀರ, ಇಂದ್ರಿಯ, ಮನಸ್ಸು ಮತ್ತು ಬುದ್ಧಿ ಇವುಗಳಿಗೆ ಸಂಬಂಧಪಟ್ಟವುಗಳು. ಶರೀರ ಮೊದಲಾದವುಗಳೆಲ್ಲ ಜೀವರ ಸ್ವರೂಪಕ್ಕೆ ಸಂಬಂಧಪಟ್ಟವುಗಳಲ್ಲವಾದ್ದರಿಂದ ಅವುಗಳಿಂದ ತೋರುವ ಭೇದವು ಜೀವರ

ಸ್ವರೂಪದ್ದಾಗುವದಿಲ್ಲ. ಎಲ್ಲ ಜೀವರ ಸ್ವರೂಪವೂ ಒಂದೆ. ಆದ್ದರಿಂದ ಜೀವರಲ್ಲಿ ಒಬ್ಬರಿಗೊಬ್ಬರು ಬೇರೆಬೇರೆಯಲ್ಲ.

(2) ಎಲ್ಲ ಶಾಸ್ತ್ರಗಳೂ ಸಾಮಾನ್ಯವಾಗಿ ಮೋಕ್ಷಕ್ಕೆ ಸಾಧನಗಳೆಂದು ಹೇಳುವದುಂಟು. ವ್ಯಾಕರಣಶಾಸ್ತ್ರವು ಅವುಗಳಲ್ಲಿ ಒಂದು. ಅದು ಶಬ್ದಗಳ ಸಾಧುತ್ವದ ವಿಚಾರವನ್ನು ಮಾಡುತ್ತ ಅದರ ಮೂಲಕ ಮೋಕ್ಷಕ್ಕೆ ಸಾಧನವಾಗಿರುವದೆನ್ನಬೇಕಾಗುವದು. ಹೀಗಿದ್ದರೂ ಅದು ತನಗರಿವಿಲ್ಲದೆ ಮೋಕ್ಷಕ್ಕೆ ಸಾಧನವಾದ ಆತ್ಮವಿಚಾರದ ಸಿದ್ಧಾಂತವನ್ನೆ ಒಳಗೊಂಡಿರುವ ಚಮತ್ಕಾರವಿದೆ. 'ಆತ್ಮ' ಎಂದರೆ 'ನಾನು' ಎಂದರ್ಥ. 'ನಾನು' ಎಂಬ ಮಾತಿನಿಂದ ಕರೆಸಿಕೊಳ್ಳುವ ಜೀವರು ಅನೇಕರೆಂದು ಎಲ್ಲರೂ ತಿಳಿದಿರುವರಷ್ಟೆ. ಆ ಅಭಿಪ್ರಾಯಕ್ಕೆ ಹೊಂದಿಕೆಯಾಗಿ ವ್ಯಾಕರಣಶಾಸ್ತ್ರವೂ 'ನಾನು' ಎಂಬ ಏಕವಚನಕ್ಕೆ 'ನಾವು' ಎಂಬ ಬಹುವಚನದ ರೂಪವನ್ನು ಕೊಟ್ಟಿರುವದು. ಅದು ಬಳಕೆಯಲ್ಲಿಯೂ ಇದೆ. ಆದರೆ ಅದರಲ್ಲಿ ಹುರುಳಿಲ್ಲ. ವಿಚಾರ ಮಾಡಿದರೆ 'ನಾನು' ಎಂಬ ಮಾತಿಗೆ ಬಹುವಚನವು ಹೊಂದಿಕೆಯಾಗುವದೇ ಇಲ್ಲ. ಈಗ ಪ್ರಥಮಪುರುಷದ ಸರ್ವನಾಮವಾದ 'ಅವನು' ಎಂಬ ಮಾತನ್ನು ತೆಗೆದುಕೊಳ್ಳೋಣ. ವಿಚಾರಕನು 'ಅವನು, ಅವನು, ಅವನು'- ಎಂದು ದೂರದಲ್ಲಿರುವ ಬಹುಜನರನ್ನು 'ಅವನು' ಎಂಬ ಮಾತಿನಿಂದ ಕರೆಯಬಹುದಾಗುವದು. ಆದ್ದರಿಂದ ಅದಕ್ಕೆ 'ಅವರು' ಎಂಬ ಬಹುವಚನದ ರೂಪವು ಹೊಂದಿಕೆಯಾಗುವುದು. 'ಅವಳು' ಎಂಬ ಮಾತೂ ಅದರಂತೆಯೆ. 'ಅದು' ಎಂಬುದೂ ಹಾಗೆಯೇ ಅನೇಕವಾಗಿ ಎಣಿಕೆಗೆ ಸಿಕ್ಕುವದರಿಂದ ಅದಕ್ಕೆ 'ಅವು' ಎಂಬ ಬಹುವಚನದ ರೂಪವು ಒಪ್ಪುವದು. ಇನ್ನು ಮಧ್ಯಮಪುರುಷದ ಸರ್ವನಾಮವಾದ 'ನೀನು' ಎಂಬ ಮಾತನ್ನು ತೆಗೆದುಕೊಳ್ಳೋಣ. ವಿಚಾರಕನು 'ನೀನು, ನೀನು, ನೀನು' ಎಂದು ತನ್ನೆದುರಿಗಿರುವ ಬಹುಜನರನ್ನು 'ನೀನು' ಎಂಬ ಮಾತಿನಿಂದ ಕರೆಯಬಹುದಾಗುವದು. ಅದಕ್ಕೆ 'ನೀವು' ಎಂಬ ಬಹುವಚನದ ರೂಪವು ಹೊಂದಿಕೆಯಾಗುವದು. ಉತ್ತಮಪುರುಷದ ಸರ್ವನಾಮವಾದ 'ನಾನು' ಎಂಬ ಮಾತನ್ನು ತೆಗೆದುಕೊಂಡರೆ ವಿಚಾರಕನು 'ನಾನು' ಎಂಬ ಮಾತಿನಿಂದ ತನ್ನೊಬ್ಬನನ್ನು ಮಾತ್ರ ಕರೆಯಬಹುದು. ಅವನ ಭಾಗಕ್ಕೆ ಉಳಿದವರೆಲ್ಲರೂ 'ನೀನು' ಎಂದೋ 'ಅವನು' 'ಅವಳು' ಅಥವಾ 'ಅದು' ಎಂದೋ ಬೇರೆ ಪುರುಷಗಳ ಸರ್ವನಾಮದಿಂದ ಕರೆಸಿಕೊಳ್ಳತಕ್ಕವರಾಗಿರುವರು. ಲೋಕದಲ್ಲಿ ಯಾವನೂ 'ನಾನು, ನಾ'ನೆಂದು ಬೇರೆಬೇರೆ ಬಹಳವಾಗಿ ಎಣಿಸುವದಕ್ಕೆ ಬರುವದಿಲ್ಲ. ಆದ್ದರಿಂದ

ವಿಚಾರಕನ 'ನಾನು' ಎಂಬ ಮಾತಿಗೆ ಬಹುವಚನವಿಲ್ಲವೇ ಇಲ್ಲ. ಉಳಿದ ಪುರುಷಗಳಲ್ಲಿ ವಿಚಾರಕನಿಗೆ ಆಯಾ ಪುರುಷಗಳ ಸರ್ವನಾಮಗಳಿಂದ ಕರೆಸಿಕೊಳ್ಳುವ ಬಹುಜನರೇ ಇದ್ದದ್ದರಿಂದ ಆ ಪುರುಷಗಳಿಗೆ ಮಾತ್ರ ಶುದ್ಧವಾದ ಬಹುವಚನವು ಒಪ್ಪಿತು. ಲೋಕದಲ್ಲಿ 'ನಾನು' ಎಂಬ ಮಾತಿನ ಬಹುವಚನವಾದ 'ನಾವು' ಎಂಬ ಮಾತಿಗೇನು ಅರ್ಥವೆಂದರೆ: 'ನಾನು ಮತ್ತು ನೀನು' ಅಥವಾ 'ನಾನು ಮತ್ತು ಅವನು' ಎಂದೇ ಹೊರತು 'ನಾನು ಮತ್ತು ನಾನು' ಎಂದಲ್ಲ. ಹೀಗೆ 'ನಾವು' ಎಂಬ ಉತ್ತಮಪುರುಷದ ಮಾತು ಶುದ್ಧವಾಗಿ ಉತ್ತಮಪುರುಷದ ಬಹುವ್ಯಕ್ತಿಗಳನ್ನು ಒಳಗೊಂಡದ್ದಾಗಿರದೆ ಉಳಿದ ಪುರುಷಗಳ ಮಿಶ್ರಣದಿಂದ ಎದ್ದುಕೊಂಡದ್ದಾಗಿರುವದು. ಅದಕ್ಕೆ ಶುದ್ಧವಾದ ಬಹುವಚನವಿಲ್ಲದಿರುವದೆ ಅದು ಯಾವಾಗಲೂ ತನ್ನ ನಿಜಸ್ವರೂಪದಿಂದ ಒಂದೇ ಒಂದಾಗಿರುವದೆಂದು ಕಣ್ಣಿಗೆ ಕಟ್ಟಿದಂತೆ ಕಾಣುತ್ತದೆ. ಇದರಿಂದ 'ನಾನು' ಎಂಬ ಮಾತಿನಿಂದ ಕರೆಸಿಕೊಳ್ಳುವ ಜೀವರಲ್ಲಿ ಒಬ್ಬರಿಗೊಬ್ಬರು ಬೇರೆಬೇರೆಯಲ್ಲ.

*****

## 10. ಈಶ್ವರನೂ ಜಗತ್ತೂ ಬೇರೆಬೇರೆಯಲ್ಲ

ಜೀವನೂ ಈಶ್ವರನೂ ಚೇತನಸ್ವರೂಪರಾದ್ದರಿಂದ ಬೇರೆಬೇರೆ ಅಲ್ಲವೆಂದರೂ ಜಡವಾದ ಜಗತ್ತೊಂದು ಹೊರಗೆ ಕಾಣುತ್ತಿದೆಯಷ್ಟೆ. ಈ ಜಗತ್ತಿನಲ್ಲಿ ಮಳೆ, ಬೆಳೆ- ಮೊದಲಾದವುಗಳು ಕಾಲದ ಮತ್ತು ದೇಶದ ನಿಯಮಕ್ಕೆ ಕಟ್ಟುಬಿದ್ದು ನಡೆಯುತ್ತಿರುವದನ್ನು ನೋಡಿದರೆ ಇದಕ್ಕೊಬ್ಬ ನಿಯಾಮಕರನಿರಬೇಕೆಂದು ತೋರುತ್ತದೆ. ಆ ನಿಯಾಮಕನೆ ಈಶ್ವರ. ಆದ್ದರಿಂದ ಕುಂಬಾರನು ಬೇರೆ ಇದ್ದುಕೊಂಡು ಗಡಿಗೆಯನ್ನು ಮಾಡಿದಂತೆ ಈಶ್ವರನು ಬೇರೆ ಇದ್ದುಕೊಂಡು ಜಗತ್ತನ್ನು ಮಾಡಿರಬೇಕೆಂದು ಹೇಳಬೇಕಾಗುವದು. ಹೀಗೆ ಈಶ್ವರನು ಬೇರೆ, ಜಗತ್ತು ಬೇರೆ- ಎಂಬೊಂದು ಭೇದವನ್ನು ಒಪ್ಪಲೇಬೇಕಾಗುವದೆಂದು ತೋರಬಹುದು. ಈ ಭೇದಕ್ಕೂ ಕಾಲಿಲ್ಲ. ಹೇಗೆಂದರೆ :

(1) ಈಶ್ವರನ ಇರುವಿಕೆಯನ್ನು ಒಪ್ಪುವವರೆಲ್ಲ ಜಗತ್ತನ್ನು ಹುಟ್ಟಿಸುವದಕ್ಕೆ ಮೊದಲು ಈಶ್ವರನೊಬ್ಬನೆ ಇದ್ದನೆಂದೂ ಇನ್ನೇನೂ ಇರಲಿಲ್ಲವೆಂದೂ ಒಪ್ಪುವರು. ಹಾಗೆ ಅವನು ಒಬ್ಬನೆ ಇದ್ದರೆ 'ಜಗತ್ತನ್ನು ಏತರಿಂದ ಮಾಡಿದನು?' ಎಂಬ ಪ್ರಶ್ನೆ

ಏಳುತ್ತದೆ. ಅವನು ಸರ್ವಶಕ್ತನಾದ್ದರಿಂದ ಜಗತ್ತನ್ನು ಹುಟ್ಟಿಸಬೇಕೆಂದು ಮನಸ್ಸಾಗುತ್ತಲೆ ಹುಟ್ಟಿಸಿಬಿಟ್ಟನೆಂದು ಬಹುಜನರು ತೇಲಿಸಿ ಹೇಳಿಬಿಟ್ಟಿದ್ದಾರೆ. ಆದರೂ ಮೇಲಿನ ಪ್ರಶ್ನೆಗೆ ಈ ಹಾರಿಕೆಯ ಉತ್ತರವು ಸಾಕಾಗುವದಿಲ್ಲ. ಏಕೆಂದರೆ: ಕುಂಬಾರನು ಬೇಕುಬೇಕಾದದ್ದನ್ನು ಮಾಡಬಲ್ಲ ಶಕ್ತನಾದರೂ ಅವನು ಗಡಿಗೆ ಮೊದಲಾದವುಗಳನ್ನು ಮಾಡಬಲ್ಲನೆ ಹೊರತು ಮಣ್ಣನ್ನು ಮಾಡಬಲ್ಲನೆ? ಅವನಿಗೆ ಮಣ್ಣು ಬೇಕು. ಅದರಂತೆ ಈಶ್ವರನಿಗೂ ಜಗತ್ತನ್ನು ಮಾಡುವದಕ್ಕೇನಾದರೂ ಬೇಕೆನಿಸುವದು. ಈ ವಿಷಯದಲ್ಲಿ ನಮ್ಮ ವೇದವು ಮಾತ್ರ ತಲೆದೂಗುವಂತೆ ಬಾಯಿ ಬಿಟ್ಟು ಹೇಳಿರುತ್ತದೆ. ಜಗತ್ತನ್ನು ಹೇಗೆ ಮಾಡಬೇಕೆಂದು ಮನಸ್ಸಾಯಿತೆಂಬುದನ್ನು ಹೇಳುವದಕ್ಕೆ ನಮ್ಮ ವೇದದ ಹೊರತು ಯಾರೂ ಎದೆಗೊಟ್ಟಿಲ್ಲವಷ್ಟೆ. ಇದನ್ನು ಕಂಡುಹಿಡಿದು ಹೇಳಬೇಕೆಂದರೆ ನಿಜವಾಗಿ ಇದು ಎದೆಗೆಡಿಸುವಂಥ ಮಾತೆ. ಆದರೆ ಅದು ವೇದಕ್ಕೆ ಅಸಾಧ್ಯವಲ್ಲ. ಈಶ್ವರನಿಗೆ ಜಗತ್ತನ್ನು ಹುಟ್ಟಿಸಬೇಕೆನಿಸಿದಾಗ ತನಗೆರಡನೆಯದಿನ್ನೇನೂ ಇಲ್ಲದ್ದರಿಂದ ತಾನೆ ಜಗತ್ತಿನ ರೂಪದಲ್ಲಿ ಹೊರಬಿದ್ದು ಕಾಣಿಸಿಕೊಳ್ಳುವೆನೆಂಬ ಮನಸ್ಸಾಯಿತು. ಅದರಂತೆ ಅವನೆ ಈ ಎಲ್ಲ ಜಗತ್ತಿನ ರೂಪವನ್ನು ತಾಳಿದನು. ಆದ್ದರಿಂದ ಈಶ್ವರನೂ ಜಗತ್ತೂ ಬೇರೆಬೇರೆಯಲ್ಲ.

(2) ಆಸ್ತಿಕರೆಲ್ಲರೂ ಈಶ್ವರನನ್ನು ಸರ್ವವ್ಯಾಪಿಯೆನ್ನುವರು. ಅವನಿಗಿಂತ ಬೇರೆಯಾದ ಜಗತ್ತಿರುವ ಸಂದರ್ಭದಲ್ಲಿ ಜಗತ್ತಿರುವ ಪ್ರದೇಶದಲ್ಲಿ ಅವನಿಲ್ಲವಾಗಬೇಕಾಗುತ್ತದೆ. ಆದ್ದರಿಂದ ಹೀಗೆ ಹೇಳಿ ಅವನ ಸರ್ವವ್ಯಾಪಿತ್ವಕ್ಕೆ ಸೊನ್ನೆಸುತ್ತುವದು ಯಾರಿಗೂ ಒಪ್ಪಲ್ಲ. ಅವನೇ ಜಗತ್ತಿನ ರೂಪವಾಗಿ ಕಾಣಿಸಿಕೊಳ್ಳುತ್ತಿರುವನೆಂದರೆ ಅವನ ಸರ್ವವ್ಯಾಪಿತ್ವಕ್ಕೆ ಇನ್ನಷ್ಟು ಬಣ್ಣವೇರುವದು. ಆದ್ದರಿಂದ ಈಶ್ವರನೂ ಜಗತ್ತೂ ಬೇರೆಬೇರೆಯಲ್ಲ.

(3) ಈಶ್ವರನು ಕುಂಬಾರನಂತೆ ಬರೀ ಮಾಡುವವನಾದರೆ ಅವನು ಸರ್ವವ್ಯಾಪಿಯಾಗುವದಿಲ್ಲ. ಗಡಿಗೆಯಾದಾಗ ಗಡಿಗೆಯಲ್ಲಿ ಮಣ್ಣು ಸರ್ವವ್ಯಾಪಿಯೇ ಹೊರತು ಕುಂಬಾರನಲ್ಲ. ಆದ್ದರಿಂದ ಈಶ್ವರನು ಸರ್ವವ್ಯಾಪಿಯಾಗಬೇಕಾದರೆ ಅವನೆ ಜಗತ್ತಿನ ರೂಪವನ್ನು ತಾಳಿರಬೇಕು. ಆದಕಾರಣ ಈಶ್ವರನೂ ಜಗತ್ತೂ ಬೇರೆಬೇರೆಯಲ್ಲ.

(4) ಈಶ್ವರನು ಜಗತ್ತಿನ ರೂಪವನ್ನು ತಾಳಿದರೆ ಈ ಬದಲಾವಣೆಯ ದೆಸೆಯಿಂದ ಅವನು ನಾಶವಾಗುವನೆಂದು ತೋರಬಹುದು. ನಿಜ, ಬದಲಾವಣೆಯನ್ನು ಹೊಂದಿದರೆ ನಾಶವು ಕಟ್ಟಿಟ್ಟ ಗಂಟು. ಹಗ್ಗವು ತಾನು ಯಾವ

ಬದಲಾವಣೆಯನ್ನೂ ಹೊಂದದೆ ಹಾವನ್ನು ಹಡೆಯುವಂತೆ ಈಶ್ವರನು ತಾನು ಯಾವ ಬದಲಾವಣೆಯನ್ನೂ ಹೊಂದದೆ ಜಗತ್ತನ್ನು ಹುಟ್ಟಿಸುವನು. ಜಗತ್ತಾಗಿ ಕಾಣುವ ಹೆಸರುಗಳೂ ಆಕಾರಗಳೂ ಎಲ್ಲ ತೋರಿಕೆಯು ಮಾತ್ರ. ಮಣ್ಣು ಗಡಿಗೆಯೆಂಬ ಆಕಾರವನ್ನು ತಾಳಿದಾಗ ಮಣ್ಣನ್ನು ಬಿಟ್ಟು ಗಡಿಗೆಯೆಂಬ ವಸ್ತುವಾಗಿರುವ ದುಂಟೇನು? ಯಾವ ಆಕಾರಕ್ಕೂ ತನ್ನ ಸ್ವಂತವಾದ ಇರುವಿಕೆ ಇಲ್ಲ. ಹೆಸರೆಂಬುದು ಆಕಾರವನ್ನು ಅವಲಂಬಿಸಿಕೊಂಡು ತಲೇ ಎತ್ತಿದ್ದು. ಆದ್ದರಿಂದ ಅದಕ್ಕೂ ಇರುವಿಕೆಗೂ ಎಷ್ಟೋ ದೂರವಾಯಿತು. ಆದ್ದರಿಂದ ಜಗತ್ತು ಈಶ್ವರನ ಆಧಾರದ ಮೇಲಿರುವ ಬರೀ ತೋರಿಕೆಯದು. ಆದ್ದರಿಂದಲೇ ಈಶ್ವರನೂ ಜಗತ್ತೂ ಬೇರೆಬೇರೆಯಲ್ಲ.

*****

## 11. ಜೀವನೂ ಜಗತ್ತೂ ಬೇರೆಬೇರೆಯಲ್ಲ

ಜಗತ್ತು ಈಶ್ವರನಿಗಿಂತ ಬೇರೆಯಲ್ಲದಿದ್ದರೂ ಜೀವನಿಗಿಂತ ಬೇರೆಯಾಗಿ ತೋರುವದಕ್ಕೇನು ಸಮಾಧಾನವೆಂದು ಕೇಳಬಹುದು. ಜೀವನೂ ಈಶ್ವರನೂ ಬೇರೆಬೇರೆಯಲ್ಲವೆಂದು ಮೇಲೆ ಹೇಳಿರುವದರಿಂದ ಈಶ್ವರನೂ ಜಗತ್ತೂ ಬೇರೆಬೇರೆಯಲ್ಲವೆಂಬ ಮಾತಿನಿಂದಲೆ ಜೀವನೂ ಜಗತ್ತೂ ಬೇರೆಬೇರೆಯಲ್ಲವೆಂದು ಹೇಳಿದಂತೆಯೆ ಆಯಿತು. ಆದ್ದರಿಂದ ಜೀವನೂ ಜಗತ್ತೂ ಬೇರೆಬೇರೆ ಯಲ್ಲವೆಂಬುದಕ್ಕೆ ಬೇರೆ ಕಾರಣಗಳು ಬೇಕಾಗಿಲ್ಲ.

*****

## 12. ಜಡವಸ್ತುಗಳೂ ಒಂದಕ್ಕೊಂದು ಬೇರೆಬೇರೆಯಲ್ಲ

ಎಲ್ಲ ಭೇದಗಳನ್ನು ತೊಲಗಿಸಿದರೂ ಜಡವಸ್ತುಗಳಲ್ಲಿ ಒಂದಕ್ಕೊಂದಕ್ಕಿರುವ ಭೇದವನ್ನು ತೊಲಗಿಸುವದಾಗಲಾರದೆಂದು ತೋರಬಹುದು. ವಿಚಾರಮಾಡಿದರೆ ಅದಕ್ಕಾಗಿ ಕಷ್ಟಪಡುವದು ನೆಲಾ ಗುದ್ದಿ ಮೈ ನೋಯಿಸಿಕೊಂಡಂತೆ. ಅವೆಲ್ಲ ಬರೀ ತೋರಿಕೆಯವುಗಳೆಂದು ಗೊತ್ತಾದಮೇಲೆ ಅವುಗಳ ಭೇದದಿಂದ ಹಾನಿಯೇನು? ಲೋಕದಲ್ಲಿ ನಿಜವಾದ ಎರಡನೆಯವುಗಳು ಹಾನಿಕರವೆ ಹೊರತು ತೋರಿಕೆಯ

ಎರಡನೆಯವುಗಳಿಂದ ಬಾಧಕವೇನೂ ಇಲ್ಲ. ಆದ್ದರಿಂದ ಆ ಭೇದವು ಇದ್ದುಕೊಂಡಿರಲಿ. ಅಥವಾ ಇದ್ದುಕೊಂಡಿರಲೆಂಬುದೇಕೆ? ಎಲ್ಲ ಜಡ ವಸ್ತುಗಳಿಗೂ ಮೂಲಪುರುಷನು ಈಶ್ವರನೊಬ್ಬನೇ ಆದ್ದರಿಂದ ಜಡವಸ್ತುಗಳಲ್ಲಿ ಒಂದಕ್ಕೊಂದು ಬೇರೆಬೇರೆಯೆನ್ನುವ ಇರುವಿಕೆಯ ಮಾತು ಬರೀ ಮಾತು ಮಾತ್ರ .

*****

## 13. ಮನಸ್ಸೇ ಸುಖದುಃಖಗಳ ಮನೆ

ಹೀಗೆ ವಿಚಾರವೆಂಬ ಸೂರ್ಯನ ತೀಕ್ಷ್ಣವಾದ ಕಿರಣಗಳು ಹೊರಹೊಮ್ಮುತ್ತಲೆ ಜಗತ್ತಿನಲ್ಲಿ ಭೇದವೆಂಬ ಬರೀ ತೋರಿಕೆಯ ಮಂಜಿನ ಮುಸುಕು ಇಲ್ಲದಂತಾಗಿ ಸೃಷ್ಟಿಗೆ ಮೊದಲು ಹೇಗೆ ಎರಡನೆಯದಿಲ್ಲದ ಸ್ಥಿತಿ ಇತ್ತೋ ಹಾಗೆ ಈಗಲೂ ಮುಂದಕ್ಕೂ ಎರಡನೆಯದಿಲ್ಲದ ಸ್ಥಿತಿಯೇ ಎಂದೂ ಈಶ್ವರನೊಬ್ಬನೆ ನಿಜವಾಗಿರುವ ವಸ್ತುವೆಂದೂ ವೇದವು ಹೇಳಿರುವದೆಂಬ (11ನೆ ಪುಟದಲ್ಲಿರುವ) ಮಾತು ಯುಕ್ತಿಗೂ ಹೊಂದಿಕೆಯಾಗಿರುವದು.

ಇನ್ನು ಜಗತ್ತಿನಲ್ಲಿ ನಮಗೆ ಎರಡನೆಯ ವಸ್ತುಗಳಿಂದ ಸುಖವೂ ದುಃಖವೂ ದೊರೆಯುವದೆಂಬ ಅನುಭವವೊಂದಿದೆ. ಅದು ಅವುಗಳನ್ನು ನಿಜವೆಂದು ತಿಳಿಯುವ ಹಾಗೆ ಮಾಡುತ್ತದಲ್ಲ! ಅದಕ್ಕೇನು ಸಮಾಧಾನವೆಂದರೆ ಅದನ್ನು ತಿಳಿದುಕೊಳ್ಳುವದಕ್ಕೆ ಮುಂಚೆ ಇನ್ನೊಂದು ಮಾತನ್ನು ನೆನಪಿನಲ್ಲಿಡಬೇಕು. ಎರಡನೆಯವುಗಳಿಂದ ನಮಗೆ ಸುಖವೂ ದುಃಖವೂ ದೊರೆಯುವದೆನ್ನುವೆವಷ್ಟೆ. ವಿಚಾರಮಾಡಿದರೆ ಆ ಮಾತಿನ ಬಣ್ಣ ಬದಲಾಗುವದು. ಹೇಗೆಂದರೆ: ಎರಡನೆಯವುಗಳಿಂದ ನಮಗೆ ಸುಖವಾಯಿತೆನ್ನುವಾಗ ಅದು ಕಗ್ಗತ್ತಲೆಯಲ್ಲಿ ಮಿಂಚಿನ ಬೆಳಕಿನಿಂದ ದಾರಿ ಕಾಣಬಂದು ಆನಂದವುಂಟಾಗಿ ಕಣ್ಣುಮುಚ್ಚಿಬಿಡುವಷ್ಟರಲ್ಲಿ ಇನ್ನಷ್ಟು ಹೆಚ್ಚಿನ ಕತ್ತಲೆ ಕವಿದು ನಮ್ಮ ದುಃಖವನ್ನು ಹೆಚ್ಚಿಸುವಂತೆ ಆಗುವದು. ಹೀಗೆ ಎರಡನೆಯವುಗಳಿಂದಾಗುವ ಸುಖವೆಂಬುದು ಹೆಚ್ಚಿನ ದುಃಖಕ್ಕೇ ಕಾರಣವಾಗುವದರಿಂದ ಅದನ್ನೂ ದುಃಖದೊಳಗೇ ಸೇರಿಸಬೇಕಾಗುವುದು. ಹೀಗಾಗಿ ಎರಡನೆಯವುಗಳಿಂದ ನಾವು ದುಃಖವನ್ನು ಮಾತ್ರ ಪಡೆಯುತ್ತಿರುವೆವೆನಿಸುವದು. ಇದರಿಂದ ಎರಡನೆಯವುಗಳೆಂಬುವೆಲ್ಲ ಈಶ್ವರನ ಮಾಯೆಯಿಂದಾಗಿರುವ ಬರೀ ತೋರಿಕೆಯವುಗಳಾಗಿದ್ದು ಹೆದರಿಕೆಯ ತೌರೂರುಗಳಾಗಿರುವವೆಂದೂ ಬಹುಬಗೆಯನ್ನು ನಿಜವೆಂದು ಕಾಣುವವನು ಸಾವಿನಿಂದ

ಸಾವನ್ನು ಪಡೆಯುತ್ತಿರುವನೆಂದೂ ವೇದವು ಹೇಳುವದೆಂಬ (11ನೆ ಪುಟದ) ಮಾತೂ ಯುಕ್ತಿಯಿಂದ ಕಾಲೂರಿ ನಿಂತುಕೊಂಡಂತಾಯಿತು.

'ಹೊರಗಣ ಪದಾರ್ಥಗಳಿಂದ ಸುಖವೇ ಇಲ್ಲವೆಂದೇಕೆ ಹೇಳಬೇಕು? ಸುಖಸಾಧನಗಳ ಕೊರತೆಯೇ ನಮ್ಮ ದುಃಖಕ್ಕೆ ಕಾರಣವೆಂದೇಕೆ ಹೇಳಬಾರದು? ಮಿಂಚಿನ ಬೆಳಕು ಬಹುಕಾಲವಿರುವಂತೆ ಮಾಡಿಕೊಂಡರಾಯಿತಲ್ಲ!' ಎಂದರೆ ಹಾಗೆ ನಮಗೆ ಬೇಕೆನಿಸಿದ ಎರಡನೆಯವುಗಳಾದ ಸುಖಸಾಧನಗಳು ಎಷ್ಟು ಸಮೃದ್ಧಿಯಾದರೆ ಅಷ್ಟು ಸುಖವೆಂಬುದು ನಿಜವಲ್ಲ. ಬೇಕಾದಷ್ಟು ಸುಖಸಾಧನ ಸಮೃದ್ಧಿಯಲ್ಲಿ ಮುಳುಗಿಕೊಂಡಿರುವ ರಾಜಾಧಿರಾಜರಿಗೂ ದುಃಖದ ಭಯವು ತಪ್ಪಿದ್ದಲ್ಲ. ಅಖಂಡಭೂಮಂಡಲವನ್ನಾಳುತ್ತಿದ್ದರೂ ಇನ್ನೂ ಬೇಕುಬೇಕೆಂದು ತಲ್ಲಣಿಸುತ್ತಿರುವ ರಾಜರ ಕಡೆಗೆ ಕಣ್ಣು ಹಾಕಿದರೆ ಎರಡನೆಯವುಗಳಾದ ಸುಖಸಾಧನಗಳ ಸಮೃದ್ಧಿ ಇದ್ದರೂ ಅವರ ದುಃಖವು ಇಲಿ ಓಡಾಡುತ್ತಿರುವ ಕಡೆ ದಾರಕ್ಕೆ ಕಟ್ಟಿ ತೂಗು ಹಾಕಿರುವ ಕತ್ತಿಯ ಕೆಳಗೆ ಪಂಚಭಕ್ಷ್ಯಪರಮಾನ್ನದ ಎಡೆಯಲ್ಲಿ ಭೋಜನಕ್ಕೆ ಕುಳಿತಂತೆ ಇರುವುದು. ಇದರಿಂದ ನಮ್ಮ ಸುಖಕ್ಕೆ ಎರಡನೆಯ ವಸ್ತುಗಳ ಸಮೃದ್ಧಿಯು ಕಾರಣವಲ್ಲವೆಂದಾಯಿತು. ಚೆನ್ನಾಗಿ ನೋಡಿದರೆ ಸುಖಸಾಧನಗಳ ಹೆಚ್ಚಿಗೆಗೆ ಅನುಗುಣವಾಗಿ ದುಃಖದ ಭಯವೂ ಹೆಚ್ಚುವದು. ಮೋಟಾರ್ ಗಾಡಿಯು ಪ್ರಯಾಣಕ್ಕೆ ಹೆಚ್ಚು ಉಪಯೋಗಕರವಾಗಿ ಕಂಡಷ್ಟೂ ಅದರಿಂದುಂಟಾಗುವ ಹಾನಿಗಳ ದೃಷ್ಟಿಯಿಂದ ಹೆಚ್ಚು ಹಾನಿಯನ್ನುಂಟುಮಾಡುವಿಕೆಯೂ ಅದರ ಬೆನ್ನು ಹತ್ತಿರುವದು ಪ್ರತಿದಿನವೂ ಕಂಡುಬರುತ್ತಿದೆ. ಹೀಗೆ ಸುಖಸಾಧನಗಳೆನಿಸಿದವುಗಳೆಲ್ಲ ದುಃಖಸಾಧನಗಳಾಗಿಯೇ ಪರಿಣಮಿಸಿದೆ.

ಸುಖಸಾಧನಗಳ ಕೊರತೆಯೇ ದುಃಖಕ್ಕೆ ಕಾರಣವೆನ್ನುವದು ಪಶ್ಚಿಮದ ಗಾಳಿಯನ್ನು ಹೆಚ್ಚಾಗಿ ಉಸಿರಾಡಿದ್ದರಿಂದ ಉಕ್ಕಿಬಂದಿರುವ ಅಭಿಪ್ರಾಯ. ಇದರ ಬುಡವು ನಮ್ಮ ದೇಶದಲ್ಲಿಲ್ಲ. ಸುಖಸಾಧನಗಳ ಸೆಲೆಯೇ ಇಲ್ಲದೆ ಸುಖದಲ್ಲಿ ತೇಲಾಡುತ್ತಿರಬಹುದೆಂಬದನ್ನು ನಮ್ಮ ದೇಶವು ಎಷ್ಟೋ ದಿನಗಳ ಹಿಂದೆಯೇ ತೋರಿಸಿಕೊಟ್ಟಿದೆ. ಆದ್ದರಿಂದಲೂ ನಮ್ಮ ದುಃಖಕ್ಕೆ ಎರಡನೆಯವುಗಳಾದ ಸುಖಸಾಧನಗಳ ಕೊರತೆಯು ಕಾರಣವಲ್ಲವೆಂದಾಯಿತು. ನಮ್ಮ ದೇಶದಲ್ಲಿ ನಮ್ಮ ಬಹು ಹಿಂದಿನ ಹಿರಿಯರಾದ ಮಹರ್ಷಿಗಳು ಎರಡನೆಯ ವಸ್ತುಗಳ ಸೋಂಕಿಲ್ಲದೆ ತಾವು ತಮ್ಮ ತೃಪ್ತಿಯಿಂದ ತೇಗುವವರಾಗಿ ತಮ್ಮ ಬಳಿಗೆ ಬಂದು ಜೋಳಿಗೆಯನ್ನೊಡ್ಡುವ ಸಾರ್ವಭೌಮರಿಗೆ ಆನಂದದ ಭಿಕ್ಷೆಯನ್ನು ನೀಡುತ್ತಿದ್ದ

ಉದಾಹರಣೆಗಳು ಬೇಕಾದಷ್ಟಿವೆ. ಇದೆಲ್ಲ ಪುರಾಣದ ಮಾತುಗಳೆಂದು ಇದಕ್ಕೆ ಅರ್ಧಚಂದ್ರಪ್ರಯೋಗವನ್ನು ಮಾಡುವಹಾಗಿಲ್ಲ. ಈಗಲೂ ಕೂಡ ವಿರಕ್ತರಾಗಿ ತಪಸ್ವಿಗಳಾಗಿರುವ ಸಾಧುಶಿರೋಮಣಿಗಳೆಷ್ಟೋ ಜನರು ಅಲ್ಲಲ್ಲಿ ನಮ್ಮ ದೇಶದ ಆ ಸೌಭಾಗ್ಯವನ್ನು ಬೆಳಗುವ ಆಕಾಶದೀಪರಾಗಿರುವರು.

'ಎರಡನೆಯವುಗಳಿಲ್ಲದೆ ಸುಖವಾಗಲಿ ದುಃಖವಾಗಲಿ ಆಗುವದೆಂಬ ಮಾತು ಮನಸ್ಸಿಗೆ ಅಂಟಿಕೊಳ್ಳುವದಿಲ್ಲ' ಎಂದರೆ ಕನಸನ್ನು ನೆನಸಿಕೊಂಡರೆ ಅಂಟಿಕೊಳ್ಳುವದು. ಕನಸಿನಲ್ಲಿ ಎರಡನೆಯ ಪದಾರ್ಥಗಳಿಲ್ಲವೆಂದು ನಮಗೆ ಗೊತ್ತಿದೆ. ಅಲ್ಲಿ ಸುಖದುಃಖಗಳಾಗುತ್ತಿರುವದೆಂಬುದೂ ನಮಗೆ ಗೊತ್ತಿದೆ. ಇದರಿಂದಲೆ ಎರಡನೆಯವುಗಳಿಗೂ ಸುಖದುಃಖಗಳಿಗೂ ಸಂಬಂಧವಿಲ್ಲವೆಂದು ಸ್ಪಷ್ಟವಾಗುವದು. ಹಾಗಾದರೆ ಸುಖದುಃಖಗಳ ತಾಯಿಬೇರು ಯಾವದು? ಬಯಕೆ. ಎರಡನೆಯವುಗಳಾದ ಸುಖಸಾಧನಗಳ ಸಮೃದ್ಧಿ ಇದ್ದರೂ ಬಯಕೆಯೊಂದಿದ್ದರೆ ಸುಖದುಃಖಗಳು ಸಿದ್ಧ. ಈಚೀಚೆಗೆ ನಮ್ಮ ದೇಶದಲ್ಲಿ ಪಶ್ಚಿಮದೇಶದ ಮಹಾಪ್ರಸಾದವಾಗಿ ಲೆಕ್ಕವಿಲ್ಲದಷ್ಟು ಸುಖಸಾಧನಗಳು ತಾಂಡವವಾಡುತ್ತಿವೆ. ಅದರ ಹೆಗಲಮೇಲೆ ಕೈಹಾಕಿಕೊಂಡೇ ನಮ್ಮ ಸುಖ ದುಃಖಗಳು ಪಿಶಾಚನರ್ತನವನ್ನು ಮಾಡುತ್ತಿವೆ. ಇದಕ್ಕೇನು ಕಾರಣ? ಪರದೇಶದವರು ತಮ್ಮಹೊಟ್ಟೆಗಳೆಂಬ ಹಾಳು ಹಗೇವುಗಳಿಗೆ ನಮ್ಮ ದುಡಿತದ ದುಡ್ಡನ್ನು ಬಾಚಿ ಬಳಿದು ತುಂಬಿಕೊಳ್ಳಬೇಕೆಂದು ನಮಗೆ ಅಂತ್ಯವಿಲ್ಲದ- ಎಂದರೆ ಯಾವ ವಸ್ತುಗಳಿಲ್ಲದಿದ್ದರೂ ನಮ್ಮ ಬಾಳು ಕೊರತೆ ಇಲ್ಲದೆ ಸಾಗುತ್ತಿರುವದೊ ಅಂಥ- ಎಷ್ಟೋ ವಸ್ತುಗಳನ್ನು ಬಗೆಬಗೆಯಾಗಿ ಮಾಡಿ ನಮ್ಮ ಬಾಯಲ್ಲಿ ನೀರೂರಿಸಿ ನಮ್ಮ ಹೊಟ್ಟೆಯ ಮೇಲೆ ಒದ್ದೆಬಟ್ಟೆಯನ್ನು ಹಾಕಿ ನಮ್ಮನ್ನು ತಮ್ಮ ಗಿರಾಕಿಗಳನ್ನಾಗಿ ಮಾಡಿಕೊಂಡಿರುವರು. ಆ ದುಂದುಗಾರಿಕೆಯ ಕೈವಾಡಗಳಿಗೆ ನಾವು ಮರುಳಾದಷ್ಟೂ ದುಃಖವೆಂಬುದೆ ನಮ್ಮ ಮೇಲೆ ಚೆನ್ನಾಗಿ ಕಾಲುಚಾಚಿಕೊಳ್ಳುವದು.

ಬಯಕೆಯೇ ದುಃಖಕ್ಕೆ ಕಾರಣವೆಂಬುದನ್ನು ಗಣಿತಶಾಸ್ತ್ರದ ಉದಾಹರಣೆಯಿಂದಲೂ ತೋರಿಸಬಹುದು. ಭಿನ್ನರಾಶಿಯಲ್ಲಿ ಛೇದವನ್ನು ಏರಿಸಿದಷ್ಟೂ ಅಂಶದ ಬೆಲೆ ಇಳಿದುಹೋಗುವದು; ಛೇದವನ್ನು ಇಳಿಸಿದಷ್ಟೂ ಅಂಶದ ಬೆಲೆ ಏರುವದು. ಭಿನ್ನರಾಶಿಯ ಬೆಲೆಯು ಅಂಶದ ಏರಿಕೆಯಿಂದಾಗುವದಕ್ಕಿಂತ ಛೇದದ ಇಳಿತದಿಂದ ಹೆಚ್ಚು ಉತ್ತಮಗೊಳ್ಳುವದು. ಇದರಿಂದ ನಾವೇನು ತಿಳಿಯಬೇಕು? ದುಂದುಗಾರಿಕೆಗೆ ಕಾಲಿಡಗೊಡದೆ ಆಡಂಬರವಿಲ್ಲದ ಬಾಳು

ಮಾಡಿಕೊಂಡು ಮೂರುಲೋಕದ ಮೂಗಿನ ಮೇಲೆ ಬೆರಳಿಡಿಸುವಂಥ ಪ್ರೌಢವಿಚಾರಪರರಾಗಿರುವದೇ ನಮ್ಮ ಗುರಿಯಾಗಿರಬೇಕು.

ಬಯಕೆಯ ಬಿಡಾರವು ನಮ್ಮ ಮನಸ್ಸು. ಆದ್ದರಿಂದ ನಮ್ಮ ಸುಖದುಃಖಗಳು ಹೊರಗಣ ವಸ್ತುಗಳನ್ನು ಅವಲಂಬಿಸಿಕೊಂಡಿಲ್ಲ; ನಮ್ಮ ಮನಸ್ಸನ್ನು ಅವಲಂಬಿಸಿಕೊಂಡಿವೆ. ಉದಾಹರಣೆಗೆ ನೋಡಿ. ದೂರದ ಊರಿನಲ್ಲಿ ನಮ್ಮ ಬಂಧು ಒಬ್ಬನು ಸತ್ತಿರುವನೆಂದಿಟ್ಟುಕೊಳ್ಳಿ. ಆ ಸುದ್ದಿ ನಮಗೆ ಮುಟ್ಟದೆ ಇದ್ದರೆ ನಾವು ಎಂದಿನಂತೆ ಇರುವೆವು. ಇದರಿಂದ ನಮ್ಮ ಮನಸ್ಸಿನ ಸಂಬಂಧಗೊಳ್ಳದಿರುವ ಬರೀ ಆ ಸಾವು ನಮ್ಮಲ್ಲೇನೂ ಬದಲಾವಣೆಯನ್ನುಂಟುಮಾಡಲಾರದು. ಆ ಬಂಧು ಬದುಕಿರುವನೆಂದಿಟ್ಟುಕೊಳ್ಳಿ. ಅವನು ಸತ್ತನೆಂದು ಸುಳ್ಳು ಸುದ್ದಿ ನಮಗೆ ಮುಟ್ಟಿದರೆ ಅದು ನಮ್ಮ ಮನಸ್ಸಿಗೆ ತಾಕುತ್ತಲೆ ನಮ್ಮ ಮನಸ್ಸಿನಲ್ಲಿ ಬೇಗುದಿ ಏಳುವದು. ಇದಲ್ಲದೆ ರಾಜದೂತನು ದಾರಿಹೋಕನಾಗಿ ಬರುತ್ತಿದ್ದರೂ ಅವನನ್ನು ಕಂಡ ಕಳ್ಳನ ಎದೆ ಹೊಡೆದುಕೊಳ್ಳುತ್ತಿರುವದು. ಇದರಿಂದ ಸುಖದುಃಖಗಳು ಮನಸ್ಸಿನಲ್ಲಿ ಮನೇ ಮಾಡಿಕೊಂಡಿರುವವೆಂದು ಗೊತ್ತಾಗುವದು.

*****

## 14. ಮನಸ್ಸನ್ನು ಕಶೀಮಾಡುವದು

ಹೀಗೆ ಎರಡನೆಯ ವಸ್ತುಗಳೆಲ್ಲ ನಮ್ಮ ಸುಖದುಃಖಗಳಿಗೆ ನೆಪಮಾತ್ರಕ್ಕೆ ಕಾರಣಗಳೆಂದೂ ಆ ಸುಖದುಃಖಗಳು ಮನಸ್ಸಿನಲ್ಲಿ ಬೇರು ಬಿಟ್ಟುಕೊಂಡು ನೆಲಸಿರುವವೆಂದೂ ಗೊತ್ತಾದಮೇಲೆ ಏನು ಮಾಡಬೇಕು? ಮುಖವನ್ನು ಸುಕ್ಕಿಸಿಕೊಳ್ಳುವಂತೆ ಮಾಡುವ ಹುಳಿಯನ್ನು ಕಳೆದು ಅರಳುವಂತೆ ಮಾಡುವ ಸಿಹಿಯನ್ನು ಮೈಗೂಡಿಸುವದಕ್ಕಾಗಿ ಮಾವಿನ ಮರವನ್ನು ಕಶೀಮಾಡುವಂತೆ ಉಬ್ಬುತಗ್ಗುಗಳನ್ನುಂಟುಮಾಡುವ ಸುಖದುಃಖಗಳನ್ನು ಕಳೆದು ಉತ್ಸಾಹವನ್ನುಂಟು ಮಾಡುವ ಶುದ್ಧಸುಖವನ್ನು ಮೈಗೂಡಿಸಬೇಕಾದರೆ ಮನಸ್ಸನ್ನು ಕಶೀಮಾಡಬೇಕು.

ಲೋಕದಲ್ಲಿ ಶರೀರದ ಮೇಲೆಯೂ ಇಂದ್ರಿಯಗಳ ಮೇಲೆಯೂ ನಮ್ಮ ಆಳಿಕೆಯನ್ನು ಬಲಾತ್ಕಾರದಿಂದಲೂ ಉಪಯೋಗಿಸಬಹುದು. ಮನಸ್ಸಿನ ಮೇಲೆ ನಮ್ಮ ಕೈ ಸಾಗುವದು ಸುಲಭವಲ್ಲ. ಆದ್ದರಿಂದ ಆ ಕಷ್ಟಕ್ಕೆ ಮೈಗೊಡಲಾರದೆ ಜನರಿಗೆ ಆ ಕೆಲಸದ ಅಗತ್ಯವೇ ಇಲ್ಲವೆಂದು ತೋರಬಹುದು. 'ಹೇಗೆಂದರೆ ಎರಡನೆಯ

ವಸ್ತುಗಳೆಲ್ಲ ನಮ್ಮ ಸುಖದುಃಖಗಲಿಗೆ ನೆಪಮಾತ್ರಕ್ಕೆ ಕಾರಣಗಳಾದರೂ ಅವು ನಮಗೆ ಹೊರಗಿನಿಂದ ಬಂದವುಗಳೆಂದು ಸಿದ್ಧವಾಗುವದಷ್ಟೆ. ಆ ಎರಡನೆಯವುಗಳು ನಮ್ಮ ಸ್ವರೂಪವಂತೂ ಅಲ್ಲವೆಂದು ಹಿಂದೆಯೇ ಬಂದಿರುವದು. ಆದ್ದರಿಂದ ನೀರಿಗೆ ಹೊರಗಿನಿಂದ ಬಂದ ಬಿಸಿಯು ತನಗೆ ತಾನೆ ಆರಿಹೋಗುವಂತೆ ನಮ್ಮ ಸ್ವರೂಪದಿಂದಲ್ಲದೆ ಹೊರಗಿನಿಂದ ಬಂದ ಸುಖದುಃಖಗಳು ತಾವಾಗಿಯೇ ಹೋಗುವ ವೆಂದು ಮನಸ್ಸು ಹೇಳಬಹುದು. ನಿಜ. ನೀರಿಗೆ ಹೊರಗಿನಿಂದ ಬಂದ ಬಿಸಿ ತನಗೆ ತಾನೆ ಆರಿಹೋಗುವುದು. ಆದರೆ ನಾವು ಆ ನೀರನ್ನು ಒಲೆಯ ಮೇಲಿನಿಂದ ಇಳಿಸಿ ಬೆಂಕಿಯ ಶಾಖಕ್ಕೆ ದೂರವಾಗಿ ಇರಿಸಿರಬೇಕಾಗುವದು. ಏಕೆಂದರೆ: ಒಲೆಯ ಮೇಲಿದ್ದಷ್ಟೂ ಅದರ ಬಿಸಿ ಏರುತ್ತಲೆ ಇರುವದು. ಅದರಂತೆ ನಾವು ನಮ್ಮ ಮನಸ್ಸನ್ನು ಅದಕ್ಕೆ ತಾಪವನ್ನು ಕೊಡುವ ಸಂಗತಿಗಳಿಂದ ದೂರವಾಗಿ ಇರಿಸಿದರೆ ಮಾತ್ರ ಅದರಲ್ಲಿರುವ ಸುಖದುಃಖಗಳು ಮೆಲ್ಲಮೆಲ್ಲಗೆ ತಮಗೆ ತಾವೆ ಹೋಗಬಹುದು. ಆ ಕೆಲಸವನ್ನು ನಾವು ಮಾಡದಿದ್ದರೆ ನಮ್ಮ ಸುಖದುಃಖಗಳು ಕಡಿಮೆಯಾಗುವ ಆಸೆ ಇಲ್ಲ. ಮನಸ್ಸಿನ ತಾಪದ ಕಾರಣಗಳು ಯಾವವು? ನಮ್ಮ ಸ್ವರೂಪದ ನಿಜವಾದ ನೆಲೆಯನ್ನು ನಾವು ಅರಿಯದಿರುವದು ಒಂದನೆಯದು. ಅದನ್ನು ಅರಿಯದ್ದರಿಂದ ಎರಡನೆಯ ವಸ್ತುಗಳೆಲ್ಲ ನಾವು ಹೇಗೊ ಹಾಗೆ ನಿಜವಾದವುಗಳೆಂದು ಮೋಸಹೋಗಿ ಅವುಗಳಿಂದ ನಮಗೆ ಸುಖವಾಗುವದೆಂದು ಕನವರಿಸುತ್ತ ಅವುಗಳನ್ನು ಬಯಸಿ ಬಾಯಿನೀರು ಸುರಿಸುವದು ಎರಡನೆಯದು. ಆ ಬಯಕೆ ಬಲಿಯುತ್ತಲೆ ಅದನ್ನು ಕೈಗೂಡಿಸಿಕೊಳ್ಳುವದಕ್ಕಾಗಿ ಬಗೆಬಗೆಯಾಗಿ ದುಡಿದು ದಣಿಯುವದು ಮೂರನೆ ಯದು. ಈ ಮೂರೂ ನಮ್ಮ ಮನಸ್ಸಿನ ತಾಪದ ಕಾರಣಗಳು. ಈ ಮೂರರ ಸೋಂಕಿ ನಿಂದ ಮನಸ್ಸನ್ನು ದೂರಮಾಡಿದರೆ ಮಾತ್ರ ಇನ್ನೇನನ್ನೂ ನಾವು ಮಾಡದಿದ್ದರೂ ನಮ್ಮ ಸುಖದುಃಖಗಳು ತಮ್ಮಷ್ಟಕ್ಕೆ ತಾವೆ ಮೈಗುಂದುತ್ತ ಹೋಗಬಹುದು.

ಇನ್ನು ಆ ಮೂರು ಕಾರಣಗಳಿಂದ ಮನಸ್ಸನ್ನು ದೂರಪಡಿಸುವದು ಹೇಗೆ? ಇದಕ್ಕೂ ಉತ್ತರವಿದೆ. ಮನಸ್ಸು ಹೊರಗಣ ವಿಷಯಗಳ ವಿಚಾರಗಳನ್ನೆ ಹಂಬಲಿಸುತ್ತಿದ್ದಷ್ಟೂ ಆ ಮೂರು ಕಾರಣಗಳೂ ಹುರಿಗೂಡಿಕೊಳ್ಳುತ್ತ ದುಃಖವೆಂಬ ಬೆಂಕಿಗೆ ತುಪ್ಪವನ್ನೆರೆಯುವವು. ಇಲ್ಲಿ ದುಃಖವೆಂಬ ಮಾತಿನಲ್ಲಿ ಸುಖವೆಂಬರ್ಥವೂ ಸೇರಿರುವದೆಂದು ತಿಳಿಯಬೇಕು. ಏಕೆಂದರೆ ಸುಖವೆಂಬುದು ದುಃಖದ ಬೀಜವೆಂದು ಈಗ ತಾನೆ ತೋರಿಸಿದ್ದೇವೆ. ಈ ಅಭಿಪ್ರಾಯವನ್ನು ಮುಂದೆಯೂ

ಅನ್ವಯಿಸಿಕೊಳ್ಳಬೇಕು. ಇದನ್ನರಿತು ಮೊದಲು ಮನಸ್ಸನ್ನು ಹೊರಗಣ ವಿಷಯಗಳಿಂದ ಹಿಂದಿರುಗಿಸಬೇಕು. ಆದರೆ ಮನಸ್ಸು ಯಾವ ಹಂಬಲೂ ಇಲ್ಲದೆ ಎಂದಿಗೂ ಇರಲಾರದು. ಆದ್ದರಿಂದ ಅದಕ್ಕೆ ಆತ್ಮ ಸ್ವರೂಪದ ವಿಚಾರವಾದ ಹಂಬಲಿಕೆಯ ಬಲವನ್ನು ಕೊಡಬೇಕು. ಮನುಷ್ಯನು ಆತ್ಮನ ವಿಚಾರವನ್ನೆ ಗುರುಗಳಿಂದ ಕೇಳುತ್ತ ಅದನ್ನೆ ತನ್ನ ಮನಸ್ಸಿನಲ್ಲಿ ಅಳೆದು ಹೊಯ್ಯುತ್ತ ಅದನ್ನೆ ಎಡೆಬಿಡದೆ ನೆನೆಯುತ್ತ ಇರುವ ಹಂಬಲವನ್ನು ಹಚ್ಚಿಕೊಂಡರೆ ತನ್ನ ತಾಪದ ಕಾರಣಗಳಿಂದ ತಾನು ದೂರನಾಗುವನು. ಆಗ ಅವನ ಮನಸ್ಸಿನ ದುಃಖವು ತನ್ನ ಇರುವಿಕೆಯನ್ನು ಕಳೆದುಕೊಳ್ಳುತ್ತ ಬರುವದು. ಇದೇ ಮನಸ್ಸನ್ನು ಕಶೀಮಾಡುವ ಮಾರ್ಗ. ಇದರಿಂದ ಆತ್ಮಸ್ವರೂಪದ ಗುಣಗಳು ಮನಸ್ಸಿನೊಳಕ್ಕೆ ಬಂದು ಮನಸ್ಸಿನ ದುಃಖವೆಂಬ ಹುಳಿಯನ್ನು ಹಾರಿಸಿ ಸುಖವೆಂಬ ಸಿಹಿಯನ್ನುಂಟುಮಾಡುವವು. ಮನಸ್ಸಿನ ತಾಪದ ಕಾರಣಗಳನ್ನು ಹೋಗಲಾಡಿಸುವ ಈ ಸಾಧನಗಳು ಮನಸ್ಸಿಗೆ ಒಗ್ಗಬೇಕಾದರೆ ಅದಕ್ಕಿಂತ ಮೊದಲು ಇಂದ್ರಿಯಗಳಿಗೆ ತೃಪ್ತಿಯಾದರೆ ಸಾಕೆಂಬ ಪಾಪಕ್ಕೆ ಮನಸ್ಸು ಕೊಡದೆ ಈಶ್ವರನ ಒಲುಮೆಯನ್ನು ತಂದುಕೊಡುವ ಪುಣ್ಯವನ್ನೆ ಕೂಡಿಹಾಕಿಕೊಳ್ಳುವವನಾಗಿರಬೇಕಾಗುವದು.

ಇಲ್ಲಿ ಇನ್ನೊಂದು ಪ್ರಶ್ನೆಯುಂಟಾಗುತ್ತದೆ. ಪಾಪಗಳೂ ಪುಣ್ಯಗಳೂ ಎಲ್ಲವೂ ಜಗತ್ತಿನಲ್ಲಿ ಸೇರಿದವುಗಳು. ಜಗತ್ತು ಬರೀ ತೋರಿಕೆಯದಾದಮೇಲೆ ಪಾಪವನ್ನು ಬಿಡುವದೂ ಪುಣ್ಯವನ್ನು ಮಾಡುವದೂ ಏಕೆ? ಇದಕ್ಕೆ ಕಾರಣವಿದೆ. ಪಾಪಗಳು ಮನುಷ್ಯನನ್ನು ದುಃಖಕ್ಕೆ ಗುರಿಮಾಡುವವಲ್ಲದೆ ಮನಸ್ಸನ್ನು ಮಸುಕುಮಾಡಿ ಆತ್ಮ ಸ್ವರೂಪವನ್ನು ತಿಳಿಯದಿರುವಂತೆ ಕೆಡಿಸುವವು. ಆದ್ದರಿಂದ ಅವುಗಳನ್ನು ಬಿಡಬೇಕು. ಪುಣ್ಯಗಳು ಮನಸ್ಸಿನ ಆ ಕೆಟ್ಟಕಲೆಗಳನ್ನು ಅಳಿಸಿ ತಮ್ಮ ಪ್ರಭಾವದ ಒಳ್ಳೇ ಹೊಳಪುಗೊಟ್ಟು ಆತ್ಮಸ್ವರೂಪವನ್ನು ತಿಳಿಯುವ ಯೋಗ್ಯತೆಯನ್ನುಂಟುಮಾಡುವವು. ಆದ್ದರಿಂದ ಅವುಗಳನ್ನು ಮಾಡಬೇಕು. ಇದರಿಂದ ಮುಳ್ಳನ್ನು ಮುಳ್ಳಿಂದ ತೆಗೆದಂತೆ ಪಾಪವನ್ನು ಪುಣ್ಯದಿಂದ ಕಳೆದೊಗೆದಂತಾಗುವದು. ಇಲ್ಲಿ ತಿಳಿಯಬೇಕಾದದ್ದಿನ್ನೊಂದಿದೆ. ಜಗತ್ತು ಬರೀ ತೋರಿಕೆಯದೆಂದು ಮನಸ್ಸಿಗೆ ಆಳವಟ್ಟಮೇಲೆ ಈ ಪ್ರಶ್ನೆಯನ್ನು ಮಾಡಬಹುದೆ ಹೊರತು ಅದಿನ್ನೂ ಬರೀ ಮಾತಾಗಿರುವಾಗ ಈ ಪ್ರಶ್ನೆ ಸಲ್ಲುವದಿಲ್ಲ. ಜಗತ್ತು ಬರೀ ತೋರಿಕೆಯದೆಂದು ಮನಸ್ಸಿಗೆ ಅಳವಟ್ಟಾಗ ಅವನು ತನಗೆ ಯಾವ ಕರ್ಮದ ಸಂಬಂಧವೂ ಇಲ್ಲದವನಾಗುವನು. ಆಗ ಅವನು ಬಿಡಬೇಕಾದದ್ದೂ ಇಲ್ಲ; ಮಾಡಬೇಕಾದದ್ದೂ ಇಲ್ಲ.

ಇರಲಿ. ದುಃಖಕ್ಕೆಲ್ಲ ಪಾಪವೇ ಕಾರಣವಾದ್ದರಿಂದ ಪಾಪವನ್ನು ಬಿಡುವದೊಂದೇ ಸಾಕೆಂದೂ ಪುಣ್ಯವನ್ನು ಮಾಡುವ ಅಗತ್ಯವಾಗಲಿ ಅಥವಾ ಆತ್ಮವಿಚಾರವನ್ನು ಕೇಳುವದೇ ಮೊದಲಾದ ಸಾಧನಗಳನ್ನು ಮೈಗೂಡಿಸಿಕೊಳ್ಳುವ ಅವಶ್ಯಕತೆಯಾಗಲಿ ಇಲ್ಲವೆಂದು ಕೂಡ ಒಮ್ಮೆ ತೋರಬಹುದು. ಮನಸ್ಸಿನಲ್ಲಿ ಏಳುವ ಪಾಪದ ಉದ್ದೇಶಗಳನ್ನು ತಳಕ್ಕೆ ತುಳಿಯುವದಕ್ಕೆ ಸಾಧನವಾಗಿ ಪುಣ್ಯವೂ ಬೇಕೇಬೇಕು. ಆದರೆ ಪುಣ್ಯವು ಆತ್ಮಸ್ವರೂಪದ ನೆಲೆಯನ್ನರಿಯುದಿರುವಿಕೆ, ಅದರಿಂದ ಕಾಣಿಸಿಕೊಳ್ಳುವ ಬಯಕೆ ಮತ್ತು ಅದರ ಸೆಳೆತಕ್ಕೆ ಸಿಕ್ಕಿ ಕರ್ಮದಲ್ಲಿ ತೊಡಗುವಿಕೆ- ಇವುಗಳನ್ನು ಹಿಮ್ಮೆಟ್ಟಿಸುವ ಸಾಮರ್ಥ್ಯ ಉಳ್ಳದಲ್ಲ. ಆ ಸಾಮರ್ಥ್ಯವು ಆತ್ಮವಿಚಾರವನ್ನು ಕೇಳುವಿಕೆ ಮೊದಲಾದವುಗಳಿಗೆ ಮೀಸಲು. ಆದ್ದರಿಂದ ಆ ಸಾಧನಗಳನ್ನೂ ಮೈದುಂಬಿಸಿಕೊಳ್ಳಬೇಕು.

ಆತ್ಮನ ವಿಚಾರವನ್ನು ಗುರುಗಳಿಂದ ಕೇಳಿ ಅದನ್ನೆ ತನ್ನ ಮನಸ್ಸಿನಲ್ಲಿ ಅಳೆದುಹೊಯ್ದರೆ ಈ ಎರಡು ಸಾಧನಗಳಿಂದಲೆ ಆತ್ಮಸ್ವರೂಪದ ನೆಲೆಯನ್ನರಿಯದಿರುವಿಕೆ ಮೊದಲಾದವುಗಳೆಲ್ಲ ಕಾಲಿಗೆ ಬುದ್ಧಿಯನ್ನು ಹೇಳಬಹುದಾಗಿರುವಾಗ ಅದನ್ನೆ ಎಡೆಬಿಡದೆ ನೆನೆಯುವ ಸಾಧನವಿನ್ನೇಕೆಂದರೆ ಹೇಳುತ್ತೇವೆ. ಪುಣ್ಯದ ವೇಗವು ಹೆಚ್ಚಾಗಿ ಪಾಪದ ಕಲೆಗಳೆಲ್ಲ ಅಳಿಸಿಹೋಗಿ ಮನಸ್ಸು ಥಳಥಳ ಹೊಳೆಯುತ್ತಿದ್ದರೆ ಮನಸ್ಸಿನ ತಾಪದ ಕಾರಣಗಳನ್ನು ಹಿಮ್ಮೆಟ್ಟಿಸುವದಕ್ಕೆ ಮೊದಲನೆ ಎರಡು ಸಾಧನಗಳು ಕೂಡ ಬೇಕಾಗಿಲ್ಲ. ಗುರುಗಳಿಂದ ಆತ್ಮವಿಚಾರವನ್ನು ಕೇಳಿದ ಮಾತ್ರದಿಂದಲೆ ಆ ಕಾರಣಗಳು ಹಿಮ್ಮೆಟ್ಟುವವು. ಹೀಗಿರುವಾಗ ಕೇಳಿದ ವಿಷಯವನ್ನು ಮನಸ್ಸಿನಲ್ಲಿ ಅಳೆದುಹೊಯ್ಯುವ ಕೆಲಸವನ್ನು ಮಾಡಿದರಂತು ಅದರ ವಿಷಯವಾದ ಸಂಶಯಗಳೆಲ್ಲ ಹೋಗಿ ತಾಪದ ಕಾರಣಗಳು ಹೇಳುವದಕ್ಕೆ ಹೆಸರಿಲ್ಲದಂತಾಗಲೇಬೇಕು. ಹಾಗೆ ಅದ ಪಕ್ಷದಲ್ಲಿ ಅದನ್ನು ಎಡೆಬಿಡದೆ ನೆನೆಯುವ ಅಗತ್ಯವಿರುವದಿಲ್ಲ. ಹಾಗೆ ಆಗುವ ಸಂಭವವು ಕೂಡ ಕಡಿಮೆ. ಏಕೆಂದರೆ: ಕೇಳಿದ ವಿಷಯವನ್ನು ಮನಸ್ಸಿನಲ್ಲಿ ಅಳೆದುಹೊಯ್ಯುವ ಕೆಲಸವನ್ನು ಮಾಡಿದ್ದರಿಂದ ಸಾಮಾನ್ಯವಾಗಿ ಬಾಯಿಬಿಟ್ಟು ಹೇಳುವದಕ್ಕೆ ಬರುವ ಸಂಶಯಗಳು ಮಾತ್ರ ಹೋಗುವವು. ಇನ್ನು ಕೆಲವು ಸಂಶಯಗಳು ಮುಸುಕಿನೊಳಗಣ ಗುದ್ದಿನಂತೆ ಒಳಗೇ ನಮ್ಮನ್ನು ಹಣ್ಣುಮಾಡುತ್ತಿರುವವು. ಅದು ಹೇಗೆಂದರೆ: ಜಗತ್ತೆಲ್ಲ ಬರೀ ಕನಸಿನ ತೋರಿಕೆಯೆಂದು ಗುರುಗಳು ತಮ್ಮ ಉಪದೇಶದ ಬೀಜವನ್ನು ನಮ್ಮ ಕಿವಿಯಲ್ಲಿ ಬಿತ್ತುತ್ತಾರೆ. ಇಷ್ಟುಮಾತ್ರದಿಂದ ನಾವು ಎಚ್ಚರದ ಜಗತ್ತನ್ನು ಕನಸಿನ ಜಗತ್ತಿನಂತೆ

ಕಾಣುತ್ತೇವೊ? ಇಲ್ಲ. ಅದರ ಮೇಲೆ ಬಾಯಿಬಿಟ್ಟು ಹೇಳುವದಕ್ಕೆ ಬರುವ ಎಷ್ಟೋ ಸಂಶಯಗಳು ನಾನುತಾನೆಂದು ತಲೇ ಎತ್ತುವವು. ಆಗ ಆ ವಿಚಾರವನ್ನು ತನ್ನ ಯುಕ್ತಿಯಿಂದ ಅಳೆದುಹೊಯ್ದರೆ ಆ ಸಂಶಯಗಳೆಲ್ಲ ಮಾಯವಾಗುವವು. ಆಗಲಾದರೂ ಎಚ್ಚರದ ಜಗತ್ತು ಕನಸಿನ ಜಗತ್ತಿನಂತೆ ಕಾಣುವದೊ? ಕಂಡರೆ ಅವನು ಧನ್ಯನೇ ಸರಿ. ಅವನಿನ್ನೇನೂ ಮಾಡಬೇಕಾದದ್ದಿಲ್ಲ. ಆದರೆ ಅವನ ಬಾಯಿಂದ ಬೇರೆ ಯಾವ ಸಂಶಯಗಳೂ ಹೊರಬೀಳದಿದ್ದರೂ ಮನಸ್ಸಿನೊಡನೆ ಬಹುಕಾಲದಿಂದ ಕೂಡಿನಡೆದು ಅದರಲ್ಲಿ ಬೇರುಬಿಟ್ಟುಕೊಂಡಿರುವ ಜಗತ್ತಿನ ವಸ್ತುಗಳ ಸಂಬಂಧವು ಅವನಿಗರಿವಿಲ್ಲದಂತೆ 'ಅದು ಕನಸಿನ ಜಗತ್ತಿಗೆ ಸರಿ'ಯೆಂಬ ಅಭಿಪ್ರಾಯವನ್ನು ಮರೆಮಾಡಿ ಬಸವನ ಹಿಂದಿನ ಬಾಲದಂತೆ ತನ್ನ ಹಿಂದೆ ಕರೆದೊಯ್ಯುವದು. ಈ ಸುಳಿಯಿಂದ ತಪ್ಪಿಸಿಕೊಳ್ಳುವದಕ್ಕಾಗಿ ಅವನು ಆತ್ಮವಸ್ತುವನ್ನು ಎಡೆಬಿಡದೆ ನೆನೆಯುವದರ ಮೂಲಕ ಮನಸ್ಸಿಗೆ ಆತ್ಮವಸ್ತುವಿನ ಸಂಬಂಧವನ್ನು ಬಲಪಡಿಸಬೇಕು. ಇದು ಬಲವಾದಷ್ಟೂ ಅದರಲ್ಲಿರುವ ಜಗತ್ತಿನ ವಸ್ತುಗಳ ಸಂಬಂಧವು ಅಲ್ಲಿಯೇ ಮೈಗರೆಯುವದು. ಹೀಗೆ ಮನಸ್ಸಿಗೆ ಆತ್ಮನ ಸಂಬಂಧವನ್ನು ಮೈದುಂಬಿಸಿಕೊಂಡವನ ಮುಂದೆ ಮಾತ್ರ ಬರೀ ತೋರಿಕೆಯದಾದ ಎಚ್ಚರದ ಜಗತ್ತು ತನ್ನ ಹಾವಭಾವ ವಿಲಾಸಗಳನ್ನು ತೋರಿಸುವದಕ್ಕೆ ನಾಚಿಗೊಂಡು ತನ್ನ ಬಾಲವನ್ನು ಮುದುರಿಕೊಂಡು ಮೂಲೆಗೆ ಸರಿಯುವದು. ಆಗ ಅವನಿಗೆ ಎಚ್ಚರದ ಜಗತ್ತು ಕನಸಿನ ಜಗತ್ತಿನಂತೆಯೆಂಬ ಮಾತು ಅರ್ಥವತ್ತಾಗುವದು. ಮೊದಲನೆ ಎರಡು ಸಾಧನಗಳಿಂದ ಮನಸ್ಸಿನ ದೊಡ್ಡದೊಡ್ಡ ಎಷ್ಟೋ ಹೊಲಸುಗಳು ತೊಳೆದುಹೋಗಿರುವವಾದರೂ ಮನಸ್ಸಿನ ಒಳಕ್ಕೆ ಇಳಿದುಕೊಂಡು ಸಂದಿಗೊಂದಿಗಳಲ್ಲೆಲ್ಲ ಸೇರಿಕೊಂಡಿರುವ ಹೊಲಸುಗಳೆಲ್ಲ ಹೋಗಬೇಕಾದರೆ ಆ ಮನಸ್ಸಿನಲ್ಲಿ ಎಡೆಬಿಡದ ಧ್ಯಾನವೆಂಬ ಪ್ರವಾಹವು ಭೋರ್ಗರೆಯುತ್ತ ನುಗ್ಗಬೇಕು. ಆಗ ಸಂದಿಗೊಂದಿಗಳ ಹೊಲಸುಗಳು ಕೂಡ ಕೊಚ್ಚಿಕೊಂಡು ಹೋಗುವವು. ಆಗ ಮನಸ್ಸು ಪೂರ್ಣ ಶುದ್ಧವಾಗಿ ಅದರಲ್ಲಿ ಆತ್ಮನ ಅರಿವು ಚೆನ್ನಾಗಿ ಮೈಗೂಡುವದು. ದೇಹ ಮೊದಲಾದವುಗಳೆ ನಾನೆಂಬ ಬುದ್ಧಿ ಎಷ್ಟು ಬಲವಾಗಿತ್ತೊ ಅಷ್ಟು ಬಲವಾಗಿ ಆಗ ನಾನು ಬ್ರಹ್ಮವೆನಿಸುವದು. ಇದೇ ಮನುಷ್ಯನು ಪಡೆಯಬೇಕಾದ ದೊಡ್ಡ ಫಲ. ಇದಕ್ಕಿಂತ ದೊಡ್ಡದೆಂಬುದಿನ್ನಿಲ್ಲವೇ ಇಲ್ಲ. ಈಗ ಮನುಷ್ಯನು ತನ್ನ ಉನ್ನತಿಯ ತುಟ್ಟತುದಿಯನ್ನು ಮುಟ್ಟಿದಂತಾಯಿತು. ಎರಡನೆಯವುಗಳನ್ನೆಲ್ಲ ಈಶ್ವರ ಭಾವನೆಯಿಂದ ಮುಚ್ಚಿಹಾಕಿಬಿಡಬೇಕೆಂಬ (11ನೆ ಪುಟದಲ್ಲಿರುವ) ಸಿದ್ಧಾಂತದ ಮಾತು ಈಗ ಅರ್ಥವತ್ತಾಗಿ ತನ್ನ ಫಲವನ್ನು ಅನುಭವಕ್ಕೆ ತಂದು ಕೊಟ್ಟಂತಾಯಿತು. ಆದ್ದರಿಂದ

ಆತ್ಮನನ್ನು ಎಡೆಬಿಡದೆ ನೆನೆಯುವ ಮೂರನೆ ಸಾಧನವೂ ಬೇಕು. ಮೂರು ಸಾಧನಗಳೂ ಅಳವಟ್ಟರೆ ಮನಸ್ಸು ಚೆನ್ನಾಗಿ ಕಶಿಯಾಗಿ ತನ್ನಲ್ಲಿದ್ದ ದುಃಖವನ್ನೆಲ್ಲ ಕಳೆದುಕೊಂಡು ಆತ್ಮನ ಸಂಬಂಧದಿಂದ ಶುದ್ಧಸುಖದ ಗಟ್ಟಿಯಾಗಿ ಹತ್ತು ದಿಕ್ಕುಗಳನ್ನೂ ಸುಖಮಯವಾಗಿ ಮಾಡುವದು.

*****

## 15. ತಿಳಿದವರ ನೋಟ

ತನ್ನ ಸ್ವರೂಪದ ನೆಲೆಯನ್ನು ತಾನು ಅರಿತರೆ ಹತ್ತುದಿಕ್ಕುಗಳೂ ಸುಖಮಯವಾಗುವವೆಂಬ ಮಾತಿನಲ್ಲಿ ಒಮ್ಮೆಗೇ ಹೆಚ್ಚಿನ ಭರವಸೆ ಉಂಟಾಗಿರಬಹುದು. ಏಕೆಂದರೆ: ನಾವು ಹಿಂದಿನ ಎಷ್ಟೋ ಜನ್ಮಗಳಲ್ಲಿ ಮಾಡಿದ ಎಷ್ಟೋ ಕರ್ಮಗಳು. ನಮಗೆ ಫಲವನ್ನು ಕೊಡುವದಕ್ಕೆ ರಾಶಿರಾಶಿಯಾಗಿ ಬಿದ್ದಿರುವವು; ಇವುಗಳ ಜೊತೆಗೆ ನಾವು ಹೊಸ ಹೊಸದಾಗಿ ಕರ್ಮಗಳನ್ನು ಮಾಡುತ್ತಲೂ ಇರುವೆವು; ಈ ಜನ್ಮದಲ್ಲಿ ನಮಗೆ ಫಲವನ್ನು ಕೊಡುವದಕ್ಕೆ ಆರಂಭವಾಗಿರುವ ಕರ್ಮದ ಫಲವನ್ನಂತು ನಾವು ತಪ್ಪಿಸಿಕೊಳ್ಳುವದಕ್ಕೇ ಆಗುವದಿಲ್ಲ. ಒರಳೊಳಗೆ ತಲೆಯನ್ನಿಟ್ಟಮೇಲೆ ಒನಕೆಯ ಪೆಟ್ಟನ್ನು ತಪ್ಪಿಸಿಕೊಳ್ಳಲಾದೀತೇ? 'ಮಾಡಿದ್ದುಣ್ಣೊಮಾರಾಯ' ಎಂಬಂತೆ ನಾವು ಮಾಡಿದ ಕರ್ಮಗಳನ್ನೆಲ್ಲ ನಾವು ಉಣ್ಣಲೇಬೇಕು. ಇಷ್ಟೆಲ್ಲ ಕರ್ಮಗಳ ಫಲಗಳನ್ನು ಉಂಡು ತೀರಿಸುವ ಸಡಗರದಲ್ಲಿ ನಮಗೆ ಹತ್ತು ದಿಕ್ಕುಗಳೂ ಸುಖಮಯವಾಗುವದು ಹೇಗೆ?

ಈ ಮಾತು ಆತ್ಮನ ಅರಿವಾಗದೆ ಇರುವಾಗ ಆಡುವದಕ್ಕೆ ತಕ್ಕದ್ದೆ ಹೊರತು ಆತ್ಮನನ್ನು ಅರಿತವನ ಬಾಯಲ್ಲಿ ಹೀಗೆ ಹೊರಡುವದೇ ಇಲ್ಲ. ಆತ್ಮನ ನೆಲೆಯನ್ನರಿಯುವದಕ್ಕೆ ಮುಂಚೆ ದೇಹ ಮೊದಲಾದವುಗಳೇ ತಾನೆಂದೂ ತಾನು ಏನನ್ನಾದರೂ ಯಾವಾಗಲೂ ಮಾಡುತ್ತಿರುವವನೆಂದೂ ಅಭಿಪ್ರಾಯವಿರುವದು. ದೇಹ ಮೊದಲಾದವುಗಳು ಏನನ್ನಾದರೂ ಮಾಡುತ್ತಿರುವವುಗಳೆಂಬುದೇ ನಿಜ. ಅವುಗಳನ್ನು ತಾನೆಂದು ತಿಳಿದಾಗ ತಾನು ಏನನ್ನಾದರೂ ಮಾಡುತ್ತಿರುವವನೆಂದು ತಿಳಿದದ್ದು ಸಹಜವಾಗಿದೆ. ತಾನು ಮಾಡಿದ್ದನ್ನು ತಾನು ಉಂಡು ತೀರಿಸಬೇಕಾದದ್ದರಿಂದ ತಾನು ದೇಹ ಮೊದಲಾದವುಗಳೆಂದು ತಿಳಿದಿರುವವರೆಗೂ ತಾನು ಕರ್ಮವೆಂಬ ಮೃತ್ಯುವಿನ ದವಡೆಯೊಳಗೆ ಸಿಕ್ಕಿರುವ ಪ್ರಾಣಿಯಾಗಿರುವನು.

ಆಗ ಅವನಿಗೆ ಹತ್ತುದಿಕ್ಕುಗಳೂ ದುಃಖಮಯವಾಗಿರುವವೇ ಹೊರತು ಸುಖಮಯವೆಂದಿಗೂ ಅಲ್ಲ. ಆತ್ಮನ ನೆಲೆಯನ್ನರಿತಮೇಲೆ ಈ ಭಯವಿಲ್ಲ. ಏಕೆಂದರೆ: ತಾನು ದೇಹ ಮೊದಲಾದವುಗಳಿಗೆಲ್ಲ ಪ್ರೇರಕನಾಗಿ ಇರವಿನ, ಅರಿವಿನ ಮತ್ತು ಸುಖದ ಸ್ವರೂಪನೆಂದು ಈಗ ಚೆನ್ನಾಗಿ ಗೊತ್ತಾಗಿರುವದು. ಈ ಸ್ವರೂಪಕ್ಕೆ ಕರ್ಮದ ಸೋಂಕೇ ಇಲ್ಲ. ಕರ್ಮಗಳೆಂಬುವೆಲ್ಲ ದೇಹ ಮೊದಲಾದವುಗಳಿಗೇ ಮೀಸಲು. ಆದ್ದರಿಂದ ಈಗ ಕರ್ಮವೆಂಬ ಮೃತ್ಯುದೇವತೆಯು ಅವನೆದುರಿಗೆ ನಿಲ್ಲಲಾರದೆ ಇದ್ದಲ್ಲಿಯೇ ಮಾಯವಾಗುವಳು. ಹೀಗೆ ಆತ್ಮನ ನೆಲೆಯನ್ನರಿತವನು ಕರ್ಮವೆಂಬ ಮೃತ್ಯುದೇವತೆಯನ್ನೆ ನುಂಗಿ ನೀರು ಕುಡಿದವನಾಗಿರುವನು. ತಾನು ಕರ್ಮಗಳ ಸೋಂಕಿಲ್ಲದ ಇರವಿನ, ಅರಿವಿನ ಮತ್ತು ಸುಖದಸ್ವರೂಪನೆಂಬ ತಿಳಿವಳಿಕೆಯು ಅವನ ಕರ್ಮಗಳನ್ನೆಲ್ಲ ಸುಟ್ಟು ಬೂದಿಮಾಡಿರುವದು. ಜಗತ್ತೆಲ್ಲ ಮೃತ್ಯುದೇವತೆಯ ಹಲ್ಲುಸಂದಿಯಲ್ಲಿ ಸಿಕ್ಕಿಕೊಂಡು ಕಣ್ಣು ಕಣ್ಣು ಬಿಡುತ್ತಿರುವಾಗ ಆತ್ಮನ ನೆಲೆಯನ್ನರಿತವನು ತಾನು ಆ ಹಲ್ಲುಗಳನ್ನು ಮುರಿದುಹಾಕಿ ಸ್ವತಂತ್ರನಾಗಿ ಹತ್ತುದಿಕ್ಕುಗಳಲ್ಲಿಯೂ ತನ್ನ ಆನಂದದಿಂದ ತಾನೂ ನಲಿದಾಡುತ್ತಿರುವದೆ ಅವನ ಹೆಚ್ಚುಗಾರಿಕೆ.

ಲೋಕದಲ್ಲಿ ಹುಟ್ಟಿದವನು ಸಾಯುವದು ಕಾಣುತ್ತಿರುವಾಗ ಆತ್ಮನನ್ನು ತಿಳಿದವನು ಮೃತ್ಯುದೇವತೆಯ ದವಡೆಯೊಳಗಿಂದ ಹೊರಬಿದ್ದವನೆಂಬ ಮಾತನ್ನು ಹೇಗೆ ನಂಬಬಹುದೆಂದರೆ ವಿಚಾರ ಮಾಡಿ ನೋಡಿರಿ. ಈ ಮಾತು ಕೂಡ ಆತ್ಮನ ಸ್ವರೂಪವನ್ನರಿಯದವನ ಬಾಯಿಂದ ಬಂದದ್ದು. ಹುಟ್ಟುವದೂ ಸಾಯುವದೂ ದೇಹವೇ ಹೊರತು ಇರವಿನ ಅರಿವಿನ ಮತ್ತು ಸುಖದ ಸ್ವರೂಪವಲ್ಲ. ಆತ್ಮನನ್ನು ತಿಳಿದವನು ದೇಹವೇ ತಾನೆಂಬ ಅಭಿಪ್ರಾಯವನ್ನು ದಾಟಿ ಇರವು ಮೊದಲಾದವುಗಳ ಸ್ವರೂಪವನ್ನು ತಾನೆಂದು ತಿಳಿದಿರುವನು. ದೇಹವು ಸತ್ತುಹೋದರೆ ಇರವು ಮೊದಲಾದವುಗಳ ಸ್ವರೂಪಕ್ಕೇನು ಧಕ್ಕೆ? ಆದ್ದರಿಂದ ಆತ್ಮನನ್ನು ತಿಳಿದವನಿಗೆ ಸಾವಿಲ್ಲ.

ದೇಹವು ಸತ್ತರೂ ದೇಹದೊಳಗಿದ್ದ ಪ್ರಾಣವಾಯು ಮೊದಲಾವುಗಳು ಹೊರಬಿದ್ದು ಎಲ್ಲೆಲ್ಲಿಯೋ ಸುತ್ತಾಡಿ ಮತ್ತೊಂದು ದೇಹದೊಳಕ್ಕೆ ಇಳಿದು ಬರುವವೆಂಬ ಕಥೆಯನ್ನು ಕೇಳಿ ಆತ್ಮನನ್ನು ತಿಳಿದವನ ಪ್ರಾಣವಾಯುವೂ ಅವನನ್ನು ಮುಂದೆ ಮತ್ತೊಂದು ದೇಹದ ಬಲೆಗೆ ಕೆಡಹುವದೆಂದು ತಿಳಿಯಬಾರದು. ಆತ್ಮನ ನೆಲೆಯನ್ನರಿಯದವನು ಸಾಯುವಾಗ ಅವನ ಪ್ರಾಣವಾಯು ಆ ದೇಹದಿಂದ ಹೊರಬಿದ್ದು ಅರಸನ ಕಡೆಯ ಕಾವಲುಗಾರನಂತೆ ಆ ಜೀವನ ಹಿಂದೆಯೇ ಇದ್ದು

ಅವನನ್ನು ತನ್ನ ಹಿಡಿತದಲ್ಲಿಟ್ಟುಕೊಂಡು ಎಲ್ಲೆಲ್ಲಿಯೋ ಸುತ್ತಿಸಿ ಅಮೇಲೆ ಮತ್ತೊಂದು ದೇಹದೊಳಕ್ಕೆ ಬೀಳಿಸುವದು ನಿಜ. ಆ ಜೀವನು ಕರ್ಮದ ಕಟ್ಟಿಗೊಳಪಟ್ಟವನಾಗಿ ಬೇರೆಬೇರೆ ಲೋಕಗಳಲ್ಲಿ ಸುತ್ತತಕ್ಕವನಾದ್ದರಿಂದ ಪ್ರಾಣವಾಯು ಅವನ ಬೆನ್ನ ಹಿಂದೆಯೇ ಎಡೆಬಿಡದೆ ಕಾವಲಿದ್ದು ಅವನನ್ನು ಸುತ್ತಿಸುವದು. ಆತ್ಮನನ್ನು ತಿಳಿದವನು ಕರ್ಮದ ಕಣ್ಣಿಯನ್ನು ಹರಿದೊಗೆದು ಎಲ್ಲೆಲ್ಲಿಯೂ ತುಂಬಿಕೊಂಡಿರುವ ಸ್ವರೂಪದವನಾಗಿದ್ದು ಎಲ್ಲಿಯೂ ತಿರುಗುವವನಲ್ಲವಾದ್ದರಿಂದ ಅವನ ಪ್ರಾಣವಾಯು ಅವನ ದೇಹದಿಂದ ಹೊರಬೀಳುವದೇ ಇಲ್ಲ. ಪ್ರಾಣವು ಹೊರಬೀಳುವದನ್ನು ನೋಡಿತಾನೆ ಜನರು ಅವನನ್ನು ಸತ್ತನೆನ್ನಬೇಕು. ಆತ್ಮನನ್ನು ತಿಳಿದವನ ಪ್ರಾಣವು ಅವನನ್ನು ಎಲ್ಲಿಗೂ ಕರೆದುಕೊಂಡು ಹೋಗಬೇಕಾದದ್ದಿಲ್ಲವಾದ್ದರಿಂದ ಅವನ ದೇಹದಿಂದ ಹೊರಬೀಳುವದೇ ಇಲ್ಲ. ಅದು ಇದ್ದಲ್ಲಿಯೇ ಮಂಜಿನಂತೆ ಕರಗುವದು. ಇನ್ನು ಅವನು ಸತ್ತನೆನ್ನುವದರಲ್ಲೇನರ್ಥವಿದೆ? ಆದ್ದರಿಂದ ಆತ್ಮನನ್ನು ತಿಳಿದವನಿಗೆ ಸಾವಿಲ್ಲ. ಭಗವಂತನಿಂದ ಹೊರಬಿದ್ದವನಂತೆ ಬಂದಿದ್ದ ಅವನು ಭಗವಂತನೊಡನೆ ಒಂದಾಗಿ ಬಿಡುವನು. ಪಶುಪಕ್ಷಿಗಳು ಸುಖದುಃಖಗಳನ್ನನುಭವಿಸುತ್ತಿರಬಲ್ಲವೆ ಹೊರತು ಹೀಗಾಗಲಾರವು. ಪ್ರಯತ್ನಮಾಡಿದರೆ ಮನುಷ್ಯನೊಬ್ಬನು ಮಾತ್ರ ಹೀಗಾಗಬಲ್ಲನು. ಮನುಷ್ಯನಾಗಿ ಹುಟ್ಟಿದ್ದಕ್ಕೆ ಹೀಗಾದರೆ ಸಾರ್ಥಕ.

ಆತ್ಮನನ್ನು ತಿಳಿದವನ ಪ್ರಾಣವಾಯು ಹೊರಬೀಳದಿರುವದನ್ನು ನೋಡಿ ಅವನಿಗೆ ಸಾವಿನ ದುಃಖವಿಲ್ಲವೆಂದರೂ ಆತ್ಮನನ್ನು ತಿಳಿದಮೇಲೆಯೂ ಬದುಕಿರುವವರೆಗೂ ಅವನು ಉಳಿದವರಂತೆ ಸುಖ ದುಃಖಗಳಿಗೆ ತಲೆಗೊಡುತ್ತಿರುವಂತೆ ಕಾಣುವದಕ್ಕೇನು ಸಮಾಧಾನವೆಂದರೆ ಹೊರಗಣವರಾದ ತಿಳಿಯದ ಜನರಿಗೆ ಅವನು ಹಾಗೆ ಕಾಣುತ್ತಿರುವದು ನಿಜ; ದೇಹವೇ ಆತ್ಮನೆಂಬ ಅವರ ತಿಳಿವಳಿಕೆಯೇ ಅದಕ್ಕೆ ಕಾರಣ. ಆತ್ಮನನ್ನು ತಿಳಿದವನ ದೇಹವು ಸುಖದುಃಖಗಳಿಗೆ ತಲೆಗೊಡುತ್ತಲೆ ಇರುವದು. ಆತ್ಮನನ್ನು ತಿಳಿದವನು ಆ ದೇಹವನ್ನು ತಾನೆನ್ನುವವನಾಗಿರದೆ ತಾನು ಸುಖದುಃಖಗಳಿಲ್ಲದ ಇರುವಿಕೆ ಮೊದಲಾದವುಗಳ ಸ್ವರೂಪನೆಂದು ತಿಳಿದುಕೊಂಡಿರುವದರಿಂದ ಆ ಸುಖ ದುಃಖಗಳು ಅವನಿಗಿಲ್ಲ. ಆ ಸುಖಗಳನ್ನೆಲ್ಲ ಅವನು ನೋಡಿದರೂ ಅವನ ನೋಟವೆ ಬೇರೆ ಜಾತಿಯಾಗಿರುವದರಿಂದ ಅವು ಅವನನ್ನು ತಾಕುವದಿಲ್ಲ. ಆ ಸುಖದುಃಖಗಳನ್ನೆಲ್ಲ ಅವನು ಸತ್ಯವೆಂದು ತಿಳಿದರೆ ಅವು ಅವನ ಮೇಲೆ ಕೈಯನ್ನು ನಡೆಸುತ್ತಿದ್ದವು. ಅವನು

ಅವುಗಳನ್ನು ಬರೀ ತೋರಿಕೆಯವುಗಳೆಂದು ತಿಳಿದಿರುವದರಿಂದ ಅವುಗಳಿಂದ ಅವನಲ್ಲಿ ಯಾವ ಬದಲಾವಣೆಯೂ ಆಗುವದಿಲ್ಲ. ಯಾವಾಕೆಯನ್ನು ನಮ್ಮೆಲ್ಲರ ತಾಯಿಯೆಂದು ತಿಳಿದಿರುತ್ತೇವೊ ಅಂಥ ಸೀತಾದೇವಿಯನ್ನು ನಾಟಕದಲ್ಲಿ ಚಮತ್ಕಾರವಾದ ರೀತಿಯಿಂದ ರಾವಣನು ಸೆಳೆದೊಯ್ಯುತ್ತಿದ್ದರೆ ಅದನ್ನು ನೋಡುವವರು 'ಇನ್ನೊಮ್ಮೆ, ಇನ್ನೊಮ್ಮೆ' ಎನ್ನುತ್ತಾರೆ. ಬೀದಿಯಲ್ಲಿ ಒಬ್ಬಾಕೆಯ ಮೇಲೆ ಒಬ್ಬ ತುಂಟನು ಕೈ ಮಾಡುತ್ತಿದ್ದರೆ ಅದನ್ನು ನೋಡಿದವರು ಒಡನೆ ತಳಮಳಗೊಂಡು ಅವನ ಮೈಮೇಲೆ ಬೀಳುತ್ತಾರೆ. ಇದಕ್ಕೇನು ಕಾರಣ? ನಾಟಕದಲ್ಲಿ ನಡೆಯುವದೆಲ್ಲ ಬರೀ ತೋರಿಕೆಯೆಂದು ಗೊತ್ತಿರುವದರಿಂದ ಅದನ್ನು 'ಇನ್ನೊಮ್ಮೆ' ಎನ್ನುತ್ತಾರೆ. ಬೀದಿಯದು ನಿಜವೆಂದು ತಿಳಿದಿರುವದರಿಂದ ಅದಕ್ಕೆ ಪ್ರತಿಯನ್ನು ಮಾಡುತ್ತಾರೆ. ಇದರಂತೆ ಜಗತ್ತನ್ನೆಲ್ಲ ಬರೀ ತೋರಿಕೆಯದೆಂದು ನೋಡುವ ನೋಟದವನ ಮೇಲೆ ಸುಖದುಃಖಗಳ ಕೈ ನಡೆಯುವದಿಲ್ಲ. ಆದ್ದರಿಂದ ಅವನು ಸುಖದುಃಖಗಳನ್ನು ನೋಡಿದರೂ ಅವು ಅವನಿಗಿಲ್ಲ. ಒರಳೊಳಗೆ ತಲೆಯನ್ನಿಟ್ಟಿದ್ದರೂ ಒನಕೆಯ ಪೆಟ್ಟನ್ನು ತಪ್ಪಿಸಿಕೊಳ್ಳುವ ಚತುರನಂತೆ ಜಗತ್ತಿನಲ್ಲಿದ್ದರೂ ಜಗತ್ತಿನ ಸುಖದುಃಖಗಳನ್ನು ತಾಕಿಸಿಕೊಳ್ಳದಿರುವ ತಿಳಿವು ಉಳ್ಳವನ ಚತುರತೆಯು ಲೋಕಕ್ಕೇ ಬೆರಗನ್ನುಂಟುಮಾಡುವದು. ಇಂಥವನು ನರನೆ? ನರರೂಪದಲ್ಲಿದ್ದರೂ ನಾರಾಯಣ!

*****